## ಅಧ್ಯಾಯ – ೮

# ಆರ್ಥಿಕ ಪ್ರವೃತ್ತಿಗಳು

**ಯಾ**ವುದೇ ಪ್ರದೇಶದ ಸಮಗ್ರ ಪ್ರಗತಿ ಅಲ್ಲಿನ ಆರ್ಥಿಕ ಅಭಿವೃದ್ಧಿಯನ್ನು ಅವಲಂಬಿಸಿರುತ್ತದೆ. ಆಯಾ ಪ್ರದೇಶಗಳಲ್ಲಿ ಲಭ್ಯವಿರುವ ನೈಸರ್ಗಿಕ ಸಂಪತ್ತು, ಮಾನವ ಸಂಪತ್ತು, ಕೃಷಿ, ಕೈಗಾರಿಕೆ, ಬ್ಯಾಂಕಿಂಗ್, ವಾಣಿಜ್ಯ–ವ್ಯಾಪಾರ, ಸಾರಿಗೆ ಮತ್ತು ಸಂಪರ್ಕ, ಉಳಿತಾಯ ಕ್ಷಮತೆ, ಬಂಡವಾಳ ಹೂಡಿಕೆ, ನಗರೀಕರಣ, ಉದ್ಯೋಗ, ಕೂಲಿ (ಮಜೂರಿ), ತಲಾದಾಯ, ಅಗತ್ಯ ವಸ್ತುಗಳ ಬೆಲೆ(ದರ), ಜನರ ಜೀವನಮಟ್ಟ ಮುಂತಾದ ಹತ್ತು ಹಲವು ಕ್ಷೇತ್ರಗಳಲ್ಲಿ ಕಂಡುಬರುವ ಏರಿಳಿತಗಳನ್ನು ಆಧರಿಸಿದ ಆರ್ಥಿಕ ಪ್ರವೃತ್ತಿಗಳು ಆಯಾ ಪ್ರದೇಶಗಳ ಆರ್ಥಿಕ ಮುನ್ನಡೆಯನ್ನು ನಿರ್ದೇಶಿಸುತ್ತವೆ. ಲಭ್ಯವಿರುವ ನೈಸರ್ಗಿಕ ಹಾಗೂ ಆರ್ಥಿಕ ಸಂಪನ್ಮೂಲಗಳ ಸಮಗ್ರ ಬಳಕೆಗೆ ಪೂರಕವಾದ ಮೂಲಭೂತ ಸೌಕರ್ಯ, ತಂತ್ರಜ್ಞಾನಗಳೇ ಮುಂತಾದ ಅಂಶಗಳು ಆರ್ಥಿಕ ಪ್ರವೃತ್ತಿಯ ದಿಕ್ಕು–ದಿಸೆಯನ್ನು ನಿರ್ದೇಶಿಸುವ ಪ್ರಧಾನ ಅಂಶಗಳಾಗಿದ್ದು, ಆರ್ಥಿಕ ಅಭಿವೃದ್ಧಿ ಸಾಧಿಸುವಲ್ಲಿ ನೆರವಾಗುತ್ತವೆ. ಹೀಗೆ ಸಮಾಜದ ಬದಲಾವಣೆ ಮತ್ತು ಸುಧಾರಣೆಗಳಿಗೆ ಮಾರ್ಗ ಸೂಚಿಗಳಾಗಬಹುದಾದ ಆರ್ಥಿಕ ಪ್ರವೃತ್ತಿಗಳು ಉಡುಪಿ ಜಿಲ್ಲೆಯು ಸರ್ವಾಂಗೀಣ ಬೆಳವಣಿಗೆಯನ್ನು ಸಾಧಿಸುವ ನಿಟ್ಟಿನಲ್ಲಿ ಜಿಲ್ಲೆಯ ವಿವಿಧ ಇಲಾಖೆಗಳು ವಹಿಸಿರುವ ಪಾತ್ರವನ್ನು ಇಲ್ಲಿ ಬಿಂಬಿಸಲು ಯತ್ನಿಸಲಾಗಿದೆ.

ಬಹು ಹಿಂದಿನಿಂದಲೂ ಕೃಷಿ ಪ್ರಧಾನವಾಗಿರುವ ಈ ಜಿಲ್ಲೆಯು, ಸಂಪದ್ಭರಿತ ಅರಣ್ಯ ಪ್ರದೇಶವನ್ನೂ ಹೊಂದಿದೆ. ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣ ೩,೮೮೦ ಚದರ ಕಿ.ಮೀ.ಗಳಾಗಿದ್ದು, ಇದು ರಾಜ್ಯದ ಒಟ್ಟು ವಿಸ್ತೀರ್ಣದ ಶೇ.೨.೦೨ರಷ್ಟಾಗಿದ್ದು, ೨೬ನೇ ಸ್ಥಾನ ಪಡೆದುಕೊಂಡಿದೆ. ಇಲ್ಲಿಯ ಹೆಚ್ಚಿನ ಜನ ಗ್ರಾಮಾಂತರ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ಜಿಲ್ಲೆಯಲ್ಲಿ ೨೦೦೧ರ ಜನಗಣತಿಯಂತೆ, ೧೧,೧೨,೨೪೩ ಲಕ್ಷ ಜನರಿದ್ದು, ಇವರಲ್ಲಿ ೯,೦೫,೮೯೦ (ಶೇ.೮೧.೪೫) ಲಕ್ಷ ಜನರು ಗ್ರಾಮಾಂತರ ಪ್ರದೇಶಗಳಲ್ಲಿಯೂ, ೨,೦೬,೩೫೩ (ಶೇ. ೧೮.೫೫) ಲಕ್ಷ ಜನರು ನಗರ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ಜಿಲ್ಲೆಯಲ್ಲಿ ಸಾಕ್ಷರತೆಯ ಪ್ರಮಾಣ ಶೇ. ೭೯.೮೭ (ರಾಜ್ಯದಲ್ಲಿ ಶೇ ೬೭.೦೪) ಆಗಿದೆ. ಪುರುಷರ ಸಾಕ್ಷರತೆ ಶೇ. ೮೯.೭ (ರಾಜ್ಯದಲ್ಲಿ ಶೇ. ೭೬.೨೯) ಆಗಿದ್ದು, ಮಹಿಳೆಯರು ಶೇ. ೭೪.೦೨ (ರಾಜ್ಯದಲ್ಲಿ ಶೇ. ೫೭.೪೫) ಸಾಕ್ಷರತೆಯನ್ನು ಪಡೆದುಕೊಂಡಿದ್ದಾರೆ. ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ ೪,೮೮,೧೭೩ ಒಟ್ಟು ಕೆಲಸಗಾರರು ಹಾಗೂ ೬,೨೪,೦೭೦ (ಶೇ. ೫೬.೧೧) ಕೆಲಸಗಾರರಲ್ಲದವರಿದ್ದರು. ೪,೧೭,೨೮೭ (ಶೇ. ೮೫.೪೮) ಮುಖ್ಯ ಕೆಲಸಗಾರರಲ್ಲಿ, ೮೩,೩೦೫ (ಶೇ. ೧೯.೯) ಮಂದಿ ವ್ಯವಸಾಯಗಾರರು, ೫೭,೯೩೩ (ಶೇ. ೧೩.೮೭)

ಮಂದಿ ಕೃಷಿಕಾರ್ಮಿಕರು, ೫೪,೭೮೧(ಶೇ. ೧೩.೧೩) ಮಂದಿ ಗೃಹಕೈಗಾರಿಕೆಗಳಲ್ಲಿ ಹಾಗೂ ೨,೨೧,೩೦೮ (ಶೇ. ೫೩.೦೪) ಮಂದಿ ಇತರೆ ಕೆಲಸಗಾರರಿದ್ದರು. ಅಲ್ಲದೆ ೭೦,೮೮೬ ಮಂದಿ ಸೀಮಾಂತ (Marginal) ಕೆಲಸಗಾರರಲ್ಲಿ ೧೩,೯೫೩ (ಶೇ.೧೯.೬೮) ಮಂದಿ ವ್ಯವಸಾಯಗಾರರು, ೨೯,೮೬೮ (ಶೇ.೪೨.೧೩) ಮಂದಿ ಕೃಷಿಕಾರ್ಮಿಕರು, ೭,೦೪೦ (ಶೇ.೯.೯೩) ಮಂದಿ ಗೃಹಕೈಗಾರಿಕೆಗಳಲ್ಲಿ ಹಾಗೂ ೨೦,೦೨೫ (ಶೇ.೨೮.೦೪) ಮಂದಿ ಇತರೆ ಕೆಲಸಗಾರರಿರುವುದು ಅಂಕಿ-ಅಂಶಗಳಿಂದ ಸ್ಪಷ್ಟವಾಗಿದೆ. (ಆವರಣದಲ್ಲಿ ನೀಡಿರುವ ಅಂಕಿ-ಅಂಶಗಳು ಶೇಕಡವಾರು ಪ್ರಮಾಣವನ್ನು ಬಿಂಬಿಸುತ್ತವೆ).

ಜಿಲ್ಲೆಯಲ್ಲಿ ೨೦೦೬ರ ಮಾರ್ಚ್ ಅಂತ್ಯಕ್ಕೆ ೧೪ ಮಧ್ಯಮ ಪ್ರಮಾಣದ ಕಾರ್ಖಾನೆಗಳಿದ್ದು, ಮಣಿಪಾಲ್ ಸೆಕ್ಯುರಿಟಿ ಪ್ರಿಂಟರ್ಸ್ ಮಣಿಪಾಲ್; ಕೆನರಾ ಸೆಕ್ಯೂರಿಟಿ ಪ್ರೆಸ್ ಮಣಿಪಾಲ್; ಮಣಿಪಾಲ್ ಪವರ್ ಪ್ರೆಸ್, ಮಣಿಪಾಲ್; ಮಣಿಪಾಲ್ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್ (ಲಿ), ಮಣಿಪಾಲ್; ಇಂಡಿಯನ್ ಪ್ಲೈವುಡ್ ಮ್ಯಾನುಫ್ಯಾಕ್ಚರಿಂಗ್ ಕಂ. ಹಂಗರಕಟ್ಟೆ, ಉಡುಪಿ; ಮಣಿಪಾಲ್ ಪ್ರಕಾಶನ ಪ್ರೈ (ಲಿ) ಮಣಿಪಾಲ್; ದಕ್ಷಿಣ ಕನ್ನಡ ಸಹಕಾರಿ ಸಕ್ಕರೆ ಕಾರ್ಖಾನೆ ಬ್ರಹ್ಮಾವರ (ಪ್ರಸ್ತುತ ಮುಚ್ಚಿದೆ); ಬಾಳಿಗಾ ಎಕ್ಸ್‌ಪೋರ್ಟ್ ಪ್ರೈ (ಲಿ) ಉಡುಪಿ; ಲೂಸಿ ಅಂಡ್ ಲೂಸಿ ಫಿಷರ್ಸ್ ಪ್ರೈ.ಲಿ. ಮಲ್ಪೆ; ಅಮಿತ ಜುಲೈನ್ ಮರೈನ್ ಪ್ರೈ (ಲಿ) ಹಿರಿಯಡ್ಕ; ಕೆಲ್‌ಟಿಕ್ ಎಂಜಿನಿಯರ್ಸ್ ಪ್ರೈ (ಲಿ) ವರಂಗಾ; ಕಾರ್ಕಳ ತಾಲೂಕು; ಬೆಸ್ಟ್ ಸೆಲ್ಲರ್ಸ್ ಮಣಿಪಾಲ್; ಲ್ಯಾಮಿನಾ ಫೌಂಡರೀಸ್ ನಿಟ್ಟೆ ಕಾರ್ಕಳ; ಶುಬೋಷಿಕಾ ಐವೆ (ಪ್ರೈ). ಮೈಯೂರ್ ಕಾರ್ಕಳ ತಾಲೂಕು ಮುಂತಾದವುಗಳಾಗಿವೆ. ಇವುಗಳಲ್ಲಿ ಒಟ್ಟು ೫,೬೦೮.೭೧ ಲಕ್ಷ ರೂ.ಗಳ ಬಂಡವಾಳ ತೊಡಗಿಸಿದ್ದು, ೨,೯೬೦ ಮಂದಿಗೆ ಉದ್ಯೋಗ ಒದಗಿಸಲಾಗಿದೆ.

ಇದೇ ಅವಧಿಯಲ್ಲಿ ೭,೧೮೩ ಸಣ್ಣ ಹಾಗೂ ಅತೀ ಸಣ್ಣ ಕೈಗಾರಿಕಾ ಘಟಕಗಳಿದ್ದು, ಇವುಗಳಲ್ಲಿ ೩೧,೧೮೯.೨೭ ಲಕ್ಷ ರೂ.ಗಳ ಬಂಡವಾಳ ತೊಡಗಿಸಲಾಗಿದೆ. ಇವು ೪೪,೦೭೬ ಮಂದಿಗೆ ಉದ್ಯೋಗಾವಕಾಶ ಕಲ್ಪಿಸಿವೆ. ಈ ಉದ್ಯಮಗಳು ಜಿಲ್ಲೆಯ ಆರ್ಥಿಕ ಪ್ರಗತಿಗೆ ಸಹಕಾರಿಯಾಗಿವೆ. ಇದಕ್ಕೆ ಪೂರಕವಾಗಿ ಕೈಗಾರಿಕೆಗಳಿಗೆ ಒತ್ತಾಸೆ ನೀಡುವ ಸಲುವಾಗಿ ಜಿಲ್ಲೆಯ ಎಲ್ಲಾ ಕೈಗಾರಿಕಾ ಪ್ರದೇಶಗಳನ್ನು ೨೦೦೧-೦೬ ಕೈಗಾರಿಕಾ ನೀತಿಯಂತೆ ಹಿಂದುಳಿದ ಕೈಗಾರಿಕಾ ಪ್ರದೇಶಗಳೆಂದು ಘೋಷಿಸಲಾಗಿದೆ. ಈ ವಲಯದ ವ್ಯಾಪ್ತಿಯಲ್ಲಿ ಬರುವ ಸಣ್ಣ ಹಾಗೂ ಅತಿಸಣ್ಣ ಕೈಗಾರಿಕೆಗಳಿಗೆ ಸ್ಥಿರಾಸ್ತಿಯ ಮೇಲೆ ಶೇ. ೨೦ರಷ್ಟು ಅಥವಾ ಗರಿಷ್ಟ ಹತ್ತು ಲಕ್ಷದವರೆಗೆ ಬಂಡವಾಳ ಹೂಡಿಕೆಗೆ ಅನುದಾನ ನೀಡಲಾಗುತ್ತದೆ. ಈ ವಲಯದಲ್ಲಿ ಬರುವ ಎಲ್ಲಾ ಕೈಗಾರಿಕೆಗಳು (ಸಣ್ಣ ಹಾಗೂ ಅತಿಸಣ್ಣ, ಬೃಹತ್ ಮತ್ತು ಮಧ್ಯಮ) ಐದು ವರ್ಷಗಳವರೆಗೆ ಪ್ರವೇಶ ತೆರಿಗೆಯಿಂದ ವಿನಾಯಿತಿ ಪಡೆಯುತ್ತವೆ. ಅಲ್ಲದೆ ಎಲ್ಲಾ ಕೈಗಾರಿಕೆಗಳು ಶೇ. ೧೦೦ಕ್ಕೆ ೧೦೦ರಷ್ಟು ಸ್ಟಾಂಪ್ ಡ್ಯೂಟಿ ವಿನಾಯ್ತಿ ಪಡೆಯುತ್ತವೆ ಹಾಗೂ ಇವು ನೋಂದಣಿ ಶುಲ್ಕ ರೂ. ೧೦೦೦ಕ್ಕೆ ರೂ. ಒಂದರಂತೆ ಮಾತ್ರ ನೀಡಬೇಕಾಗುತ್ತದೆ. ೧೦೦ ಕೋಟಿಗಳಿಗೂ ಅಧಿಕ ಬಂಡವಾಳ ತೊಡಗಿಸುವ ಕೈಗಾರಿಕೆಗಳನ್ನು 'ಬೃಹತ್' (Mega) ಕೈಗಾರಿಕೆಗಳೆಂದು ಕರೆದು ಅವುಗಳಿಗೆ ಪ್ರವೇಶ ತೆರಿಗೆ ವಿನಾಯ್ತಿ, ಸ್ಟಾಂಪ್ ಡ್ಯೂಟಿ ಹಾಗೂ ನೋಂದಣಿ ಶುಲ್ಕ ರಿಯಾಯ್ತಿಗಳನ್ನು ಅವುಗಳು ಸ್ಥಾಪನೆಗೊಳ್ಳುವ ವಿವಿಧ ವಲಯಗಳ ಆಧಾರದ ಮೇಲೆ ನೀಡಲಾಗುವುದು.

ಬ್ಯಾಂಕಿಂಗ್, ವಾಣಿಜ್ಯ ಹಾಗೂ ವ್ಯಾಪಾರ ರಂಗಗಳಲ್ಲಿನ ಪ್ರಗತಿಯಲ್ಲಿ ಜಿಲ್ಲೆಯು ಅಗ್ರ ಪಂಕ್ತಿಯಲ್ಲಿದೆ. ಜಿಲ್ಲೆಯಲ್ಲಿ ೨೦೦೫ರ ಮಾರ್ಚ್ ಅಂತ್ಯಕ್ಕೆ ೨೨೨ ವಾಣಿಜ್ಯ ಬ್ಯಾಂಕುಗಳು, ೧೧ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳಿದ್ದು, ೩,೮೮,೧೨೨ ಲಕ್ಷ ರೂ.ಗಳ ಠೇವಣಿ ಸ್ವೀಕರಿಸಿ, ೧,೪೬,೨೩೫ ಲಕ್ಷ ರೂ.ಗಳ ಸಾಲ ನೀಡಿದ್ದವು. ೩೨ ನಗರ ಪ್ರದೇಶದ ಸಹಕಾರಿ ಬ್ಯಾಂಕುಗಳಿದ್ದು, ೧೪,೮೨೫.೪೭ಲಕ್ಷ ರೂ.ಗಳ ಠೇವಣಿ ಸ್ವೀಕರಿಸಿ, ೧೩,೨೪೬.೯೦ಲಕ್ಷ ರೂ.ಗಳ ಸಾಲ ನೀಡಿದ್ದವು. ಅಲ್ಲದೆ ೫೩ ಇತರೆ ಸಹಕಾರಿ ಬ್ಯಾಂಕುಗಳು (ರೂ. ೧,೭೫೩.೨೮ ಲಕ್ಷ ಸಾಲ), ಮೂರು ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳು (ರೂ. ೨,೩೮೭.೦೮ ಲಕ್ಷ ಸಾಲ), ೧೯ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳು (ರೂ. ೧೩,೮೯೪.೯೧ ಲಕ್ಷ ಸಾಲ) ಹಾಗೂ

ಮೂರು ಕರ್ನಾಟಕ ರಾಜ್ಯ ಕೃಷಿ ಸಹಕಾರ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳು (ರೂ. ೪೫೪.೨೫ ಲಕ್ಷ ಸಾಲ) ಜಿಲ್ಲೆಯ ಆರ್ಥಿಕಾಭಿವೃದ್ಧಿಗೆ ಸಹಕರಿಸುತ್ತಿವೆ. ಜಿಲ್ಲೆಯಲ್ಲಿ ಹಾಲು ಉತ್ಪಾದಕರ ಸಂಘಗಳಂತಹವು ಗ್ರಾಮೀಣರ ಆರ್ಥಿಕ ಬದುಕಿಗೆ ನವಚೇತನವನ್ನು ನೀಡಿವೆ.

ಸಾಂಪ್ರದಾಯಿಕ ವ್ಯಾಪಾರ ಕೇಂದ್ರಗಳಾದ ಸಂತೆ, ರೈತಸಂತೆಗಳು ಹಾಗೂ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು (ಎ.ಪಿ.ಎಂ.ಸಿ) ರೈತರಿಗೆ ಉತ್ತಮ ಬೆಲೆ ದೊರಕಿಸುವಲ್ಲಿ ನೆರವಾಗುತ್ತಿವೆ. ಜಿಲ್ಲೆಯಲ್ಲಿ ಉತ್ತಮ ಸಾರಿಗೆ ಸಂಪರ್ಕ ಜಾಲವಿದೆ. ಜಿಲ್ಲೆಯಲ್ಲಿ ೨೦೦೫ರ ಮಾರ್ಚ್ ಅಂತ್ಯಕ್ಕೆ ೧೦೦.೮೬ ಕಿ.ಮೀ. ಉದ್ದದ ಬ್ರಾಡ್‌ಗೇಜ್ ರೈಲುಮಾರ್ಗವಿದ್ದು, ಎಂಟು ರೈಲ್ವೇ ನಿಲ್ದಾಣಗಳಿವೆ. ೧೩೯ಕಿಮೀ ಉದ್ದದ ರಾಷ್ಟ್ರೀಯ ಹೆದ್ದಾರಿಗಳು, ೩೫೨.೫೦ ಕಿ.ಮೀ. ಉದ್ದದ ರಾಜ್ಯ ಹೆದ್ದಾರಿಗಳು, ೭೩೪.೬೮ ಕಿ.ಮೀ ಉದ್ದದ ಜಿಲ್ಲಾ ಮುಖ್ಯ ರಸ್ತೆಗಳು, ಎಂಟು ಕಿ.ಮೀ. ಉದ್ದದ ಇತರ ಮುಖ್ಯ ರಸ್ತೆಗಳು, ೧೧೬೧.೯೫ ಕಿ.ಮೀ. ಉದ್ದದ ಹಳ್ಳಿ ರಸ್ತೆಗಳು, ೨೦೫.೭೮ ಕಿ.ಮೀ. ಉದ್ದದ ತಾಲೂಕು ಅಭಿವೃದ್ಧಿ ಮಂಡಳಿ ರಸ್ತೆಗಳು, ೮೬.೪೫ ಕಿ.ಮೀ. ಉದ್ದದ ಮುನಿಸಿಪಾಲಿಟಿ ರಸ್ತೆಗಳಿದ್ದು, ಜಿಲ್ಲೆಯ ಅಭಿವೃದ್ಧಿಗೆ ಸಹಕಾರಿಯಾಗಿವೆ.

ಜಿಲ್ಲೆಯಲ್ಲಿ ವಾಡಿಕೆ ಮಳೆ ೪,೨೯೮ ಮಿ.ಮೀ. ಆಗಿದ್ದು, ೨೦೦೫ರಲ್ಲಿ ವಾಸ್ತವಿಕ ಮಳೆ ೩,೫೪೮ ಮಿ.ಮೀ. ಆಗಿತ್ತು. ಇದು ತಾಲೂಕಿನಿಂದ ತಾಲೂಕಿಗೆ ವ್ಯತ್ಯಾಸಗೊಳ್ಳುತ್ತದೆ. ಕಾರ್ಕಳ ತಾಲೂಕಿನಲ್ಲಿ ೪,೦೮೧ ಮಿ.ಮೀ. ವಾಸ್ತವ ಮಳೆಯಾಗಿದ್ದರೆ, ಉಡುಪಿ ತಾಲೂಕಿನಲ್ಲಿ ೩,೧೬೫ಮಿ.ಮೀ. ಹಾಗೂ ಕುಂದಾಪುರದಲ್ಲಿ ೩,೩೯೭ ಮಿ.ಮೀ. ಮಳೆಯಾಗಿದೆ. ಜಿಲ್ಲೆಯಲ್ಲಿ ೧೨೪ ದಿನ ಮಳೆಯಾಗಿದ್ದು, ಮಳೆ ಅಳೆಯುಲು ೨೭ ವೃಷ್ಟಿಮಾಪನ ಕೇಂದ್ರಗಳಿವೆ. ಜಿಲ್ಲೆಯಲ್ಲಿ ೨೦೦೪-೦೫ರಲ್ಲಿ ವಿವಿಧ ಮೂಲಗಳಿಂದ ನಿವ್ವಳ ನೀರಾವರಿ ಪ್ರದೇಶ ಹೀಗಿದೆ. ೧,೮೪೮ ಹೆಕ್ಟೇರು ಪ್ರದೇಶ ಕೆರೆಗಳಿಂದ ನೀರಾವರಿಯಾಗಿದ್ದರೆ, ೧೫,೮೫೯ ಹೆಕ್ಟೇರು ಪ್ರದೇಶ ಬಾವಿಗಳಿಂದ, ೪೪೫ ಹೆಕ್ಟೇರು ಪ್ರದೇಶ ಕೊಳವೆ ಬಾವಿಗಳಿಂದ, ೫,೨೨೧ ಹೆಕ್ಟೇರು ಪ್ರದೇಶ ಏತನೀರಾವರಿಗಳಿಂದ ಹಾಗೂ ೮,೮೫೬ ಹೆಕ್ಟೇರು ಪ್ರದೇಶ ಇತರೆ ಮೂಲಗಳಿಂದ ನೀರಾವರಿಯಾಗಿದೆ. ಜಿಲ್ಲೆಯಲ್ಲಿ ಅಡಿಕೆ, ತೆಂಗು, ಗೇರು, ರಬ್ಬರ್, ಕೋಕೋ, ಬಾಳೆ, ಮಾವು, ಹಲಸು, ಸಿಹಿಗೆಣಸು, ಮರಗೆಣಸು, ಅನಾನಾಸು, ವಿಳ್ಯದೆಲೆ, ಕರಿಮೆಣಸು ಹಾಗೂ ಕಬ್ಬು ಇಲ್ಲಿನ ಮುಖ್ಯ ಬೆಳೆಗಳಾಗಿದ್ದು, ಜಿಲ್ಲೆಯ ಆರ್ಥಿಕ ಪ್ರಗತಿಗೆ ಪೂರಕವಾಗಿವೆ. ಜಿಲ್ಲೆಯಲ್ಲಿ ೨೦೦೧ರ ಜನಗಣತಿಯಂತೆ ಆರು ಪಟ್ಟಣಗಳಿದ್ದವು.

ಜಿಲ್ಲಾ ಆದಾಯವನ್ನು ವೃದ್ಧಿಸುವಲ್ಲಿ ಪ್ರಾಥಮಿಕ ವಲಯಕ್ಕೆ (ಕೃಷಿ) ಸರಿಸಾಟಿಯಾಗಿ ದ್ವಿತೀಯ ವಲಯ (ಕೈಗಾರಿಕೆ) ಹಾಗೂ ತೃತೀಯ ವಲಯ (ಸೇವಾ ಕ್ಷೇತ್ರ)ಗಳ ಆದಾಯವು ತೀವ್ರವಾಗಿ ಹೆಚ್ಚಳಗೊಳ್ಳುತ್ತಿರುವುದು ಮಹತ್ವದ ಬೆಳವಣಿಗೆಯಾಗಿದೆ. ಜಿಲ್ಲೆಯು ಅಸ್ತಿತ್ವಕ್ಕೆ ಬಂದ ನಂತರ ೧೯೯೮-೯೯ರಲ್ಲಿ ಜಿಲ್ಲಾ ಆದಾಯಕ್ಕೆ ಪ್ರಾಥಮಿಕ ವಲಯದ ಕೊಡುಗೆ ೩,೫೭೧ ಲಕ್ಷ ರೂ.ಗಳಾಗಿದ್ದರೆ, ಇದು ೨೦೦೨-೦೩ರಲ್ಲಿ ೬೮,೫೩೬ ಲಕ್ಷ ರೂ.ಗಳಿಗೆ ಹೆಚ್ಚಳಗೊಂಡಿತು. ಇದೇ ಅವಧಿಗಳಲ್ಲಿ ಕ್ರಮವಾಗಿ ದ್ವಿತೀಯ ವಲಯದ ಕೊಡುಗೆ ೨೮,೫೫೫ ಲಕ್ಷ ರೂ.ಗಳು ಹಾಗೂ ೫೧,೬೦೪ ಲಕ್ಷ ರೂ.ಗಳಾಗಿತ್ತು. ತೃತೀಯ ವಲಯದ ಕೊಡುಗೆ ೮೪,೯೮೯ ಲಕ್ಷ ರೂ.ಗಳು ಹಾಗೂ ೧,೫೬,೮೯೩ ಲಕ್ಷ ರೂ.ಗಳಾಗಿತ್ತು. ಹೀಗೆ ಪ್ರಾಥಮಿಕ ವಲಯಕ್ಕಿಂತ ದ್ವಿತೀಯ ಹಾಗೂ ತೃತೀಯ ವಲಯಗಳ ಆದಾಯ ತೀವ್ರ ಹೆಚ್ಚಳಗೊಳ್ಳುತ್ತಿರುವುದು ಈ ಕ್ಷೇತ್ರಗಳ ಪ್ರಾಮುಖ್ಯತೆ ಗಮನಾರ್ಹವಾಗಿದೆ. ಹಾಗೆಯೇ ೧೯೯೮-೯೯ ಹಾಗೂ ೨೦೦೨-೦೩ರಲ್ಲಿ ಕ್ರಮವಾಗಿ ತಲಾದಾಯ ೧೩,೮೩೧ ರೂ.ಗಳಿಂದ ೨೪,೪೫೦ ರೂ.ಗಳಿಗೆ ಹೆಚ್ಚಳಗೊಂಡಿದ್ದು, ರಾಜ್ಯದಲ್ಲಿ ತಲಾದಾಯದಲ್ಲಿ ಎಂಟನೇ ಸ್ಥಾನದಿಂದ ನಾಲ್ಕನೇ ಸ್ಥಾನಕ್ಕೇರಿರುವುದು ಜಿಲ್ಲೆಯ ಅಭಿವೃದ್ಧಿ ಹಾಗೂ ಜನರ ಜೀವನಮಟ್ಟದ ಸುಧಾರಣೆಯನ್ನು ಬಿಂಬಿಸುತ್ತದೆ.

ಜನರ ಜೀವನಮಟ್ಟವನ್ನು ಸುಧಾರಿಸಲು ಸಮಾಜ ಕಲ್ಯಾಣ ಕಾರ್ಯಕ್ರಮಗಳಾದ ಬಡತನ ನಿವಾರಣೆ, ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ, ಸಂಪೂರ್ಣ ಗ್ರಾಮೀಣ ರೋಜ್‌ಗಾರ್ ಯೋಜನೆ, ಇಂದಿರಾ ಆವಾಸ್ ಯೋಜನೆ, ಜವಾಹರ್ ಗ್ರಾಮ ಸಮೃದ್ಧಿ ಯೋಜನೆ, ಉದ್ಯೋಗ ಭರವಸೆ

ಯೋಜನೆ, ಅಕ್ಷರ ದಾಸೋಹ ಯೋಜನೆ, ಸ್ತ್ರೀಶಕ್ತಿ ಯೋಜನೆ, ಆಶ್ರಯ ಯೋಜನೆ, ಯಶಸ್ವಿನಿ ಜೀವವಿಮೆ, ಸುವರ್ಣಗ್ರಾಮ ಯೋಜನೆ, ನಿರ್ಮಲ ಗ್ರಾಮ ಯೋಜನೆ, ಕುಗ್ರಾಮ–ಸುಗ್ರಾಮ ಯೋಜನೆ ಮತ್ತಿತರ ಹತ್ತು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ಜನರ ಜೀವನಮಟ್ಟ ಸುಧಾರಣೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪ್ರಯತ್ನಿಸುತ್ತಿವೆ.

## ನಗರೀಕರಣ

ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಶೇಕಡ ೩೪ರಷ್ಟು ಜನರು ಪಟ್ಟಣ/ನಗರ ಪ್ರದೇಶಗಳಲ್ಲಿ ವಾಸಿಸುತ್ತಿದ್ದರೆ, ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ ಶೇ. ೧೮.೫೫ರಷ್ಟು ಜನರು ಪಟ್ಟಣ/ನಗರ ಪ್ರದೇಶಗಳಲ್ಲಿ ವಾಸಿಸುತ್ತಿರುವುದು ಕಂಡುಬರುತ್ತದೆ. ವರ್ಷಗಳು ಉರುಳಿದಂತೆ ನಗರ ಜನಸಂಖ್ಯೆಯಲ್ಲಿ ಸತತವಾಗಿ ಹೆಚ್ಚಳವುಂಟಾಗಲು ನಗರ ಪ್ರದೇಶಗಳು ಗ್ರಾಮೀಣ ಪ್ರದೇಶಗಳಿಗಿಂತ ಉತ್ತಮ ಸಾಮಾಜಿಕ–ಆರ್ಥಿಕ ಅವಕಾಶಗಳನ್ನು ಒದಗಿಸುತ್ತಿರುವುದೇ ಪ್ರಮುಖ ಕಾರಣವಾಗಿದೆ. ನಗರ ಬೆಳವಣಿಗೆಯೊಂದಿಗೆ ಸಾಮಾಜಿಕ–ಆರ್ಥಿಕ ಬೆಳವಣಿಗೆಯು ಸಮಾನವಾಗಿ ಏರುತ್ತಿರುವುದು ಗಮನಾರ್ಹವಾಗಿದೆ. ವಿಶ್ವಬ್ಯಾಂಕ್ ಮತ್ತು ಏಷ್ಯನ್ ಅಭಿವೃದ್ಧಿ ಬ್ಯಾಂಕುಗಳಂಥ ಅಂತಾರಾಷ್ಟ್ರೀಯ ಹಣಕಾಸು ನೆರವಿನ ಏಜೆನ್ಸಿಗಳು ತಮ್ಮ ಅನೇಕ ಅಧ್ಯಯನಗಳಲ್ಲಿ ಹಾಗೂ ವರದಿಗಳಲ್ಲಿ ಈ ಅಂಶವನ್ನು ಉಲ್ಲೇಖಿಸಿರುವುದನ್ನು ಗಮನಿಸಬಹುದಾಗಿದೆ. ದೇಶದ ಆರ್ಥಿಕತೆಗೆ ನಗರ ಪ್ರದೇಶಗಳು, ನೀಡಿರುವ ಕೊಡುಗೆಯು ಅವುಗಳ ಗಾತ್ರ ಮತ್ತು ಅವುಗಳ ಸಂಖ್ಯೆಗಿಂತಲೂ ಅಧಿಕವಾಗಿದೆ. ನಗರೀಕರಣ ಮತ್ತು ಆರ್ಥಿಕ ಬೆಳವಣಿಗೆಗಳ ನಡುವೆ ಅವಿನಾಭಾವ ಸಂಬಂಧವಿದೆ. ಸಾರಿಗೆ ಸಂಪರ್ಕಗಳು, ವಿದ್ಯುಚ್ಛಕ್ತಿ, ನೀರು ಪೂರೈಕೆ, ವಸತಿ, ಆರೋಗ್ಯ ರಕ್ಷಣೆ, ಶಿಕ್ಷಣ ಮತ್ತು ಆಸ್ಪತ್ರೆಗಳ ಸೌಲಭ್ಯಗಳಂತಹ ಸಮರ್ಪಕ ನಗರ ಮೂಲ ಸೌಕರ್ಯಗಳು ಇರುವುದರಿಂದ, ಬಂಡವಾಳ ಹೂಡಿಕೆಗಳು, ಪ್ರತಿಭೆಗಳನ್ನು ಆಕರ್ಷಿಸುವುದಲ್ಲದೆ ಸಾಮಾಜಿಕ–ಆರ್ಥಿಕ ಕಾರ್ಯಚಟುವಟಿಕೆಗಳ ಬೆಳವಣಿಗೆಯನ್ನು ನಿರಂತರವಾಗಿರಿಸುತ್ತದೆ. ಕೈಗಾರಿಕೆಗಳು ಮತ್ತು ಆರ್ಥಿಕ ಸೇವೆಗಳು, ಅವುಗಳ ಪ್ರಾರಂಭವಾಗಿರುವಂತಹ ಸ್ಥಳಗಳಲ್ಲಿಯೇ ಹೆಚ್ಚು ಹೆಚ್ಚಾಗಿ ಸಾಂದ್ರವಾಗುವಂತಾಗುತ್ತದೆ. ಹಾಗೇಯೇ ಸಾಮಾಜಿಕ ಮತ್ತು ವೈಜ್ಞಾನಿಕ ಪ್ರತಿಭೆಯೂ ಕೂಡ ಒಂದೇ ಕಡೆಗೆ ಧಾವಿಸುತ್ತವೆ. ಅಂತಹ ಸೌಲಭ್ಯಗಳ ಕೇಂದ್ರೀಕರಣ ಮತ್ತು ತತ್ಸಂಬಂಧಿ ಆರ್ಥಿಕ ಚಟುವಟಿಕೆಗಳು ತಮ್ಮಷ್ಟಕ್ಕೆ ತಾವೇ ಮುಂದಿನ ಬೆಳವಣಿಗೆಗಾಗಿ ಇನ್ನಷ್ಟು ಬೆಂಬಲವನ್ನು ಒದಗಿಸುತ್ತಿರುತ್ತವೆ. ಈ ಹಿನ್ನಲೆಯಲ್ಲಿ ನೋಡಿದಾಗ ದಕ್ಷಿಣ ಕನ್ನಡ ಜಿಲ್ಲೆಯು ನಗರೀಕರಣದ ಬೆಳವಣಿಗೆಯಲ್ಲಿ ಎರಡನೇ ಸ್ಥಾನ ಪಡೆದಿದ್ದು, ಬೆಂಗಳೂರು ನಗರ ಜಿಲ್ಲೆಯು ಮೊದಲ ಸ್ಥಾನ ಪಡೆದಿದೆ. ಪಟ್ಟಣ / ನಗರದ ಸ್ಥಾನಮಾನ ಪಡೆಯಬೇಕಾದರೆ ಅವು ಪಟ್ಟಣ. ಪಂಚಾಯಿತಿ, ಪುರಸಭೆ, ಕಾರ್ಪೊರೇಷನ್, ಕಂಟೋನ್‌ಮೆಂಟ್ ಮಂಡಳಿ ಅಥವಾ ಸೂಚಿತ ಪ್ರದೇಶಗಳಾಗಿರಬೇಕು. ಇಲ್ಲವೆ ಏಕಕಾಲದಲ್ಲಿ ಮುಂದೆ ತೋರಿಸಿರುವ ಮೂರು ಅಂಶಗಳನ್ನು ಒಳಗೊಂಡಿರಬೇಕು. ೧) ಕನಿಷ್ಠ ಐದು ಸಾವಿರ ಜನಸಂಖ್ಯೆ ಹೊಂದಿರಬೇಕು. ೨) ಶೇಕಡಾ. ೭೫ರಷ್ಟು ಪುರುಷರು ವ್ಯವಸಾಯೇತರ ಕ್ಷೇತ್ರಗಳಲ್ಲಿ ದುಡಿಯುತ್ತಿರಬೇಕು ಹಾಗೂ ೩) ಪ್ರತಿ ಚದರ ಕಿ.ಮೀಗೆ ೪೦೦ ಜನಸಾಂದ್ರತೆಯನ್ನು ಹೊಂದಿರಬೇಕು. ಈ ಅಂಶಗಳನ್ನು ಹೊಂದಿದ್ದರೆ, ಅಂತಹ ಪಟ್ಟಣಗಳನ್ನು ಪಟ್ಟಣ ಪ್ರದೇಶವೆಂದು ಕರೆಯಬಹುದು.

ಈಗಿನ ವಿಭಜಿತ ಉಡುಪಿ ಜಿಲ್ಲೆಯಲ್ಲಿ ವರ್ಗ–Iಕ್ಕೆ ಸೇರಿದ ಯಾವುದೇ ಪಟ್ಟಣ ೧೯೦೧ ರಿಂದ ೧೯೯೧ ರವರೆಗೂ ಇರಲಿಲ್ಲ. ವರ್ಗ–Iಕ್ಕೆ ಸೇರಿದ ಪಟ್ಟಣಗಳು ಒಂದು ಲಕ್ಷ ಮತ್ತು ಅದಕ್ಕೂ ಹೆಚ್ಚು ಜನಸಂಖ್ಯೆಯನ್ನು ಹೊಂದಿರಬೇಕು. ೧೯೯೧ರಲ್ಲಿ ಉಡುಪಿಯು ಈ ವರ್ಗಕ್ಕೆ ಸೇರಿದ್ದು, ಉಡುಪಿ (UA) ೧.೧೭,೬೭೪ ಜನಸಂಖ್ಯೆಯನ್ನು ಹೊಂದಿತ್ತು. ಉಡುಪಿಯು ೧೯೦೧ರಲ್ಲಿ ೮,೦೪೧ ಜನಸಂಖ್ಯೆ ಹೊಂದಿ ವರ್ಗ–Vಕ್ಕೂ, ೧೯೧೧, ೧೯೨೧, ೧೯೩೧ ಹಾಗೂ ೧೯೪೧ರ ವರೆಗೂ ಕ್ರಮವಾಗಿ, ೧೦,೮೭೧, ೧೧,೮೮೨, ೧೪,೮೩೩ ಹಾಗೂ ೧೮,೦೪೩ ಜನಸಂಖ್ಯೆ ಹೊಂದಿ ವರ್ಗ–IVಕ್ಕೂ, ೧೯೫೧ ಹಾಗೂ ೧೯೬೧ರಲ್ಲಿ ಕ್ರಮವಾಗಿ ೨೦,೪೫೧ ಹಾಗೂ ೩೫,೨೮೨ ಜನಸಂಖ್ಯೆ ಹೊಂದಿ ವರ್ಗ–IIIಕ್ಕೂ ಸೇರಿತ್ತು.

೫೦,೦೦೦ ದಿಂದ ೯೯,೯೯೯ ಜನಸಂಖ್ಯೆಯನ್ನೊಳಗೊಂಡ ಪಟ್ಟಣವನ್ನು ವರ್ಗ–IIರ ಪಟ್ಟಣ ಎಂದು ವರ್ಗೀಕರಿಸಿದ್ದು, ೧೯೭೧ರಲ್ಲಿ ಈ ಗುಂಪಿಗೆ ಉಡುಪಿ ಸೇರಿದ್ದು, ೫೪,೯೦೯ ಜನಸಂಖ್ಯೆಯನ್ನು ಹೊಂದಿತ್ತು. ೧೯೮೧ರಲ್ಲಿ ೫೯,೭೩೧ ಜನಸಂಖ್ಯೆ ಹೊಂದಿ ಈ ವರ್ಗದಲ್ಲಿಯೇ ಮುಂದಿವರೆಯಿತು. ವರ್ಗ–III ರಲ್ಲಿ ಜನಸಂಖ್ಯೆ ೨೦,೦೦೦ ದಿಂದ ೪೯,೯೯೯ ಇರಬೇಕಾಗಿದ್ದು, ಕುಂದಾಪುರ ೧೯೭೧ರಲ್ಲಿ ಈ ವರ್ಗಕ್ಕೆ ಸೇರಿತ್ತು. ಇದರ ಜನಸಂಖ್ಯೆ ೨೩,೮೩೧ ಆಗಿತ್ತು. ಇದು ೧೯೮೧ರಲ್ಲಿ ೨೮,೩೧೫, ೧೯೯೧ರಲ್ಲಿ ೨೮,೪೭೧ ಹಾಗೂ ೨೦೦೧ರಲ್ಲಿ ಜನಗಣತಿಯಲ್ಲಿ ೨೮,೫೯೧ ಜನಸಂಖ್ಯೆ ಹೊಂದಿ, ಈ ವರ್ಗದಲ್ಲಿಯೇ ಮುಂದುವರೆದಿತ್ತು. ಆದರೆ ಇದು ೧೯೫೧ ಹಾಗೂ ೧೯೬೧ರಲ್ಲಿ ಕ್ರಮವಾಗಿ ೧೬,೧೪೭ ಹಾಗೂ ೧೭,೫೩೮ ಜನಸಂಖ್ಯೆಯನ್ನು ಹೊಂದಿ ವರ್ಗ–IVರ ಗುಂಪಿಗೆ ಸೇರಿತ್ತು. ೧೯೨೧, ೧೯೩೧ ಹಾಗೂ ೧೯೪೧ರಲ್ಲಿ ಕ್ರಮವಾಗಿ ೭೫೭೫, ೮೯೨೩ ಹಾಗೂ ೯೫೩೭ ಜನಸಂಖ್ಯೆ ಹೊಂದಿ, ವರ್ಗ–Vರ ಪಟ್ಟಣಗಳ ವ್ಯಾಪ್ತಿಗೆ ಇದು ಸೇರಿತ್ತು. ೧೦,೦೦೦ ದಿಂದ ೧೯,೯೯೯ ಜನಸಂಖ್ಯೆಯನ್ನು ಹೊಂದಿರುವ ಪಟ್ಟಣವನ್ನು ವರ್ಗ–IVರ ಪಟ್ಟಣ ಎಂದು ವರ್ಗೀಕರಿಸಲಾಗಿದ್ದು, ಬೈಂದೂರು ಈ ವರ್ಗಕ್ಕೆ ಸೇರಿದ ಪಟ್ಟಣವಾಗಿತ್ತು. ಇದರ ಜನಸಂಖ್ಯೆ ೧೯೮೧ ಹಾಗೂ ೧೯೯೧ರಲ್ಲಿ ಕ್ರಮವಾಗಿ ೧೪,೦೭೧ ಹಾಗೂ ೧೬,೪೮೮ ಆಗಿತ್ತು. ಮೂಡಬಿದ್ರಿ ಈ ವರ್ಗಕ್ಕೆ ಸೇರಿದ ಮತ್ತೊಂದು ಪಟ್ಟಣವಾಗಿದ್ದು, ಇದರ ಜನಸಂಖ್ಯೆ ೧೯೮೧, ಹಾಗೂ ೧೯೯೧ ಕ್ರಮವಾಗಿ ೧೩,೫೭೫ ಹಾಗೂ ೧೫,೮೬೮ ಆಗಿದ್ದು, ಪ್ರಸ್ತುತ ಈ ಪಟ್ಟಣವು ಆಗಸ್ಟ್ ೧೯೯೭ ರಿಂದ ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನಿಂದ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲೂಕಿಗೆ ವರ್ಗಾವಣೆಗೊಂಡಿದೆ. ಸಾಲಿಗ್ರಾಮ ಪಟ್ಟಣವು ೧೯೮೧, ೧೯೯೧ ಹಾಗೂ ೨೦೦೧ರಲ್ಲಿ ಕ್ರಮವಾಗಿ ೧೩,೨೨೮ ೧೪,೦೨೦ ಹಾಗೂ ೧೪,೯೬೨ ಜನಸಂಖ್ಯೆಯನ್ನು ಹೊಂದಿದ್ದು ವರ್ಗ–IVಕ್ಕೆ ಸೇರಿತ್ತು. ಗಂಗೊಳ್ಳಿ ಪಟ್ಟಣ ಸಹ ವರ್ಗ–IVರ ಪಟ್ಟಣಗಳ ಗುಂಪಿಗೆ ಸೇರಿದ್ದು, ಇದು ೧೯೮೧ ಹಾಗೂ ೧೯೯೧ರಲ್ಲಿ ಕ್ರಮವಾಗಿ ೧೧,೯೫೭ ಹಾಗೂ ೧೨,೩೩೨ ಜನಸಂಖ್ಯೆಯನ್ನು ಹೊಂದಿತ್ತು. ಇದು ೧೯೬೧ರಲ್ಲಿ

## ಜನಸಂಖ್ಯೆಯ ಆಧಾರದ ಮೇಲೆ ಪಟ್ಟಣಗಳ ವರ್ಗೀಕರಣ

| ೧೯೯೧ ಮತ್ತು ಅದಕ್ಕೆ ಮೊದಲು ಪಟ್ಟಣಗಳ ವರ್ಗೀಕರಣ | | ೨೦೦೧ರಲ್ಲಿ ಪಟ್ಟಣಗಳ ವರ್ಗೀಕರಣ | | |
|---|---|---|---|---|
| ವರ್ಗ–I | ೧,೦೦,೦೦೦ ಮತ್ತು ಅದಕ್ಕಿಂತ ಹೆಚ್ಚು | ವರ್ಗ–I | ಅ) ಎಂ.೭ | ೫,೦೦,೦೦೦ ಮತ್ತು ಅದಕ್ಕಿಂತ ಹೆಚ್ಚು |
| | | | ಆ) ಎಂ.೬ | ೨೦,೦೦,೦೦೦ ರಿಂದ ೪೯,೯೯,೯೯೯ |
| | | | ಇ) ಎಂ.೫ | ೧೦,೦೦,೦೦೦ ರಿಂದ ೧೯,೯೯,೯೯೯ |
| | | | ಈ) ಎಂ.೪ | ೫,೦೦,೦೦೦ ರಿಂದ ೯,೯೯,೯೯೯ |
| | | | ಉ) ಎಂ.೩ | ೩,೦೦,೦೦೦ ರಿಂದ ೪,೯೯,೯೯೯ |
| | | | ಊ) ಎಂ.೨ | ೨,೦೦,೦೦೦ ರಿಂದ ೨,೯೯,೯೯೯ |
| | | | ಋ) ಎಂ.೧ | ೧,೦೦,೦೦೦ ರಿಂದ ೧,೯೯,೯೯೯ |
| ವರ್ಗ–II | ೫೦,೦೦೦ರಿಂದ ೯೯,೯೯೯ | ವರ್ಗ–II | | ೫೦,೦೦೦ ರಿಂದ ೯೯,೯೯೯ |
| ವರ್ಗ–III | ೨೦,೦೦೦ರಿಂದ ೪೯,೯೯೯ | ವರ್ಗ–III | | ೨೦,೦೦೦ ರಿಂದ ೪೯,೯೯೯ |
| ವರ್ಗ–IV | ೧೦,೦೦೦ರಿಂದ ೧೯,೯೯೯ | ವರ್ಗ–IV | | ೧೦,೦೦೦ ರಿಂದ ೧೯,೯೯೯ |
| ವರ್ಗ–V | ೫,೦೦೦ರಿಂದ ೯,೯೯೯ | ವರ್ಗ–V | | ೫,೦೦೦ ರಿಂದ ೯,೯೯೯ |
| ವರ್ಗ–VI | ೫,೦೦೦ಕ್ಕಿಂತ ಕಡಿಮೆ | ವರ್ಗ–VI | | ೫,೦೦೦ ಕ್ಕಿಂತ ಕಡಿಮೆ |

೭,೩೪೩ ಹಾಗೂ ೧೯೭೧ರಲ್ಲಿ ೯,೩೭೭ ಜನಸಂಖ್ಯೆಯನ್ನು ಹೊಂದಿ ವರ್ಗ–Vರ ಗುಂಪಿಗೆ ಸೇರಿತ್ತು. ೫,೦೦೦ ದಿಂದ ೯,೯೯೯ ಜನಸಂಖ್ಯೆಯನ್ನು ಹೊಂದಿರುವ ಪಟ್ಟಣಗಳನ್ನು ವರ್ಗ–Vಕ್ಕೆ ಸೇರಿಸಲಾಗಿದೆ. ಟನ್‌ವೆಸ್ಟ್ ಪಟ್ಟಣವು ೧೯೬೧ರಲ್ಲಿ ೫೯೨೫ ಜನಸಂಖ್ಯೆಯನ್ನು ಹೊಂದಿದ್ದರೆ, ೧೯೭೧ರಲ್ಲಿ ೭,೩೩೧, ೧೯೮೧ರಲ್ಲಿ ೮,೩೦೬ ಹಾಗೂ ೧೯೯೧ರಲ್ಲಿ ೮,೧೬೦ ಜನಸಂಖ್ಯೆಯನ್ನು ಹೊಂದಿತ್ತು. ೧೯೯೧ರಲ್ಲಿ ಮಲ್ಲಾರ್ ೫,೭೭೬ ಜನಸಂಖ್ಯೆಯನ್ನು ಹೊಂದಿ, ವರ್ಗ–Vರ ಪಟ್ಟಣವಾಗಿತ್ತು. ಜನಸಂಖ್ಯೆ ೫,೦೦೦ಕ್ಕಿಂತ ಕಡಿಮೆ ಇರುವ ಪಟ್ಟಣಗಳನ್ನು ವರ್ಗ–VIಕ್ಕೆ ಸೇರಿದ ಪಟ್ಟಣ ಎಂದು ವರ್ಗೀಕರಿಸಲಾಗಿದ್ದು, ೧೯೯೧ರಲ್ಲಿ ಹೊಸ ಅಂಗಡಿ (ಕೆ.ಪಿ.ಟಿ.ಸಿ. ಯೋಜನೆ) ೨,೧೧೭ ಜನಸಂಖ್ಯೆ ಹೊಂದಿ ಈ ವರ್ಗಕ್ಕೆ ಸೇರಿತ್ತು. ೨೦೦೧ರ ಜನಗಣತಿಯಲ್ಲಿ ಜನಸಂಖ್ಯೆ ಆಧಾರದ ಮೇಲೆ ಪಟ್ಟಣಗಳ ವರ್ಗೀಕರಿಸಲಾಗಿದ್ದು, ವರ್ಗ–Iರಲ್ಲೇ ಮತ್ತೇ ಏಳು ಉಪವರ್ಗಗಳಾಗಿ ವಿಂಗಡಿಸಿದೆ. ಹೆಚ್ಚಿನ ವಿವರಗಳಿಗೆ ಹಿಂದಿನ ಪುಟ ನೋಡಿ. ೨೦೦೧ರ ಜನಗಣತಿಯಂತೆ ಜಿಲ್ಲೆಯಲ್ಲಿರುವ ಪಟ್ಟಣಗಳ ಹೆಸರು ಹಾಗೂ ಅವುಗಳ ಜನಸಂಖ್ಯೆಯನ್ನು ಕೋಷ್ಟಕ ೮.೧ರಲ್ಲಿ ಹಾಗೂ ಪಟ್ಟಣಗಳಲ್ಲಿನ ಕೆಲಸಗಾರರ ವಿವರವನ್ನು ಕೋಷ್ಟಕ ೮.೨ ರಲ್ಲಿ ನೀಡಲಾಗಿದೆ.

## ಜಿಲ್ಲಾದಾಯ

ಜಿಲ್ಲಾ ಆದಾಯವೆಂದು ಸಾಮಾನ್ಯವಾಗಿ ಕರೆಯಲಾಗುವ ಜಿಲ್ಲಾ ನಿವ್ವಳ ಆಂತರಿಕ ಉತ್ಪನ್ನವು, ಜಿಲ್ಲೆಯ ಆರ್ಥಿಕ ಅಭಿವೃದ್ಧಿಯ ಗುಣಮಟ್ಟವನ್ನು ಅಳತೆ ಮಾಡುವ ಮುಖ್ಯ ಸೂಚಿಯಾಗಿದೆ. ಆಯಾ ವರ್ಷದಲ್ಲಿ ಜಿಲ್ಲೆಯಲ್ಲಿ ಉತ್ಪತ್ತಿಯಾಗುವ ಸರಕು ಮತ್ತು ಸೇವೆಗಳ ಒಟ್ಟು ಮೌಲ್ಯವನ್ನು ಇದರಿಂದ ತಿಳಿಯಬಹುದು. ಪ್ರಸಕ್ತ ಬೆಲೆಗಳು, ಜಿಲ್ಲೆಯ ನಿವ್ವಳ ಆಂತರಿಕ ಉತ್ಪನ್ನದ ಅಂದಾಜುಗಳು, ಚಾಲ್ತಿಯಲ್ಲಿರುವ ಬೆಲೆಗಳ ಮೇರೆಗೆ ಹುಟ್ಟುವಳಿ ಮೌಲ್ಯವನ್ನು ಪ್ರತಿಬಿಂಬಿಸುತ್ತದೆ. ಸ್ಥಿರ ಬೆಲೆಗಳು ಈ ಅಂದಾಜು ಬೆಲೆಗಳ ವ್ಯತ್ಯಾಸದ ಪರಿಣಾಮವನ್ನು ದೂರವಾಗಿಸಿ, ನಿಜವಾದ ಆರ್ಥಿಕ ಬೆಳವಣಿಗೆಯನ್ನು ಪ್ರತಿಬಿಂಬಿಸುವಲ್ಲಿ ನೆರವಾಗುತ್ತವೆ. ತಲಾವಾರು ನಿವ್ವಳ ಆಂತರಿಕ ಉತ್ಪನ್ನವು ಜಿಲ್ಲೆಯ ಆರ್ಥಿಕ ಬೆಳವಣಿಗೆಯನ್ನು ಗುರುತಿಸುವ ಮಾಪನವಾಗಿದ್ದು, ಪ್ರಾದೇಶಿಕ ಅಸಮತೋಲನವನ್ನು ಅಳೆಯಲೂ ಸಹಕರಿಸುತ್ತದೆ.

ಜಿಲ್ಲೆಯ ಪ್ರಕೃತಿ ಸಂಪತ್ತನ್ನು ಬಳಸಿಕೊಂಡು, ಬಂಡವಾಳ ಮತ್ತು ಮಾನವಶ್ರಮಗಳು ಪ್ರತಿವರ್ಷವೂ ಉತ್ಪಾದಿಸುವ ಸರಕು ಮತ್ತು ಸೇವೆಗಳ ನಿವ್ವಳ ಮೊತ್ತದ ಮೌಲ್ಯವೇ ಜಿಲ್ಲಾದಾಯ. ಕೃಷಿ, ಅರಣ್ಯ, ಮೀನುಗಾರಿಕೆ, ಗಣಿ ಮತ್ತು ಕಲ್ಲು ಅಗೆತ ಪ್ರಾಥಮಿಕ ವಲಯದ ವ್ಯಾಪ್ತಿಗೂ; ತಯಾರಿಕೆ (Manufacturing) (ನೋಂದಣಿಯಾದ ಮತ್ತು ನೋಂದಣಿಯಾಗದ), ನಿರ್ಮಾಣ, ವಿದ್ಯುತ್, ಅನಿಲ ಮತ್ತು ನೀರು ಸರಬರಾಜು ದ್ವಿತೀಯ ವಲಯದ ವ್ಯಾಪ್ತಿಗೂ; ರೈಲ್ವೆ, ಇತರೆ ಸಾರಿಗೆ, ಸಂಗ್ರಹಣೆ, ಸಂಪರ್ಕ, ವ್ಯಾಪಾರ, ಹೊಟೆಲ್ ಮತ್ತು ಉಪಹಾರ ಗೃಹಗಳು, ಬ್ಯಾಂಕು ಮತ್ತು ವಿಮೆ, ಸ್ಥಿರಾಸ್ತಿ, ವಾಸಗೃಹಗಳ ಒಡೆತನ ಮತ್ತು ವ್ಯವಹಾರ, ಸಾರ್ವಜನಿಕ ಆಡಳಿತ, ಇತರೆ ಸೇವೆಗಳು ತೃತೀಯ ವಲಯ ಅಥವಾ ಸೇವಾಕ್ಷೇತ್ರದ ವ್ಯಾಪ್ತಿಗೂ ಸೇರಿವೆ. ಇವುಗಳ ಉತ್ಪಾದನಾ ಪ್ರಾಮುಖ್ಯತೆಯನ್ನು ಅವುಗಳ ವರಮಾನದಿಂದ ಅರಿಯಬಹುದಾಗಿದೆ.

ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ವರಮಾನಕ್ಕೆ ಪ್ರಾಥಮಿಕ ವಲಯದ ಕೊಡುಗೆ ೧೯೬೦–೬೧ರಲ್ಲಿ ಕೇವಲ ೩,೫೭೧ ಲಕ್ಷ ರೂ.ಗಳಿದ್ದದ್ದು, ೧೯೭೦–೭೧ರಲ್ಲಿ ೮,೧೨೫ ಲಕ್ಷ ರೂ.ಗಳಿಗೂ, ೧೯೮೦–೦೧ರಲ್ಲಿ ೧೬,೧೯೦ ಲಕ್ಷ ರೂ.ಗಳಿಗೂ, ೧೯೯೦–೯೧ರಲ್ಲಿ ೪೬,೧೯೯ ಲಕ್ಷ ರೂ.ಗಳಿಗೂ, ೧೯೯೭–೯೮ರಲ್ಲಿ ೧,೨೪,೫೭೦ ಲಕ್ಷ ರೂ.ಗಳಿಗೆ ಹೆಚ್ಚಳಗೊಂಡಿತ್ತು. ಆದರೆ ೧೯೯೭–೯೮ರಲ್ಲಿ ಉಡುಪಿ ಜಿಲ್ಲೆಯು ದಕ್ಷಿಣ ಕನ್ನಡ ಜಿಲ್ಲೆಯಿಂದ ವಿಭಜನೆಗೊಂಡ ನಂತರ ೧೯೯೮–೯೯ರಲ್ಲಿ ಈ ಕ್ಷೇತ್ರದಿಂದ ೫೩,೪೨೧ ಲಕ್ಷ ರೂ.ಗಳಿಗೂ, ೧೯೯೯–೨೦೦೦ರಲ್ಲಿ ೫೩,೯೬೭ ಲಕ್ಷ ರೂ.ಗಳಿಗೂ, ೨೦೦೦–೦೧ ೬೦,೯೫೭ ಲಕ್ಷ ರೂ.ಗಳಿಗೂ, ೨೦೦೧–೦೨ರಲ್ಲಿ ೬೧,೭೦೧ ಲಕ್ಷ ರೂ.ಗಳಿಗೂ ಹಾಗೂ ೨೦೦೩–೦೪ರಲ್ಲಿ ೬೮,೫೩೬ ಲಕ್ಷ ರೂ.ಗಳಿಗೂ ಹೆಚ್ಚಳಗೊಂಡಿರುವುದು ಗಮನಾರ್ಹವಾಗಿದೆ. ಜಿಲ್ಲಾ ಆದಾಯಕ್ಕೆ ದ್ವಿತೀಯ ವಲಯ ಹಾಗೂ ತೃತೀಯ ವಲಯದ ಕೊಡುಗೆ ಗಮನಾರ್ಹವಾಗಿ

## ಕೋಷ್ಟಕ ೮.೧ : ೨೦೦೧ರ ಜನಗಣತಿಯಂತೆ ಉಡುಪಿ ಜಿಲ್ಲೆಯಲ್ಲಿದ್ದ ಪಟ್ಟಣಗಳು ಹಾಗೂ ಅವುಗಳ ಜನಸಂಖ್ಯೆ

| ಪಟ್ಟಣಗಳು | ಜನಸಂಖ್ಯೆ | | | ಸ್ತ್ರೀ–ಪುರುಷರ ಪ್ರಮಾಣ * | ಪರಿಶಿಷ್ಟ ಜಾತಿ | | | ಪರಿಶಿಷ್ಟ ಪಂಗಡ | | | ಸಾಕ್ಷರತೆ | | |
|---|---|---|---|---|---|---|---|---|---|---|---|---|---|
| | ಪುರುಷ | ಮಹಿಳೆ | ಒಟ್ಟು | | ಪುರುಷ | ಮಹಿಳೆ | ಒಟ್ಟು | ಪುರುಷ | ಮಹಿಳೆ | ಒಟ್ಟು | ಪುರುಷ | ಮಹಿಳೆ | ಒಟ್ಟು |
| ಕುಂದಾಪುರ (ಪುರಸಭೆ) | ೧೩೯೧೯ | ೧೪೬೭೨ | ೨೮೫೯೧ | ೧೦೫೪ | ೬೫೭ | ೬೨೩ | ೧೨೮೦ | ೧೨೬ | ೧೪೯ | ೨೭೫ | ೧೧೫೬೪ | ೧೦೮೪೨ | ೨೨೪೦೬ |
| ಉಡುಪಿ (U.A) | ೬೨೫೯೬ | ೬೪೫೨೮ | ೧೨೭೧೨೪ | – | ೩೨೫೩ | ೩೩೨೦ | ೬೫೭೩ | ೨೩೩೨ | ೨೩೯೪ | ೪೭೨೬ | ೫೩೮೬೩ | ೫೧೭೦೮ | ೧೦೫೫೭೧ |
| ಉಡುಪಿ (CMC+OG) | ೬೨೫೯೬ | ೬೪೫೨೮ | ೧೨೭೧೨೪ | ೧೦೩೧ | ೩೨೫೩ | ೩೩೨೦ | ೬೫೭೩ | ೨೩೩೨ | ೨೩೯೪ | ೪೭೨೬ | ೫೩೮೬೩ | ೫೧೭೦೮ | ೧೦೫೫೭೧ |
| i. ಉಡುಪಿ(CMC) | ೫೫೮೯೩ | ೫೭೨೧೯ | ೧೧೩೧೧೨ | ೧೦೨೪ | ೨೬೧೫ | ೨೬೫೫ | ೫೨೭೦ | ೨೩೦೯ | ೨೩೬೬ | ೪೬೭೫ | ೪೮೧೫೩ | ೪೬೧೬೦ | ೯೪೩೧೩ |
| ii. ಕುತಪಾಡಿ(OG) | ೧೪೯೯ | ೧೭೨೪ | ೩೨೨೩ | ೧೧೫೦ | ೬೦ | ೬೨ | ೧೨೨ | ೦೧ | – | ೦೧ | ೧೩೧೩ | ೧೩೩೬ | ೨೬೪೯ |
| iii.ಕಡೇಕಾರ್(OG) | ೨೦೮೯ | ೨೨೩೪ | ೪೩೨೩ | ೧೦೬೯ | ೨೯೭ | ೩೦೮ | ೬೦೫ | ೨೨ | ೨೮ | ೫೦ | ೧೭೩೦ | ೧೬೬೩ | ೩೩೯೩ |
| iv. ಕಿದಿಯೂರ್(OG) | ೨೦೮೮ | ೨೨೫೦ | ೪೩೩೮ | ೧೦೭೮ | ೧೧೬ | ೧೩೯ | ೨೫೫ | – | – | – | ೧೭೮೫ | ೧೭೦೩ | ೩೪೮೩ |
| v. ಅಂಬಲಪಾಡಿ (OG) | ೭೯೯ | ೮೭೬ | ೧೬೭೫ | ೧೦೯೬ | ೧೫೮ | ೧೫೧ | ೩೦೯ | – | – | – | ೬೮೮ | ೬೭೨ | ೧೩೬೦ |
| vi.ಮೂಡನಿಡಂಬೂರು (OG) | ೨೨೮ | ೨೨೫ | ೪೫೩ | ೯೮೭ | ೦೭ | ೦೫ | ೧೨ | – | – | – | ೧೯೪ | ೧೭೪ | ೩೬೮ |
| ಸಾಲಿಗ್ರಾಮ (TP) | ೬೯೮೫ | ೭೯೭೭ | ೧೪೯೬೨ | ೧೧೪೨ | ೫೦೧ | ೫೦೦ | ೧೦೦೧ | ೬೪ | ೬೪ | ೧೨೮ | ೫೬೩೪ | ೫೪೪೦ | ೧೧೦೭೪ |
| ಯಾನೆಗುಡ್ಡ (CT) | ೨೧೪೭ | ೨೩೬೧ | ೪೫೦೮ | ೧೧೦೦ | ೧೦೦ | ೯೭ | ೧೯೭ | ೧೪ | ೦೮ | ೨೨ | ೧೮೨೬ | ೧೮೦೯ | ೩೬೩೫ |
| ಮಲ್ಲಾರ್ (CT) | ೨೮೪೨ | ೩೨೧೦ | ೬೦೫೨ | ೧೧೨೯ | ೩೨೧ | ೩೩೧ | ೬೫೨ | ೧೮ | ೧೭ | ೩೫ | ೨೨೫೪ | ೨೨೪೫ | ೪೪೯೯ |
| ಕಾರ್ಕಳ (ಪುರಸಭೆ) | ೧೨೬೮೬ | ೧೨೪೩೦ | ೨೫೧೧೬ | ೯೮೦ | ೭೫೪ | ೮೨೨ | ೧೫೭೬ | ೨೬೧ | ೩೦೪ | ೫೬೫ | ೧೦೭೪೯ | ೯೭೪೭ | ೨೦೪೯೬ |

* ಸ್ತ್ರೀ– ಪುರುಷರ ಪ್ರಮಾಣ : ೧೦೦೦ ಗಂಡಸರಿಗೆ ಲಭ್ಯವಿರುವ ಮಹಿಳೆಯರು.

# ಕೋಷ್ಟಕ ೮.೨
## ೨೦೦೧ರ ಜನಗಣತಿಯಂತೆ ಉಡುಪಿ ಜಿಲ್ಲೆಯಲ್ಲಿದ್ದ ಪಟ್ಟಣಗಳು ಹಾಗೂ ಅವುಗಳಲ್ಲಿದ್ದ ಕೆಲಸಗಾರರು

| ಪಟ್ಟಣಗಳು | ಒಟ್ಟು ಕೆಲಸಗಾರರು | | | ಮುಖ್ಯ ಕೆಲಸಗಾರರು | | | ಮುಖ್ಯ ಕೆಲಸಗಾರರ ವರ್ಗೀಕರಣ: ವ್ಯವಸಾಯಗಾರರು | | | ಕೃಷಿ ಕಾರ್ಮಿಕರು | | | ಗೃಹ ಕೈಗಾರಿಕಾ ಕಾರ್ಮಿಕರು | | | ಇತರ ಕೆಲಸಗಾರರು | | |
|---|---|---|---|---|---|---|---|---|---|---|---|---|---|---|---|---|---|---|
| | ಪುರುಷ | ಮಹಿಳೆ | ಒಟ್ಟು | ಪುರುಷ | ಮಹಿಳೆ | ಒಟ್ಟು | ಪುರುಷ | ಮಹಿಳೆ | ಒಟ್ಟು | ಪುರುಷ | ಮಹಿಳೆ | ಒಟ್ಟು | ಪುರುಷ | ಮಹಿಳೆ | ಒಟ್ಟು | ಪುರುಷ | ಮಹಿಳೆ | ಒಟ್ಟು |
| ಕುಂದಾಪುರ(ಪುರಸಭೆ) | ೭೫೬೧ | ೨೫೦೬ | ೧೦೦೬೭ | ೭೨೬೦ | ೨೧೯೮ | ೯೪೫೮ | ೧೨೨ | ೪೬ | ೧೬೮ | ೫೭ | ೫೧ | ೧೦೮ | ೭೭ | ೭೦೩ | ೭೮೦ | ೭೦೦೪ | ೧೩೯೮ | ೮೪೦೨ |
| ಉಡುಪಿ (U.A) | ೩೪೫೮೧ | ೧೪೬೦೪ | ೪೯೧೮೫ | ೩೩೦೪೪ | ೧೩೨೯೩ | ೪೬೩೩೭ | ೮೮೬ | ೪೧೮ | ೧೩೦೪ | ೪೭೫ | ೪೯೦ | ೯೬೫ | ೯೯೧ | ೩೫೭೧ | ೪೪೮೨ | ೩೦೭೭೨ | ೮೮೧೪ | ೩೯೫೮೬ |
| ಉಡುಪಿ (CMC+OG) | ೩೪೫೮೧ | ೧೪೬೦೪ | ೪೯೧೮೫ | ೩೩೦೪೪ | ೧೩೨೯೩ | ೪೬೩೩೭ | ೮೮೬ | ೪೧೮ | ೧೩೦೪ | ೪೭೫ | ೪೯೦ | ೯೬೫ | ೯೯೧ | ೩೫೭೧ | ೪೪೮೨ | ೩೦೭೭೨ | ೮೮೧೪ | ೩೯೫೮೬ |
| i. ಉಡುಪಿ (CMC) | ೩೦೬೧೮ | ೧೨೫೨೪ | ೪೩೧೪೨ | ೨೯೪೪೪ | ೧೧೪೫೯ | ೪೦೯೦೩ | ೭೫೫ | ೩೩೧ | ೧೦೮೬ | ೪೧೧ | ೩೮೯ | ೮೦೦ | ೮೨೮ | ೨೯೧೬ | ೩೭೪೪ | ೨೭೪೫೦ | ೭೮೨೩ | ೩೫೨೭೩ |
| ii. ಕುತಪಾಡಿ (OG) | ೮೮೫ | ೫೨೩ | ೧೪೦೮ | ೭೯೯ | ೪೪೯ | ೧೨೪೮ | ೧೬ | ೦೨ | ೧೮ | ೧೭ | ೫೧ | ೬೮ | ೧೩ | ೧೮೧ | ೧೯೪ | ೭೫೩ | ೨೧೫ | ೯೬೮ |
| iii. ಕಡೇಕಾರ್ (OG) | ೧೨೧೧ | ೫೫೧ | ೧೭೬೨ | ೧೦೦೪ | ೪೫೭ | ೧೪೬೧ | ೪೫ | ೨೩ | ೬೮ | ೧೮ | ೧೮ | ೩೬ | ೧೫ | ೧೨೫ | ೧೪೦ | ೯೨೬ | ೨೯೧ | ೧೨೧೭ |
| iv. ಕಿದಿಯೂರ್ (OG) | ೧೨೭೮ | ೬೭೧ | ೧೯೪೯ | ೧೨೪೮ | ೬೨೫ | ೧೮೭೩ | ೩೯ | ೩೩ | ೭೨ | ೨೫ | ೨೬ | ೫೧ | ೪೦ | ೧೮೫ | ೨೨೫ | ೧೧೪೪ | ೩೮೧ | ೧೫೨೫ |
| v. ಅಂಬಲಪಾಡಿ (OG) | ೪೬೦ | ೨೮೮ | ೭೪೮ | ೪೨೦ | ೨೫೬ | ೬೭೬ | ೨೭ | ೨೬ | ೫೩ | ೦೨ | ೦೬ | ೦೮ | ೧೫ | ೧೪೧ | ೧೫೬ | ೩೭೬ | ೮೩ | ೪೫೯ |
| vi. ಮೂಡನಿಡಂಬೂರು (OG) | ೧೨೯ | ೪೭ | ೧೭೬ | ೧೨೯ | ೪೭ | ೧೭೬ | ೦೪ | ೦೩ | ೦೭ | ೦೨ | – | ೦೨ | – | ೨೩ | ೨೩ | ೧೨೩ | ೨೧ | ೧೪೪ |
| ಸಾಲಿಗ್ರಾಮ (TP) | ೪೦೭೨ | ೨೬೪೦ | ೬೭೧೨ | ೩೭೨೧ | ೧೯೬೩ | ೫೬೮೪ | ೫೦೦ | ೨೩೧ | ೭೩೧ | ೬೨೧ | ೯೩೮ | ೧೫೫೯ | ೧೮೭ | ೪೭೧ | ೬೫೮ | ೨೪೧೩ | ೩೨೩ | ೨೭೩೬ |
| ಯಾನಗುಡ್ಡ (CT) | ೧೧೧೫ | ೪೬೬ | ೧೫೮೧ | ೧೦೫೩ | ೩೯೦ | ೧೪೪೩ | ೮೯ | ೧೩ | ೧೦೨ | ೨೮ | ೨೨ | ೫೦ | ೩೭ | ೧೮೧ | ೨೧೮ | ೮೯೯ | ೧೭೪ | ೧೦೭೩ |
| ಮಲ್ಲಾರ್ (CT) | ೧೩೭೬ | ೭೮೧ | ೨೧೫೭ | ೧೧೪೫ | ೫೫೦ | ೧೬೯೫ | ೬೯ | ೩೯ | ೧೦೮ | ೬೭ | ೨೬ | ೯೩ | ೩೦ | ೩೭೨ | ೪೦೨ | ೯೭೯ | ೧೧೩ | ೧೦೯೨ |
| ಕಾರ್ಕಳ (ಪುರಸಭೆ) | ೬೯೦೮ | ೨೯೨೯ | ೯೮೩೭ | ೬೬೧೬ | ೨೭೩೨ | ೯೩೪೮ | ೧೭೩ | ೮೦ | ೨೫೩ | ೮೪ | ೯೧ | ೧೭೫ | ೨೦೪ | ೧೨೨೪ | ೧೪೨೮ | ೬೧೫೫ | ೧೩೩೭ | ೭೪೯೨ |

## ಕೋಷ್ಟಕ ೮.೨ (ಮುಂದುವರಿದಿದೆ)

| ಪಟ್ಟಣಗಳು | ಸೀಮಾಂತ ಕೆಲಸಗಾರರು | | | ಸೀಮಾಂತ ಕೆಲಸಗಾರರ ವರ್ಗೀಕರಣ | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|
| | | | | ವ್ಯವಸಾಯಗಾರರು | | | ಕೃಷಿ ಕಾರ್ಮಿಕರು | | | ಗೃಹ ಕೈಗಾರಿಕಾ ಕಾರ್ಮಿಕರು | | | ಇತರ ಕೆಲಸಗಾರರು | | | ಕೆಲಸಗಾರರಲ್ಲದವರು | | |
| | ಪುರುಷ | ಮಹಿಳೆ | ಒಟ್ಟು | ಪುರುಷ | ಮಹಿಳೆ | ಒಟ್ಟು | ಪುರುಷ | ಮಹಿಳೆ | ಒಟ್ಟು | ಪುರುಷ | ಮಹಿಳೆ | ಒಟ್ಟು | ಪುರುಷ | ಮಹಿಳೆ | ಒಟ್ಟು | ಪುರುಷ | ಮಹಿಳೆ | ಒಟ್ಟು |
| ಕುಂದಾಪುರ(ಪುರಸಭೆ) | ೩೦೧ | ೩೦೮ | ೬೦೯ | ೦೯ | ೧೩ | ೨೨ | ೪೨ | ೧೨೯ | ೧೭೧ | ೦೮ | ೩೮ | ೪೬ | ೨೪೨ | ೧೨೮ | ೩೭೦ | ೬೩೫೮ | ೧೨೧೬೬ | ೧೮೫೨೪ |
| ಉಡುಪಿ (**U.A**) | ೧೫೩೭ | ೧೩೧೧ | ೨೮೪೮ | ೪೦ | ೬೬ | ೧೦೬ | ೧೩೨ | ೩೩೩ | ೪೬೫ | ೪೬ | ೩೫೬ | ೪೦೨ | ೧೩೧೯ | ೫೫೬ | ೧೮೭೫ | ೨೮೦೧೫ | ೪೯೯೨೪ | ೭೭೩೩೯ |
| ಉಡುಪಿ (**CMC+OG**) | ೧೫೩೭ | ೧೩೧೧ | ೨೮೪೮ | ೪೦ | ೬೬ | ೧೦೬ | ೧೩೨ | ೩೩೩ | ೪೬೫ | ೪೬ | ೩೫೬ | ೪೦೨ | ೧೩೧೯ | ೫೫೬ | ೧೮೭೫ | ೨೮೦೧೫ | ೪೯೯೨೪ | ೭೭೩೩೯ |
| i. ಉಡುಪಿ (CMC) | ೧೧೭೪ | ೧೦೬೫ | ೨೨೩೯ | ೩೧ | ೪೬ | ೭೭ | ೮೪ | ೨೧೩ | ೨೯೭ | ೪೪ | ೩೨೬ | ೩೭೦ | ೧೦೧೫ | ೪೮೦ | ೧೪೯೫ | ೨೫೨೭೫ | ೪೪೬೯೫ | ೬೯೯೭೦ |
| ii. ಕುತಪಾಡಿ (OG) | ೮೬ | ೭೪ | ೧೬೦ | ೦೧ | ೦೧ | ೦೨ | ೧೮ | ೫೧ | ೬೯ | – | ೦೯ | ೦೯ | ೬೭ | ೧೩ | ೮೦ | ೬೧೪ | ೧೨೦೧ | ೧೮೧೫ |
| iii. ಕಡೇಕಾರ್ (OG) | ೨೦೭ | ೯೪ | ೩೦೧ | ೦೩ | – | ೦೩ | ೨೭ | ೪೫ | ೭೨ | ೦೨ | ೦೮ | ೧೦ | ೧೭೫ | ೪೧ | ೨೧೬ | ೮೭೮ | ೧೬೮೩ | ೨೫೬೧ |
| iv. ಕಿದಿಯೂರ್ (OG) | ೩೦ | ೪೬ | ೭೬ | ೦೩ | ೧೦ | ೧೩ | ೦೧ | ೧೨ | ೧೩ | – | ೦೫ | ೦೫ | ೨೬ | ೧೯ | ೪೫ | ೮೧೦ | ೧೫೭೯ | ೨೩೮೯ |
| v. ಅಂಬಲಪಾಡಿ (OG) | ೪೦ | ೩೨ | ೭೨ | ೦೨ | ೦೯ | ೧೧ | ೦೨ | ೧೨ | ೧೪ | – | ೦೮ | ೦೮ | ೩೬ | ೦೩ | ೩೯ | ೩೩೯ | ೫೮೮ | ೯೨೭ |
| vi. ಮೂಡನಿಡಂಬೂರು (OG) | – | – | – | – | – | – | – | – | – | – | – | – | – | – | – | ೯೯ | ೧೭೮ | ೨೭೭ |
| ಸಾಲಿಗ್ರಾಮ (**TMC**) | ೩೫೧ | ೬೭೭ | ೧೦೨೮ | ೩೯ | ೩೪ | ೭೩ | ೨೦೪ | ೫೫೨ | ೭೫೬ | ೧೯ | ೩೨ | ೫೧ | ೮೯ | ೫೯ | ೧೪೮ | ೨೯೧೩ | ೫೩೩೭ | ೮೨೫೦ |
| ಯಾನೆಗುಡ್ಡ(**CT**) | ೬೨ | ೭೬ | ೧೩೮ | ೦೭ | ೧೧ | ೧೮ | ೦೮ | ೩೫ | ೪೩ | ೦೨ | ೧೫ | ೧೭ | ೪೫ | ೧೫ | ೬೦ | ೧೦೩೨ | ೧೮೯೫ | ೨೯೨೭ |
| ಮಲ್ಲಾರ್ (**CT**) | ೨೩೧ | ೨೩೧ | ೪೬೨ | ೨೦ | ೨೯ | ೪೯ | ೧೬ | ೩೮ | ೫೪ | ೦೩ | ೧೨೮ | ೧೩೧ | ೧೯೨ | ೩೬ | ೨೨೮ | ೧೪೬೬ | ೨೪೨೯ | ೩೮೯೫ |
| ಕಾರ್ಕಳ (**TMC**) | ೨೯೨ | ೧೯೭ | ೪೮೯ | ೦೮ | ೦೫ | ೧೩ | ೧೯ | ೩೭ | ೫೬ | ೧೬ | ೫೮ | ೭೪ | ೨೪೯ | ೯೭ | ೩೪೬ | ೫೭೭೮ | ೯೫೦೧ | ೧೫೨೭೯ |

ಹೆಚ್ಚಳಗೊಂಡಿರುವುದು ಕೆಳಗಿನ ಅಂಕಿ ಅಂಶಗಳಿಂದ ಸ್ಪಷ್ಟವಾಗುತ್ತದೆ. ದ್ವಿತೀಯ ವಲಯ ಜಿಲ್ಲಾದಾಯಕ್ಕೆ (ಅವಿಭಜಿತ ಜಿಲ್ಲೆಯಾಗಿದ್ದಾಗ) ೧೯೭೦-೭೧ರಲ್ಲಿ ೮೦೧ ಲಕ್ಷ ರೂ.ಗಳನ್ನು ಕೊಡುಗೆಯಾಗಿ ನೀಡಿತ್ತು. ಇದು ಉಡುಪಿ ಜಿಲ್ಲೆಯು ಪ್ರತ್ಯೇಕಗೊಂಡ ನಂತರ ೧೯೯೮-೯೯ರಲ್ಲಿ ೨೮,೫೫೫ ಲಕ್ಷ ರೂ.ಗಳಿಗೂ, ೨೦೦೨-೦೩ರಲ್ಲಿ ೫೧,೬೦೪ ಲಕ್ಷ ರೂ.ಗಳಿಗೂ ಹೆಚ್ಚಳಗೊಂಡಿತು. ಹಾಗೆಯೇ ತೃತೀಯ ಕ್ಷೇತ್ರವಾದ ಸೇವಾವಲಯವು ಅವಿಭಜಿತ ಜಿಲ್ಲೆಯಾಗಿದ್ದಾಗ ೧೯೬೦-೬೧ರಲ್ಲಿ ೧,೧೬೨ ಲಕ್ಷ ರೂ.ಗಳನ್ನು ಜಿಲ್ಲಾದಾಯಕ್ಕೆ ಕೊಡುಗೆಯಾಗಿ ನೀಡಿದ್ದರೆ, ವಿಭಜನೆಗೊಂಡ ನಂತರ ೧೯೯೮-೯೯ರಲ್ಲಿ ೮೪,೯೮೯ ಲಕ್ಷ ರೂ.ಗಳಿಗೂ ಹಾಗೂ ೨೦೦೨-೦೩ರಲ್ಲಿ ೧,೫೬,೮೯೩ ಲಕ್ಷ ರೂ.ಗಳಿಗೂ ಹೆಚ್ಚಳಗೊಂಡಿರುವುದು ಈ ಕ್ಷೇತ್ರಗಳ ಪ್ರಾಮುಖ್ಯತೆಯನ್ನು ತೋರಿಸುತ್ತದೆ.

ಜಿಲ್ಲಾ ಆದಾಯಕ್ಕೆ (ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಾಗಿದ್ದಾಗ) ವಲಯವಾರು ಕೊಡುಗೆ ಚಾಲ್ತಿಬೆಲೆಗಳಲ್ಲಿ ಕೆಳಕಂಡಂತಿದೆ. ೧೯೬೦-೬೧ ರಲ್ಲಿ ೩,೨೭೬ ಲಕ್ಷ ರೂ.ಗಳು ಕೃಷಿಯಿಂದಲೂ, ೧೬೭ ಲಕ್ಷ ರೂ.ಗಳು ಅರಣ್ಯದಿಂದಲೂ ಮತ್ತು ೧೨೮ ಲಕ್ಷ ರೂ.ಗಳು ಮೀನುಗಾರಿಕೆಯಿಂದ ಬಂದಿದ್ದರೆ, ಇದು ೨೦೦೨-೦೩ರಲ್ಲಿ ಜಿಲ್ಲೆಯ ವಿಭಜನೆಯ ನಂತರ ಕ್ರಮವಾಗಿ ೫೩,೭೭೦ ಲಕ್ಷ ರೂ.ಗಳು, ೩,೬೪೫ ಲಕ್ಷ ರೂ.ಗಳು ಮತ್ತು ೧೦,೮೧೭ ಲಕ್ಷ ರೂ.ಗಳು ಬಂದಿರುವುದು ಕಂಡುಬರುತ್ತದೆ. ೩೦೪ ಲಕ್ಷ ರೂ.ಗಳು ಗಣಿ ಮತ್ತು ಕಲ್ಲು ಅಗೆತದಿಂದ ಬಂದಿರುತ್ತದೆ. ಹಾಗೆಯೇ ಜಿಲ್ಲಾ ಆದಾಯಕ್ಕೆ ಅವಿಭಜಿತ ಜಿಲ್ಲೆಯಾಗಿದ್ದಾಗ ದ್ವಿತೀಯ ವಲಯದ ಕೊಡುಗೆ ೧೯೬೦-೬೧ರಲ್ಲಿ ೬೨೮ ಲಕ್ಷ ರೂ.ಗಳು ತಯಾರಿಕೆ (ನೋಂದಣಿಯಾದ ಹಾಗೂ ನೋಂದಣಿಯಾಗದ) ಯಿಂದಲೂ, ೧೬೦ ಲಕ್ಷ ರೂ.ಗಳು ನಿರ್ಮಾಣದಿಂದಲೂ, ಕೇವಲ ೧೩ ಲಕ್ಷ ರೂ.ಗಳು ವಿದ್ಯುತ್, ಅನಿಲ, ನೀರು ಸರಬರಾಜುಗಳಿಂದಲೂ ಬಂದಿತ್ತು. ವಿಭಜನೆಯ ನಂತರ ಇದು ೨೦೦೨-೦೩ರಲ್ಲಿ ಈ ಕ್ಷೇತ್ರಗಳಿಂದ ಕ್ರಮವಾಗಿ ೩೨,೫೯೬ ಲಕ್ಷ ರೂ.ಗಳು, ೧೫,೯೦೮ ಲಕ್ಷ ರೂ.ಗಳು ಮತ್ತು ೩,೧೦೦ ಲಕ್ಷ ರೂ.ಗಳು ಬಂದಿದೆ. ಜಿಲ್ಲೆಯ ಆದಾಯ (೧೯೯೩-೯೪ರ ಸ್ಥಿರಬೆಲೆಗಳಲ್ಲಿ) ೨೦೦೧-೦೨ರಲ್ಲಿ ೧,೫೬,೫೨೯ ಲಕ್ಷ ರೂ.ಗಳಿದ್ದು, ರಾಜ್ಯದಲ್ಲಿ ೧೬ನೇ ಸ್ಥಾನವನ್ನು ಪಡೆದಿದೆ. ೧೯೯೮-೯೯ರಿಂದ ೨೦೦೨-೦೩ರವರೆಗೆ ಮೂಲ ಉದ್ಯಮಗಳಿಂದ ಜಿಲ್ಲೆಯ ನಿವ್ವಳ ಆದಾಯವನ್ನು ಚಾಲ್ತಿ ಬೆಲೆ ಹಾಗೂ ಸ್ಥಿರಬೆಲೆಗಳಲ್ಲಿ ಕೋಷ್ಟಕ ೮.೩ರಲ್ಲಿ ಹಾಗೂ ೮.೪ ರಲ್ಲಿ ನೀಡಲಾಗಿದೆ.

## ತಲಾದಾಯ

ತಲಾ ಆದಾಯವು ಜಿಲ್ಲೆಯ ಆರ್ಥಿಕ ಅಭಿವೃದ್ಧಿಯ ಗುಣಮಟ್ಟವನ್ನು ಅಳತೆ ಮಾಡುವ ಮತ್ತೊಂದು ಸೂಚಿಯಾಗಿದೆ. ವಿವಿಧ ಜಿಲ್ಲೆಗಳ ತಲಾವಾರು ವರಮಾನಗಳು ಸಂವಾದಿಯಾಗಿ ಹಾಗೂ ನಿರಂತರವಾಗಿ ಏರಿಕೆಯಾಗಿವೆ. ಚಾಲ್ತಿಬೆಲೆಗಳಲ್ಲಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ತಲಾ ಆದಾಯವು ೧೯೬೦-೬೧ರಲ್ಲಿ ಕೇವಲ ರೂ.೩೫೬ಗಳಾಗಿದ್ದು, ರಾಜ್ಯದಲ್ಲಿ ಐದನೇ ಸ್ಥಾನದಲ್ಲಿತ್ತು. ನಂತರ ೧೯೭೦-೭೧ರಲ್ಲಿ ರೂ.೭೮೬ಗಳಿಗೆ ಹೆಚ್ಚಾಗಿದ್ದರೂ ರಾಜ್ಯದಲ್ಲಿ ನಾಲ್ಕನೇ ಸ್ಥಾನಕ್ಕೇರಿತು. ಆದರೆ ಜಿಲ್ಲೆಯು ೧೯೯೭-೯೮ರಲ್ಲಿ ವಿಭಜನೆಯ ನಂತರ ತಲಾ ವರಮಾನದಲ್ಲಿ ತನ್ನ ಸ್ಥಿತಿಯನ್ನು ಉತ್ತಮಪಡಿಸಿಕೊಂಡಿತು. ೧೯೯೮-೯೯ರಲ್ಲಿ ರೂ.೧೩,೮೩೧ ಗಳಿಸಿ ಎಂಟನೇ ಸ್ಥಾನ ಪಡೆದಿತ್ತು. ಆದರೆ ಇದು ೨೦೦೨-೦೩ರಲ್ಲಿ ರೂ.೨೪,೪೫೦ ಗಳಿಗೆ ಹೆಚ್ಚಳಗೊಂಡು ರಾಜ್ಯದಲ್ಲಿ ದ್ವಿತೀಯ ಸ್ಥಾನಕ್ಕೆ ಏರಿದೆ. ತಲಾ ಆದಾಯ ೧೯೯೩-೯೪ರ ಸ್ಥಿರಬೆಲೆಗಳಲ್ಲಿ ೨೦೦೧-೦೨ರಲ್ಲಿ ರೂ.೨೧,೦೮೯ ಗಳಿಸಿ, ರಾಜ್ಯದಲ್ಲಿ ಐದನೇಯ ಸ್ಥಾನದಲ್ಲಿತ್ತು. ಹೆಚ್ಚಿನ ವಿವರಗಳಿಗೆ ಕೋಷ್ಟಕ ೮.೩ ಹಾಗೂ ೮.೪ ನೋಡಿ.

ಜಿಲ್ಲಾವಾರು ಆದಾಯ ಹಾಗೂ ತಲಾದಾಯಗಳ ತುಲನಾತ್ಮಕ ಅಧ್ಯಯನದಿಂದ ರಾಜ್ಯದ ವಿವಿಧ ಜಿಲ್ಲೆಗಳಲ್ಲಾಗಿರುವ ಪ್ರಗತಿ ಪ್ರಮಾಣದ ಅಂತರ, ಅಸಮಾನತೆ ಮತ್ತು ಹಿಂದುಳಿದಿರುವಿಕೆಯನ್ನು ಗುರುತಿಸಿ, ಕಾರಣಗಳನ್ನು ಕಂಡುಕೊಂಡು, ಅವುಗಳಿಗಾಗಿ ಅಭಿವೃದ್ಧಿ ಯೋಜನೆಗಳನ್ನು ರೂಪಿಸಿ, ಜಾರಿಗೆ ತರಲು ಅನುಕೂಲವಾಗುವುದು.

## ಬೆಲೆಗಳು

ಅನುಭೋಗಿಗಳ ಹಿತದೃಷ್ಟಿಯಿಂದ ಅಗತ್ಯ ವಸ್ತುಗಳ ಬೆಲೆಯಲ್ಲಾಗುವ ಹೆಚ್ಚಳ ತಡೆಗಟ್ಟಲು ಹಾಗೂ ಬೆಲೆಯಲ್ಲಿ ಸ್ಥಿರತೆಯನ್ನು ಕಾಯ್ದುಕೊಳ್ಳಲು ಸರ್ಕಾರ ಗಮನಹರಿಸುತ್ತಿದೆ. ೧೯೦೭ರಲ್ಲಿ ಸರಕುಗಳ ಬೆಲೆ

**ಕೋಷ್ಟಕ ೮.೩ : ಮೂಲ ಉದ್ಯಮಗಳ ಪ್ರಕಾರ ಜಿಲ್ಲೆಯ ನಿವ್ವಳ ಆದಾಯ – ಚಾಲ್ತಿ ಬೆಲೆಗಳಲ್ಲಿ**

(ಲಕ್ಷ ರೂ.ಗಳಲ್ಲಿ)

| ಕ್ರ. ಸಂ. | ಜಿಲ್ಲೆಯ ಆದಾಯ ವಿವಿಧ ಮೂಲಗಳಿಂದ | ವರ್ಷ | | | | | | | | |
|---|---|---|---|---|---|---|---|---|---|---|
| | | ೧೯೬೦–೬೧ | ೧೯೭೦–೭೧ | ೧೯೮೦–೮೧ | ೧೯೯೦–೯೧ | ೧೯೯೮–೯೯ | ೧೯೯೯–೦೦ | ೨೦೦೦–೦೧ | ೨೦೦೧–೦೨ | ೨೦೦೨–೦೩ |
| ೧) | ಕೃಷಿ | ೩೨೭೬ | ೭೫೯೯ | ೧೪೧೮೮ | ೩೯೯೦೬ | ೪೧೬೫೪ | ೪೨೪೨೮ | ೪೮೪೧೨ | ೫೦೫೨೭ | ೫೩೭೭೦ |
| ೨) | ಅರಣ್ಯ | ೧೬೭ | ೩೪೧ | ೬೨೮ | ೩೪೮೪ | ೩೬೮೨ | ೩೩೫೯ | ೩೮೭೬ | ೩೮೦೩ | ೩೬೪೫ |
| ೩) | ಮೀನುಗಾರಿಕೆ | ೧೨೮ | ೧೮೪ | ೧೩೦೬ | ೨೭೨೦ | ೮೦೮೧ | ೮೧೭೯ | ೮೬೨೫ | ೭೨೦೦ | ೧೦೮೧೭ |
| ೪) | ಗಣಿ ಮತ್ತು ಕಲ್ಲು ಅಗೆತ | – | ೦೧ | ೬೮ | ೮೯ | ೪ | ೧ | ೪೪ | ೧೭೧ | ೩೦೪ |
| | **ಪ್ರಾಥಮಿಕ ವಲಯದ ಒಟ್ಟು** | **೩೫೭೧** | **೮೧೨೫** | **೧೬೧೯೦** | **೪೬೧೯೯** | **೫೩೪೨೧** | **೫೩೯೬೭** | **೬೦೯೫೭** | **೬೧೭೦೧** | **೬೮೫೩೬** |
| ೫) | ತಯಾರಿಕೆ (ನೋಂದಣಿ ಯಾದ ಮತ್ತು ನೋಂದಣಿಯಾಗದ) | ೬೨೮ | ೨೪೩೮ | ೮೪೦೪ | ೩೦೮೧೨ | ೧೪೯೬೪ | ೧೬೯೦೫ | ೨೬೮೮೧ | ೨೧೯೬೭ | ೩೨೫೯೬ |
| ೬) | ನಿರ್ಮಾಣ | ೧೬೦ | ೮೯೬ | ೧೯೮೨ | ೭೨೦೦ | ೧೦೨೭೮ | ೧೨೬೬೮ | ೧೪೫೧೫ | ೧೪೩೦೮ | ೧೫೯೦೮ |
| ೭) | ವಿದ್ಯುತ್, ಅನಿಲ, ನೀರು ಸರಬರಾಜು | ೧೩ | ೧೦೩ | ೩೫೧ | ೩೧೩೪ | ೩೩೧೩ | ೨೯೬೯ | ೩೦೯೩ | ೩೭೪೫ | ೩೧೦೦ |
| | **ದ್ವಿತೀಯ ವಲಯದ ಒಟ್ಟು** | **೮೦೧** | **೩೪೩೭** | **೧೦೭೩೭** | **೪೧೧೪೬** | **೨೮೫೫೫** | **೩೨೨೭೨** | **೪೪೪೯೦** | **೪೦೦೨೦** | **೫೧೬೦೪** |
| ೮) | ರೈಲ್ವೆ | ೧೩ | ೦೮ | ೩೬ | ೨೪೭ | ೪೪೦ | ೫೧೦ | ೬೯೦ | ೯೧೧ | ೪೩೧ |
| ೯) | ಇತರೆ ಸಾರಿಗೆ | ೮೫ | ೩೦೮ | ೧೪೯೬ | ೭೨೧೦ | ೩೬೪೩ | ೬೬೭೫ | ೭೬೫೮ | ೯೭೦೧ | ೯೦೬೬ |
| ೧೦) | ಸಂಗ್ರಹಣೆ | – | – | ೦೩ | ೨೭ | ೪ | ೫ | ೬ | ೬ | ೯ |
| ೧೧) | ಸಂಪರ್ಕ | ೨೨ | ೭೨ | ೩೪೮ | ೨೧೮೮ | ೩೧೫೯ | ೨೯೭೨ | ೩೮೧೬ | ೫೧೦೮ | ೫೨೬೭ |
| ೧೨) | ವ್ಯಾಪಾರ, ಹೋಟೆಲ್ ಮತ್ತು ಉಪಹಾರ ಗೃಹಗಳು | ೫೮೯ | ೧೫೪೪ | ೩೭೭೬ | ೧೬೫೩೦ | ೨೦೧೮೭ | ೨೦೩೭೬ | ೩೧೧೪೦ | ೪೧೧೬೯ | ೩೫೨೫೫ |
| ೧೩) | ಬ್ಯಾಂಕು ಮತ್ತು ವಿಮೆ | ೫೧ | ೪೩೪ | ೨೬೨೭ | ೧೩೩೭೩ | ೨೦೨೭೭ | ೨೭೪೬೧ | ೨೯೬೦೨ | ೨೩೭೯೯ | ೩೬೪೨೨ |
| ೧೪) | ಸ್ಥಿರಾಸ್ತಿ, ವಾಸಗೃಹಗಳ ಒಡೆತನ ಮತ್ತು ವ್ಯವಹಾರ | ೧೩೫ | ೩೨೬ | ೧೮೦೮ | ೪೮೮೪ | ೧೦೬೨೫ | ೧೨೫೪೭ | ೧೫೭೪೧ | ೧೭೫೨೮ | ೨೦೧೪೪ |
| ೧೫) | ಸಾರ್ವಜನಿಕ ಆಡಳಿತ | ೫೯ | ೧೯೭ | ೭೯೦ | ೪೦೧೫ | ೩೨೩೦ | ೪೭೦೦ | ೪೫೭೧ | ೪೮೪೮ | ೧೪೨೭೩ |
| ೧೬) | ಇತರೆ ಸೇವೆಗಳು | ೨೦೮ | ೬೨೮ | ೨೧೮೫ | ೮೯೪೯ | ೨೩೪೨೪ | ೨೯೧೬೪ | ೩೩೩೦೪ | ೩೧೭೧೬ | ೩೬೦೨೬ |
| | **ತೃತೀಯ ವಲಯದ ಒಟ್ಟು** | **೧೧೬೨** | **೩೫೧೭** | **೧೩೦೬೯** | **೫೭೪೨೩** | **೮೪೯೮೯** | **೧೦೪೪೧೦** | **೧೨೬೫೨೮** | **೧೩೪೭೮೬** | **೧೫೬೮೯೩** |
| ೧೭) | ನಿವ್ವಳ ಜಿಲ್ಲಾದಾಯ | ೫೫೩೪ | ೧೫೦೭೯ | ೩೯೯೯೬ | ೧೪೪೭೬೮ | ೧೬೬೯೬೫ | ೧೯೦೬೪೯ | ೨೩೧೯೭೫ | ೨೩೬೫೦೭ | ೨೭೭೦೩೩ |
| ೧೮) | ಜಿಲ್ಲಾದಾಯದಲ್ಲಿ ಜಿಲ್ಲೆಯ ಸ್ಥಾನ (ಸಂಖ್ಯೆಗಳಲ್ಲಿ) | ೩ | ೩ | ೩ | ೩ | ೧೭ | ೧೯ | ೧೬ | ೧೭ | ೧೩ |
| ೧೯) | ತಲಾದಾಯ (ರೂ.ಗಳಲ್ಲಿ) | ೩೫೬ | ೭೮೬ | ೧೭೦೧ | ೫೩೫೦ | ೧೩೮೩೧ | ೧೭೪೮೮ | ೨೧೦೧೯ | ೨೧೦೮೭ | ೨೪೪೫೦ |
| ೨೦) | ತಲಾದಾಯದಲ್ಲಿ ಜಿಲ್ಲೆಯ ಸ್ಥಾನ (ಸಂಖ್ಯೆಗಳಲ್ಲಿ) | ೫ | ೪ | ೪ | ೪ | ೮ | ೭ | ೫ | ೫ | ೪ |

*ಆಧಾರ : ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು.*

***ಸೂಚನೆ :*** *೧೯೬೦–೬೧ ರಿಂದ ೧೯೯೦–೯೧ರವರೆಗಿನ ಅಂಕಿಅಂಶಗಳು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿವೆ. ೧೯೯೮–೯೯ ರಿಂದ ೨೦೦೨–೦೩ರವರೆಗಿನಅಂಕಿಅಂಶಗಳು ಉಡುಪಿ ಜಿಲ್ಲೆಗೆ ಸಂಬಂಧಿಸಿದವುಗಳಾಗಿವೆ.*

**ಕೋಷ್ಟಕ ೮.೪ : ಮೂಲ ಉದ್ಯಮಗಳ ಪ್ರಕಾರ ಜಿಲ್ಲೆಯ ನಿವ್ವಳ ಆದಾಯ (೧೯೯೩–೯೪)ರ ಸ್ಥಿರ ಬೆಲೆಗಳಲ್ಲಿ**

(ಲಕ್ಷ ರೂ.ಗಳಲ್ಲಿ)

| ಕ್ರ. ಸಂ. | ಜಿಲ್ಲೆಯ ಆದಾಯ ವಿವಿಧ ಮೂಲಗಳಿಂದ | ವರ್ಷ | | | | |
|---|---|---|---|---|---|---|
| | | ೧೯೯೮–೯೯ | ೧೯೯೯–೦೦ | ೨೦೦೦–೦೧ | ೨೦೦೧–೦೨ | ೨೦೦೨–೦೩ |
| ೧) | ಕೃಷಿ | ೩೧೦೦೭ | ೩೦೩೪೪ | ೪೦೧೨೯ | ೩೯೯೪೨ | ೩೬೮೫೭ |
| ೨) | ಅರಣ್ಯ | ೨೬೪೧ | ೨೧೩೨ | ೨೨೯೦ | ೨೨೨೨ | ೨೧೫೦ |
| ೩) | ಮೀನುಗಾರಿಕೆ | ೩೬೯೮ | ೪೨೪೭ | ೪೫೧೮ | ೩೮೦೧ | ೬೪೦೩ |
| ೪) | ಗಣಿ ಮತ್ತು ಕಲ್ಲು ಅಗೆತ | ೦೨ | ೦೧ | ೩೩ | ೧೨೦ | ೨೧೮ |
| | **ಪ್ರಾಥಮಿಕ ವಲಯದ ಒಟ್ಟು** | **೩೭೩೪೮** | **೩೬೭೨೪** | **೪೬೯೭೦** | **೪೬೦೮೫** | **೪೫೬೨೮** |
| ೫) | ತಯಾರಿಕೆ (ನೋಂದಣಿಯಾದ ಮತ್ತು ನೋಂದಣಿಯಾಗದ) | ೧೧೨೯೩ | ೧೨೦೬೪ | ೧೭೯೩೭ | ೧೬೧೦೬ | ೨೧೦೮೬ |
| ೬) | ನಿರ್ಮಾಣ | ೭೨೭೩ | ೮೬೨೮ | ೯೫೭೩ | ೧೦೩೪೩ | ೧೦೯೩೪ |
| ೭) | ವಿದ್ಯುತ್, ಅನಿಲ, ನೀರು ಸರಬರಾಜು | ೧೮೧೬ | ೧೪೭೨ | ೧೫೨೬ | ೧೯೦೪ | ೧೪೯೮ |
| | **ದ್ವಿತೀಯ ವಲಯದ ಒಟ್ಟು** | **೨೦೩೮೨** | **೨೨೧೬೪** | **೨೯೦೩೬** | **೨೮೩೫೩** | **೩೩೫೧೮** |
| ೮) | ರೈಲ್ವೆ | ೩೨೮ | ೩೯೯ | ೪೬೫ | ೬೧೨ | ೨೬೭ |
| ೯) | ಇತರೆ ಸಾರಿಗೆ | ೧೭೨೦ | ೩೨೦೩ | ೩೪೪೬ | ೪೨೦೮ | ೩೭೬೬ |
| ೧೦) | ಸಂಗ್ರಹಣೆ | ೦೪ | ೦೪ | ೦೪ | ೦೪ | ೦೪ |
| ೧೧) | ಸಂಪರ್ಕ | ೨೮೬೭ | ೨೮೭೮ | ೩೩೩೯ | ೫೯೭೪ | ೭೬೯೬ |
| ೧೨) | ವ್ಯಾಪಾರ, ಹೋಟೆಲ್ ಮತ್ತು ಉಪಾಹಾರ ಗೃಹಗಳು | ೧೩೬೩೦ | ೧೨೮೦೯ | ೨೦೧೭೭ | ೨೫೫೮೦ | ೨೧೩೯೩ |
| ೧೩) | ಬ್ಯಾಂಕು ಮತ್ತು ವಿಮೆ | ೧೫೦೮೩ | ೨೦೬೭೪ | ೨೦೨೧೫ | ೧೫೯೬೧ | ೨೨೯೨೭ |
| ೧೪) | ಸ್ಥಿರಾಸ್ತಿ, ವಾಸಗೃಹಗಳ ಒಡೆತನ ಮತ್ತು ವ್ಯವಹಾರ | ೭೪೦೫ | ೮೧೧೫ | ೮೭೪೭ | ೯೫೧೧ | ೧೦೩೬೪ |
| ೧೫) | ಸಾರ್ವಜನಿಕ ಆಡಳಿತ | ೨೦೧೫ | ೨೮೩೫ | ೨೬೫೪ | ೨೪೪೧ | ೨೪೦೦ |
| ೧೬) | ಇತರೆ ಸೇವೆಗಳು | ೧೪೫೦೭ | ೧೭೫೨೩ | ೧೯೪೭೫ | ೧೭೮೦೦ | ೧೯೨೯೪ |
| | **ತೃತೀಯ ವಲಯದ ಒಟ್ಟು** | **೫೭೫೫೯** | **೬೮೪೪೦** | **೭೮೫೨೨** | **೮೨೦೯೧** | **೮೮೧೧೧** |
| ೧೭) | ನಿವ್ವಳ ಜಿಲ್ಲಾದಾಯ | ೧೧೫೨೮೯ | ೧೨೭೩೨೮ | ೧೫೪೫೨೮ | ೧೫೬೫೨೯ | ೧೬೭೨೫೭ |
| ೧೮) | ಜಿಲ್ಲಾದಾಯದಲ್ಲಿ ಜಿಲ್ಲೆಯ ಸ್ಥಾನ (ಸಂಖ್ಯೆಗಳಲ್ಲಿ) | ೧೮ | ೧೮ | ೧೭ | ೧೬ | ೧೫ |
| ೧೯) | ತಲಾದಾಯ (ರೂ.ಗಳಲ್ಲಿ) | ೯೫೫೦ | ೧೧೬೭೯ | ೧೪೦೦೧ | ೧೩೯೫೭ | ೧೪೭೬೨ |
| ೨೦) | ತಲಾದಾಯ ಜಿಲ್ಲೆಯ ಸ್ಥಾನ (ಸಂಖ್ಯೆಗಳಲ್ಲಿ) | ೦೯ | ೪ | ೦೫ | ೦೫ | ೦೪ |

*ಆಧಾರ : ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು.*

ಏರುಮುಖವಾಗಿತ್ತು. ಇದರಿಂದಾಗಿ ಭಾರತ ಸರ್ಕಾರ ಇಕ್ಕಟ್ಟಿಗೆ ಸಿಲುಕಿತು. ಅಗತ್ಯ ವಸ್ತುಗಳ ಬೆಲೆ ಏರಿಕೆಯೂ ಜಿಲ್ಲೆಯ ಸಾಮಾನ್ಯ ಆರ್ಥಿಕ ಸ್ಥಿತಿಗತಿಗಳ ಮೇಲೆ ತೀವ್ರ ಪರಿಣಾಮ ಬೀರಿತ್ತು. ಇದು ವ್ಯವಸಾಯೋತ್ಪನ್ನವಾದ ಸರಕಾದ ಭತ್ತದ ಮೇಲೆ ಮಹತ್ತರ ಪ್ರಭಾವ ಬೀರಿತ್ತು .

ಭತ್ತವು ಜನರಿಗೆ ಮುಖ್ಯ ಆಧಾರವಾಗಿತ್ತು. ಭತ್ತದ ಬೆಲೆ ಹೆಚ್ಚಳಕ್ಕೆ ಜನಸಂಖ್ಯಾ ಹೆಚ್ಚಳ, ಭತ್ತದ ಉತ್ಪಾದನೆಯಲ್ಲಿ ಕುಂಠಿತ, ಅತಿವೃಷ್ಟಿಯಿಂದಾಗಿ ಬೆಳೆನಾಶ ಹಾಗೂ ಆಮದು ಮತ್ತು ರಫ್ತು ಮುಂತಾದ ಸ್ವಾಭಾವಿಕ ಅಂಶಗಳು ಪ್ರಮುಖ ಕಾರಣಗಳಾಗಿದ್ದವು. ಈ ಎಲ್ಲಾ ಅಂಶಗಳು ಕಾಲಕಾಲಕ್ಕೆ ಬೆಲೆ ನಿರ್ಧರಿಸಲು ಪ್ರಮುಖ ಅಂಶಗಳಾಗಿವೆ. ಬೃಹತ್ ಪ್ರಮಾಣದ ಜನಸಂಖ್ಯಾ ಹೆಚ್ಚಳ ಬೆಲೆ ಏರಿಕೆಗೆ ಮತ್ತೊಂದು ಪ್ರಮುಖ ಅಂಶವಾಗಿದೆ. ಈ ಅಂಶ ಕೇವಲ ಉಡುಪಿ ಜಿಲ್ಲೆಗೆ ಮಾತ್ರ ಸೀಮಿತವಾಗಿರದೆ, ರಾಜ್ಯ ಹಾಗೂ ದೇಶಕ್ಕೂ ಅನ್ವಯಿಸುತ್ತದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ತಂದ ಹಲವು ಆಹಾರ ನೀತಿಗಳು, ಆಮದು–ರಫ್ತು ನೀತಿಗಳ ಪರಿಣಾಮ, ಉತ್ಪಾದಕರು–ಅನುಭೋಗಿಗಳ ನಡುವಿನ ಸಂಘರ್ಷ, ಉತ್ಪಾದನಾ ವೆಚ್ಚದಲ್ಲಿ ಹೆಚ್ಚಳ, ವರ್ತಕರ ಅಕ್ರಮ ಸಂಗ್ರಹಣೆ, ಹಣದುಬ್ಬರ ಮುಂತಾದ ಅಂಶಗಳು ಬೆಲೆ ಏರಿಕೆ ಮೇಲೆ ಮಹತ್ತರವಾದ ಪರಿಣಾಮ ಬೀರಿವೆ.

ಜಿಲ್ಲೆಯಲ್ಲಿ ೧೯೦೦ಕ್ಕೆ ಮುಂಚಿನ ಬೆಲೆಗಳ ಬಗ್ಗೆ ಮಾಹಿತಿ ಲಭ್ಯವಿರುವುದಿಲ್ಲ. ೨೦ನೇ ಶತಮಾನದ ಪ್ರಾರಂಭದಲ್ಲಿ ಒಂದು ರೂಪಾಯಿಗೆ ೮೦ ತೊಲದ ಸೇರಿನಲ್ಲಿ ಲಭ್ಯವಿದ್ದ ಅಕ್ಕಿಯ ಬೆಲೆ ಕೆಳಗಿನಂತಿದೆ. ಜಿಲ್ಲೆಯಲ್ಲಿ ೧೯೦೨-೦೩ರಲ್ಲಿ ಅಕ್ಕಿ ಒಂದು ರೂಪಾಯಿಗೆ ೧೩.೮ ಸೇರು ಸಿಗುತ್ತಿದ್ದರೆ, ಅದರ ಮುಂದಿನ ವರ್ಷ ೧೧.೩ ಸೇರುಗಳಿಗೆ ಹೆಚ್ಚಳಗೊಂಡಿತು. ೧೯೦೪-೦೫ರಲ್ಲಿ ೧೨.೫ ಸೇರುಗಳಿಗೆ ಕುಸಿಯಿತು. ೨೦ನೇ ಶತಮಾನದ ಆರಂಭದ ದಶಕಗಳಲ್ಲಿ ಅಗತ್ಯ ವಸ್ತುಗಳ ಸರಾಸರಿ ಬೆಲೆ ಹಿಂದಿನ ವರ್ಷಗಳಿಗಿಂತ ಕಡಿಮೆಯಿತ್ತು. ೧೮೯೧ ರಿಂದ ೧೯೦೦ರ ಹತ್ತು ವರ್ಷಗಳಲ್ಲಿ ಹೋಲಿಸಿದಾಗ ಬೆಲೆಗಳಲ್ಲಿ ಸಾಮ್ಯತೆ ಕಂಡುಬಂದಿದ್ದರೂ (ಈ ದಶಕದ ೫ ವರ್ಷಗಳಲ್ಲಿ ಭೀಕರ ಬರಗಾಲವನ್ನು ಹೊರತುಪಡಿಸಿ), ಎರಡನೇ ದರ್ಜೆಯ ಅಕ್ಕಿ ಮತ್ತು ಭತ್ತದ ಬೆಲೆಯಲ್ಲಿ ಸ್ವಲ್ಪ ಪ್ರಮಾಣದ ಬೆಲೆ ಏರಿಕೆ ಕಂಡುಬಂದಿತ್ತು.

ಜಿಲ್ಲೆಯು ಅಕ್ಕಿಯಲ್ಲಿ ಸ್ವಾವಲಂಬನೆ ಸಾಧಿಸಿರುವುದು ಗಮನಾರ್ಹವಾಗಿದೆ. ಸಾರಿಗೆ ಸಂಪರ್ಕದ ಕೊರತೆಯಿಂದಾಗಿ, ಸ್ಥಳೀಯವಾಗಿ ಬೆಳೆದ ಅಷ್ಟು ಅಕ್ಕಿಯನ್ನು ಅನುಭೋಗಕ್ಕಾಗಿ ಸ್ಥಳೀಯವಾಗಿಯೇ ಬಳಸಲಾಗುತ್ತಿತ್ತು. ಈ ಸ್ಥಿತಿ ತುರ್ತು ಸಾರಿಗೆ-ಸಂಪರ್ಕ ಜಾಲ ವಿಸ್ತರಿಸುವವರೆಗೆ ಮುಂದುವರಿದಿತ್ತು. ಈ ಸೌಲಭ್ಯದಿಂದ ಪ್ರೋತ್ಸಾಹಿತರಾದ ಉತ್ಪಾದಕರು ಅಕ್ಕಿಯನ್ನು ಉತ್ತಮ ಬೆಲೆಗೆ ಬೇಡಿಕೆ ಇರುವ ಎಲ್ಲಾ ಸ್ಥಳಗಳಿಗೂ ಕಳುಹಿಸಿಕೊಡುತ್ತಿದ್ದರು. ಆ ಸಂದರ್ಭದಲ್ಲಿ ಅಕ್ಕಿಯ ಬೆಲೆ ಗಗನಕ್ಕೇರಿತು. ೧೯೦೬-೦೭ರ ಸುಗ್ಗಿಯ ಕಾಲದಲ್ಲಿ ಒಂದು ಇಂಪೀರಿಯಲ್ ಮಾಂಡ್ (ಮಣ) ಅಕ್ಕಿಯ ಬೆಲೆ ರೂ.೪-೧-೦ ಆಗಿತ್ತು. (೧೨ ಕಾಸಿಗೆ ಒಂದು ಆಣೆ ಲೆಕ್ಕದಲ್ಲಿ) ಇದು ೧೯೦೮ರಲ್ಲಿ ರೂ.೫-೩-೦ ಗೆ ಹೆಚ್ಚಳಗೊಂಡಿತ್ತು. ಆದರೆ ೧೯೧೦-೧೧ರಲ್ಲಿ ರೂ. ೩-೧೨-೦ ಗಳಿಗೆ ಕುಸಿಯಿತು. ಮತ್ತೆ ೧೯೧೧-೧೨ರಲ್ಲಿ ರೂ.೪-೭-೦ಕ್ಕೆ ಹೆಚ್ಚಳಗೊಂಡಿತು. ಮತ್ತೆ ೧೯೧೨-೧೩ರಲ್ಲಿ ರೂ.೪-೧೩-೦ಗೆ ಹೆಚ್ಚಳಗೊಂಡಿತು. ಮೊದಲ ಮಹಾಯುದ್ಧದ (೧೯೧೪) ಸಂದರ್ಭದಲ್ಲಿ ರೂ.೪-೧೦-೦ಕ್ಕೆ ಕುಸಿಯಿತು. ಆದರೆ ಮೊದಲ ಮಹಾಯುದ್ಧದ ಮುಕ್ತಾಯದ ಹೊತ್ತಿಗೆ ರೂ.೬-೧೧-೦ಗಳಿಗೆ ತೀವ್ರವಾಗಿ ಹೆಚ್ಚಳಗೊಂಡಿತು. ೧೯೩೦ರ ಆರ್ಥಿಕ ಮುಗ್ಗಟ್ಟಿನಿಂದಾಗಿ ಬೆಲೆಗಳಲ್ಲಿ ವ್ಯತ್ಯಾಸ ಕಂಡುಬಂದಿತು. ಈ ಅವಧಿಯಲ್ಲಿ ಪ್ರತಿ ಮಾಂಡಿನ ಬೆಲೆ ಸರಾಸರಿ ರೂ.೫-೮-೯ ಆಗಿತ್ತು. ಮತ್ತೆ ಪ್ರತಿ ಮಾಂಡಿನ ಬೆಲೆ ೩-೧೪-೦ ಯಿಂದ ರೂ.೪-೪-೦ ಚೇತರಿಸಿ ಕೊಂಡಿತು. ಈ ಸ್ಥಿತಿ ಎರಡನೇ ಮಹಾಯುದ್ಧ ಪ್ರಾರಂಭವಾಗುವವರೆಗೂ (ಸೆಪ್ಟೆಂಬರ್ ೧೯೩೯) ಮುಂದುವರಿದಿತ್ತು. ಆಗಿನ ಬೆಲೆ ಪ್ರವೃತ್ತಿ ಅಂತರರಾಷ್ಟ್ರೀಯ ಮಟ್ಟದಲ್ಲಿದ್ದಂತೆಯೇ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಮುಂದುವರಿದಿತ್ತು. ಉತ್ಪಾದಕರು, ಮುಂದೆ ಉತ್ತಮ ಬೆಲೆ ಸಿಗಬಹುದೆಂದು ಸರಕುಗಳನ್ನು ಸಂಗ್ರಹಿಸಿದರು. ಹಾಗೆಯೇ ವ್ಯಾಪಾರಸ್ಥರು ಸಹ ಲಾಭದ ಆಸೆಯಿಂದ ಅಗತ್ಯ ವಸ್ತುಗಳನ್ನು ಮಾರುಕಟ್ಟೆಗೆ ಬಿಡಲಿಲ್ಲ. ಈ ಎಲ್ಲಾ ಪ್ರವೃತ್ತಿಗಳು ಸಾಮಾನ್ಯವಾಗಿ ಬೆಲೆಗಳ ಮೇಲೆ ಪ್ರಭಾವ ಬೀರಿದವು. ಸರ್ಕಾರ ಕೂಡ ಎಚ್ಚರಿಕೆಯಿಂದ ಈ ಎಲ್ಲಾ ಬೆಳವಣಿಗೆಗಳನ್ನು ಗಮನಿಸುತ್ತಿತ್ತು. ಆದ್ದರಿಂದ ಬೆಲೆ ಏರಿಕೆಯನ್ನು ನಿಯಂತ್ರಿಸಲು ಹಲವು ಅಗತ್ಯ ಕ್ರಮ ಕೈಗೊಂಡಿತು. ಯುದ್ಧ ಮುಂದುವರಿದಂತೆಲ್ಲಾ ಅಗತ್ಯ ವಸ್ತುಗಳ ಸರಬರಾಜು ಕುಸಿಯಿತು. ಬೆಲೆ ನಿಯಂತ್ರಿಸಲು ಸಾಧ್ಯವಾಗಲಿಲ್ಲ. ಆಗ ಸರ್ಕಾರ ಪಡಿತರ ವ್ಯವಸ್ಥೆಯನ್ನು ಜಾರಿಗೆ ತಂದು ಅಕ್ಕಿ ಮತ್ತು ಸಕ್ಕರೆಯನ್ನು ವಿತರಿಸಲಾಯಿತು. ಸರ್ಕಾರ ಕಡ್ಡಾಯವಾಗಿ ಆಹಾರಧಾನ್ಯಗಳನ್ನು 'ಲೆವಿ'ಯ ಮೂಲಕ ವಸೂಲಿ ಮಾಡಿತು. ಅಗತ್ಯ ವಸ್ತುಗಳಾದ ಅಕ್ಕಿ, ಸಕ್ಕರೆ, ಬೇಳೆ, ಕಾಳು ಮುಂತಾದವುಗಳು ಸರಳವಾಗಿ ಮಾರುಕಟ್ಟೆಯಲ್ಲಿ ಲಭ್ಯವಿರುವಂತೆ ಗಮನಹರಿಸಲಾಯಿತು. ಪರಿಣಾಮವಾಗಿ ಬೆಲೆಗಳ ಪ್ರವೃತ್ತಿಯಲ್ಲಿ ಏರಿಕೆ ಕಂಡುಬರಲಿಲ್ಲ.

ಎರಡನೇ ಮಹಾಯುದ್ಧದ ಮುಕ್ತಾಯದ ಹೊತ್ತಿಗೆ (೧೯೪೫) ಅಗತ್ಯವಸ್ತುಗಳ ಬೆಲೆ ನಿಯಂತ್ರಣದ ಬಗ್ಗೆ ಕಠಿಣಕ್ರಮ ಕೈಗೊಂಡ ಪ್ರಯುಕ್ತ ಬೆಲೆಯು ನಿಯಂತ್ರಣದಲ್ಲಿತ್ತು. ಆದರೆ ಯುದ್ಧ ಮುಕ್ತಾಯದ ನಂತರ ಪಡಿತರ ಪದ್ಧತಿಯ ಮೇಲೆ ವಿಧಿಸಿದ್ದ ನಿಯಂತ್ರಣವನ್ನು ತೆಗೆದುಹಾಕಿದ್ದರಿಂದ ಬೆಲೆ ಏರಿಕೆಯ ಮುನ್ಸೂಚನೆ ಸಿಕ್ಕಿತು. ಅಗತ್ಯವಸ್ತುಗಳ ಕಡಿಮೆ ಸರಬರಾಜು ಹಾಗೂ ಹಣದುಬ್ಬರದಿಂದಾಗಿ ಬೆಲೆಯು

ಗಗನಕ್ಕೇರಿತ್ತು. ೧೯೫೨–೫೩ರಲ್ಲಿ ಮಂಗಳೂರು ಪ್ರದೇಶದಲ್ಲಿ ಮಾರಾಟವಾದ ಅಕ್ಕಿಯ ಬೆಲೆ ಪ್ರತಿ ಮಾಂಡಿಗೆ (ಮಣ) ರೂ.೧೯.೮೩ ಆಗಿತ್ತು. ಈ ಬೆಲೆ ೧೯೦೪–೦೫ಕ್ಕೆ ಹೋಲಿಸಿದರೆ ಸುಮಾರು ನಾಲ್ಕು ಪಟ್ಟು ಜಾಸ್ತಿಯಾಗಿತ್ತು. ಈ ಹೆಚ್ಚಳ ೧೯೫೪ ರಿಂದ ೧೯೫೬ರವರೆಗೂ ಮುಂದುವರಿದಿತ್ತು. ಆಗ ಸರಾಸರಿ ಅಕ್ಕಿಯ ಬೆಲೆ ೮೨.೨೭ ಪೌಂಡ್ ಅಳತೆಯ ಪ್ರಮಾಣಬದ್ಧ ಮಾಂಡಿಗೆ (ಮಣಕ್ಕೆ) ರೂ.೨೩ ಆಗಿತ್ತು. ೧೯೫೩ರಿಂದ ೧೯೫೮ರವರೆಗೆ ಇದ್ದ ಬೆಲೆ ಪ್ರವೃತ್ತಿಯನ್ನು ಕೋಷ್ಟಕ ೮.೫ರಲ್ಲಿ ನೀಡಲಾಗಿದೆ.

**ಕೋಷ್ಟಕ ೮.೫ : ೧೯೫೩ ರಿಂದ ೧೯೫೮ರವರೆಗೆ ಇದ್ದ ಅಕ್ಕಿಯ ಬೆಲೆ ಪ್ರವೃತ್ತಿಗಳು**

| ವರ್ಷ | ೪೨ ಸೇರಿನ ಮುಡಿಗೆ ಬೆಲೆ (೮೪ ಪೌಂಡಿಗೆ ಸಮನಾದ) | |
|---|---|---|
| | ಉತ್ತಮ ದರ್ಜೆ<br>ರೂ–ಆಣೆ–ಪೈ | ಎರಡನೇ ದರ್ಜೆ<br>ರೂ–ಆಣೆ–ಪೈ |
| ೧೯೫೩ ಜನವರಿಯಿಂದ ಮಾರ್ಚವರೆಗೆ | ೨೪–೧೪–೦ | ೨೩–೦೦–೦ |
| ೧೯೫೪ „ „ | ೨೫–೦೬–೦ | ೨೩–೦೮–೦ |
| ೧೯೫೫ „ „ | ೨೧–೦೦–೦ | ೨೦–೦೦–೦ |
| ೧೯೫೬ „ „ | ೧೯–೦೮–೦ | ೧೭–೧೨–೦ |
| ೧೯೫೭ „ „ | ೨೩–೦೪–೦ | ೧೯–೦೮–೦ |
| ೧೯೫೮ „ „ | ೨೫–೦೪–೦ | ೨೨–೧೨–೦ |

** ಒಂದು ಕೊರಜಿ (Koraji)= ೪೨ ಮುರ (Muras), ಒಂದು ಮುರ=ಮೂರು ಕಲಸಿಗೆ (Kalasige), ಒಂದು ಕಲಸಿಗೆ=೧೪ ಸೇರು, ಒಂದು ಸೇರು= ನಾಲ್ಕು ಪಾವು (Pavu)*

ಜಿಲ್ಲೆಯಲ್ಲಿ ಮಾನ್ಸೂನ್ ಕಾಲದಲ್ಲಿ ಸ್ಥಳೀಯವಾಗಿ ಉತ್ಪಾದಿಸುವ ಅಕ್ಕಿ ಮುಗಿದು ಹೋಗುವುದರಿಂದ ಆಮದು ಅಕ್ಕಿಯನ್ನೇ ಅವಲಂಬಿಸಬೇಕಾಗಿರುವುದರಿಂದ, ಅಕ್ಕಿಯ ಬೆಲೆ ಇತರೆ ಸ್ಥಳಗಳಿಗೆ ಹೋಲಿಸಿದರೆ ಗಗನಕ್ಕೇರಿರುತ್ತದೆ. ೧೯೩೯ರ ಅಂತ್ಯಕ್ಕೆ ಅಕ್ಕಿಯ ಬೆಲೆಗೂ ೧೯೫೪ರ ಬೆಲೆಗೂ ಹೋಲಿಸಿದರೆ ಶೇ.೧೦ರಷ್ಟು ಹೆಚ್ಚಳವಾಗಿರುವುದು ಕಂಡುಬಂದಿದೆ. ಉತ್ತಮದರ್ಜೆಯ ಅಕ್ಕಿಯ ಬೆಲೆ (ಕೈಯಿಂದ ಕುಟ್ಟಿದ) ರೂ.೩೩ ಆಗಿದ್ದರೆ, ಎರಡನೇ ದರ್ಜೆಯ ಅಕ್ಕಿಯ ಬೆಲೆ ರೂ.೩೦ ಆಗಿತ್ತು (೮೪ ಪೌಂಡಿನ, ೪೨ ಸೇರಿನ ಪ್ರತಿ ಮೊರಕ್ಕೆ).

## ಬೆಲೆ ನಿಯಂತ್ರಣ

ಬೆಲೆ ನಿಯಂತ್ರಣ ಮಾರ್ಗಸೂಚಿಯಂತೆ ಮದ್ರಾಸ್ ಸರ್ಕಾರ ಹಲವು ಅಗತ್ಯ ಕ್ರಮಗಳನ್ನು ಕೈಗೊಂಡಿತು. ಹಲವಾರು ಪ್ರದೇಶಗಳಲ್ಲಿ ಬೆಲೆಗಳ ನಿಯಂತ್ರಣ ಸಲಹಾ ಸಮಿತಿಗಳನ್ನು ರಚಿಸಲಾಯಿತು. ೧೯೪೨ ಪ್ರೊವಿನ್ಸಿಯಲ್ ಸರ್ಕಾರ ಬೆಲೆಗಳ ನಿಯಂತ್ರಣಕ್ಕೆ ಪೂರಕವಾಗಿ ಪೂರ್ಣಕಾಲಿಕಾ ಆಯುಕ್ತರನ್ನು ನೇಮಿಸಲಾಯಿತು. ಅದೇ ವರ್ಷ ಸರ್ಕಾರ ಆಹಾರಸಾಮಗ್ರಿಗಳ ನಿಯಂತ್ರಣಕ್ಕೂ ಆದೇಶಿಸಿತು. ಆ ಆದೇಶದ ಪ್ರಕಾರ ಮದ್ರಾಸ್ ಪ್ರೆಸಿಡೆನ್ಸಿಯಿಂದ ಅನುಮತಿ ಪಡೆದಿರುವ ವಸ್ತುಗಳನ್ನು ಬಿಟ್ಟು ಹೊರಗಡೆಯಿಂದ ಬರುವ ಭತ್ತ ಅಥವಾ ಅಕ್ಕಿಯನ್ನು ನಿಷೇಧಿಸಲಾಗಿತ್ತು. ಆಹಾರಸಾಮಗ್ರಿಗಳ ಸರಬರಾಜು ದುರ್ಬಲಗೊಂಡಿದ್ದರೂ, ಸರ್ಕಾರ ಆಹಾರಸಾಮಗ್ರಿಗಳನ್ನು ಖರೀದಿಸಲು ನಿರ್ಧರಿಸಿತು. ಇದರ ಪ್ರಕಾರ ಉತ್ಪಾದಕರು ಆಹಾರಸಾಮಗ್ರಿಗಳನ್ನು ಕಡ್ಡಾಯವಾಗಿ ಸರ್ಕಾರ ಅಥವಾ ಅಧಿಕೃತ ಏಜೆಂಟರ ಮೂಲಕ ಮಾರಾಟ ಮಾಡಬೇಕಾಗಿತ್ತು. ಆದರೆ ೧೯೫೨ರಲ್ಲಿ ಆಹಾರಪದಾರ್ಥಗಳ ನಿಯಂತ್ರಣಕ್ರಮಗಳನ್ನು ಕೈಗೊಂಡಿದ್ದರೂ, ಬೆಲೆಗಳು ಮಾತ್ರ ಕಡಿಮೆಯಾಗಲಿಲ್ಲ. ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಗಳನ್ನು ಹೋಗಲಾಡಿಸಲು ನ್ಯಾಯಬೆಲೆ ಅಂಗಡಿಗಳನ್ನು ಆರಂಭಿಸಿ, ಅದರ ಮೂಲಕ ಅಗತ್ಯ ಆಹಾರಸಾಮಗ್ರಿಗಳನ್ನು ಮಾರಾಟ ಮಾಡಿತು. ಬೆಲೆಯಲ್ಲಿ ಸ್ಥಿರತೆಯನ್ನು ಸಾಧಿಸಲು ಕಾಪುದಾಸ್ತಾನು ಮಾಡಲಾಯಿತು. ವ್ಯವಸಾಯ ಉತ್ಪನ್ನಗಳ ಮೇಲೆ ಸಾಲ ನೀಡದಂತೆ ಬ್ಯಾಂಕುಗಳು ಮಾರ್ಗದರ್ಶನ ಮಾಡಿದವು. ಆದರೆ ಈ ಕ್ರಮಗಳು ಬೆಲೆ ನಿರ್ಧಾರದ ಮೇಲೆ ಸೂಕ್ತ ಪರಿಣಾಮ ಬೀರಲಿಲ್ಲ. ಅಗತ್ಯ ವಸ್ತುಗಳ ಬೆಲೆಗಳು ಗಗನಕ್ಕೇರಿದವು.

೧೯೬೬–೬೭ರಲ್ಲಿ ಕ್ವಿಂಟಾಲ್ ಭತ್ತವು ೭೪.೮೫ ರೂಪಾಯಿಗಳಿಗೆ ಮಾರಾಟ ಮಾಡಲಾಗಿತ್ತು. ಜಿಲ್ಲೆಯಲ್ಲಿ ೧೯೬೮ರಲ್ಲಿ ಸರಾಸರಿ ವಾರ್ಷಿಕ ಬೆಲೆ ದಪ್ಪ (ಕುಚ್ಚುಲು) ಅಕ್ಕಿಗೆ ಒಂದು ರೂಪಾಯಿಗೆ ೦.೭೨೭ ಕೆ.ಜಿ. ಲಭ್ಯವಿತ್ತು. ಇದೇ ವೇಳೆ ರಾಜ್ಯದ ಸರಾಸರಿ ಬೆಲೆ ಒಂದು ರೂಪಾಯಿಗೆ ೦.೭೬೯ ಕೆ.ಜಿಗಳಾಗಿತ್ತು. ಮುಂದಿನ ಎರಡು ವರ್ಷಗಳ ಅವಧಿಯಲ್ಲಿ ಮತ್ತೆ ಬೆಲೆ ಹೆಚ್ಚಳವಾಯಿತು. ಜಿಲ್ಲೆಯಲ್ಲಿ ೧೯೬೯ರಲ್ಲಿ ದಪ್ಪ (ಕುಚ್ಚುಲು) ಅಕ್ಕಿಯು ಒಂದು ರೂಪಾಯಿಗೆ ೦.೮೪೧ ಕೆ.ಜಿ. ಮಾರಾಟವಾಗಿದ್ದರೆ, ೧೯೭೦ರಲ್ಲಿ ೦.೯೧೨ ಕೆ.ಜಿ.ಗೆ ಮಾರಾಟವಾಗಿತ್ತು. ಇದೇ ಅವಧಿಯಲ್ಲಿ ರಾಜ್ಯದ ಸರಾಸರಿ ಬೆಲೆ ಕ್ರಮವಾಗಿ ಒಂದು ರೂಪಾಯಿಗೆ ೦.೮೦೨ಕೆ.ಜಿ. ಹಾಗೂ ೦.೮೮೬ ಕೆ.ಜಿ. ಆಗಿತ್ತು. ಉಡುಪಿ ಜಿಲ್ಲೆಯಲ್ಲಿ ೨೦೦೧ ರಿಂದ ೨೦೦೩ರವರೆಗೆ ಅಗತ್ಯ ವಸ್ತುಗಳ ಸಗಟು ಹಾಗೂ ಚಿಲ್ಲರೆ ಬೆಲೆಯನ್ನು ಮುಂದಿನ ಕೋಷ್ಟಕ ೮.೬ರಲ್ಲಿ ನೀಡಿದೆ.

**ಕೋಷ್ಟಕ ೮.೬ : ೨೦೦೧ ರಿಂದ ೨೦೦೩ರವರೆಗೆ ಜಿಲ್ಲೆಯ ಅಗತ್ಯ ವಸ್ತುಗಳ ಸಗಟು ಮತ್ತು ಚಿಲ್ಲರೆ ಬೆಲೆಗಳ ವಿವರ**

ಸಗಟು ಬೆಲೆ: ಕ್ವಿಂಟಾಲ್‌ಗಳಲ್ಲಿ
ಚಿಲ್ಲರೆ ಬೆಲೆ : ಪ್ರತಿ ಕೆ. ಜಿ.ಗೆ

| ಕ್ರ ಸಂ. | ಪದಾರ್ಥಗಳು | ವರ್ಷ | | | | | |
|---|---|---|---|---|---|---|---|
| | | ೨೦೦೧ | | ೨೦೦೨ | | ೨೦೦೩ | |
| | | ಸಗಟು | ಚಿಲ್ಲರೆ | ಸಗಟು | ಚಿಲ್ಲರೆ | ಸಗಟು | ಚಿಲ್ಲರೆ |
| ೧) | ಭತ್ತ (ಮಧ್ಯಮ) | ೫೮೧.೨೫ | – | – | – | – | – |
| ೨) | ಅಕ್ಕಿ (ಉತ್ತಮ) | ೧೫೫೭ | ೧೬.೬೭ | ೧೬೯೧.೦೦ | ೧೮.೦೭ | ೧೭೭೯ | ೧೮.೭೧ |
| ೩) | ಅಕ್ಕಿ (ಮಧ್ಯಮ) | ೧೩೪೨ | ೧೪.೪೪ | ೧೩೬೭.೦೦ | ೧೪.೭೯ | ೧೫೬೭ | ೧೫.೬೭ |
| ೪) | ಜೋಳ (ಬಿಳಿ) | ೭೬೧ | ೮.೬೫ | ೮೯೬ | ೧೦.೦೪ | ೮೯೪ | ೧೦.೨೫ |
| ೫) | ಉದ್ದು | ೩೮೧೭ | ೩೯.೭೯ | ೩೨೪೬ | ೩೫.೫೪ | ೨೮೬೯ | ೩೦.೦೪ |
| ೬) | ಹುರುಳಿ | ೧೧೦೫ | ೧೨.೧೩ | ೧೦೬೯ | ೧೨.೧೦ | ೧೦೫೧ | ೧೨ |
| ೭) | ಅಲಸಂದೆ | ೨೨೬೩ | ೨೩.೭೧ | ೨೪೧೩ | ೨೫.೭೧ | ೨೬೭೫ | ೨೮ |
| ೮) | ಒಣಮೆಣಸಿನಕಾಯಿ ಬ್ಯಾಡಗಿ: | ೬೭೦೯ | ೬೬.೦೮ | ೫೭೨೧ | ೬೨.೬೭ | ೬೦೮೩ | ೬೬.೬೭ |
| | ಇತರೆ: | ೪೬೧೭ | ೫೩.೫೪ | ೪೭೫೮ | ೫೩.೯೨ | ೪೯೩೮ | ೫೪.೩೮ |
| ೯) | ಈರುಳ್ಳಿ | ೬೦೬ | ೭.೫ | ೪೮೪ | ೬.೬೩ | ೫೧೯ | ೭.೧೯ |
| ೧೦) | ಆಲೂಗೆಡ್ಡೆ | ೭೬೭ | ೮.೦೬ | ೭೨೭ | ೯.೭೧ | ೫೮೫ | ೭.೯೮ |
| ೧೧) | ತೆಂಗಿನಕಾಯಿ (ಸಾವಿರಕ್ಕೆ) | ೩೭೩೩ | ೪.೪೨ | ೫೪೩೩ | ೫.೯೪ | ೬೧೨೫ | ೭.೦೬ |
| ೧೨) | ಗೋಧಿ | ೧೦೪೫ | ೧೧.೬೯ | ೧೧೨೫ | ೧೨.೩೮ | ೧೦೫೦ | ೧೧.೫೮ |
| ೧೩) | ಹುಣಸೆಹಣ್ಣು | ೨೦೬೩ | ೨೭.೬೮ | ೨೨೮೮ | ೨೫.೧೩ | ೨೫೬೩ | ೨೭.೪೬ |

***ಆಧಾರ:*** *ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು.*
***ಸೂಚನೆ:*** *ತೆಂಗಿನ ಕಾಯಿಯ ಚಿಲ್ಲರೆ ಬೆಲೆ ಒಂದಕ್ಕೆ.*

## ಕೂಲಿ

ಯಾವುದೇ ಪ್ರದೇಶದಲ್ಲಿ ಕೂಲಿಯ ಸೂಚ್ಯಂಕವು ಬೆಲೆಯ ಪ್ರವೃತ್ತಿಯೊಂದಿಗೆ ನಿಕಟವಾದ ಸಂಬಂಧ ಹೊಂದಿದೆ. ಪ್ರತಿಫಲವಾಗಿ ಆಹಾರಪದಾರ್ಥಗಳ ಬೆಲೆ ಹೆಚ್ಚಳದಿಂದಾಗಿ ಕೂಲಿ ದರದಲ್ಲೂ ಹೆಚ್ಚಳ ಉಂಟಾಗುತ್ತದೆ. ಈ ಪ್ರವೃತ್ತಿ ಹಣದುಬ್ಬರ ಸ್ಥಿತಿಯನ್ನು ಸೂಚಿಸುತ್ತದೆ. ಕೂಲಿಯ ದರಗಳು ಆಯಾ ಪ್ರದೇಶದ ಆರ್ಥಿಕ ಸ್ಥಿತಿಗತಿಗಳ ಆಧಾರದ ಮೇಲೆ ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸವಾಗುತ್ತವೆ.

ಹಿಂದಿನ ಕಾಲದಲ್ಲಿ ಕೃಷಿ ಕಾರ್ಮಿಕರ ನಡುವೆ ಕೂಲಿಯ ದರದಲ್ಲಿ ವ್ಯತ್ಯಾಸವಿತ್ತು. ಜಿಲ್ಲೆಯ ಕೆಲವು ಭಾಗಗಳಲ್ಲಿ ಕೂಲಿಯು ಹಣದ ರೂಪದಲ್ಲಿಯೂ, ಕೆಲವು ಭಾಗಗಳಲ್ಲಿ ದವಸ ರೂಪದಲ್ಲಿಯೂ ಸಿಗುತ್ತಿದ್ದು, ಅಸಮಾನತೆಯಿಂದ ಕೂಡಿತ್ತು. ಆದರೆ ಆಧುನಿಕ ಕಾಲದಲ್ಲಿ ಕೂಲಿಯನ್ನು ಹಣದ ರೂಪದಲ್ಲಿ

ನೀಡುವುದು ಅತ್ಯಂತ ಅವಶ್ಯಕ. ಜಿಲ್ಲೆಯ ವಿವಿಧ ಭಾಗಗಳಲ್ಲಿ ಕೂಲಿಯ ದರದಲ್ಲಿರುವ ಅಸಮಾನತೆಗೆ ಸ್ಥಳೀಯ ಕಾರಣಗಳು ಮುಖ್ಯವಾಗಿದ್ದವು. ಜಿಲ್ಲೆಯ ಒಳನಾಡಿನ ಭಾಗಗಳಲ್ಲಿ ಕೂಲಿಯ ದರವು ಹೆಚ್ಚಾಗಿತ್ತು. ಈ ಪ್ರದೇಶಗಳಲ್ಲಿ ಜನಸಂಖ್ಯೆ ಕರಾವಳಿ ಅಥವಾ ಪ್ಲಾಂಟೇಷನ್‌ಗಳಿರುವ ಕಡೆಗಳಿಗೆ ವಲಸೆ ಹೋಗುತ್ತಿದ್ದುದರಿಂದ, ಒಳನಾಡಿನ ಪ್ರದೇಶಗಳಲ್ಲಿ ಕಾರ್ಮಿಕರ ಕೊರತೆ ಉಂಟಾಗುತ್ತಿದ್ದರಿಂದ ಕೂಲಿಯ ದರವು ಸರ್ವೇಸಾಮಾನ್ಯವಾಗಿ ಹೆಚ್ಚಾಗಿರುತ್ತದೆ. ಬೇಡಿಕೆ ನಿಯಮದ ಪ್ರಕಾರ ಜನಸಂಖ್ಯೆ ಹೆಚ್ಚಾಗಿರುವ ಪ್ರದೇಶಗಳಲ್ಲಿ ಕಾರ್ಮಿಕರ ಸಂಖ್ಯೆ ಹೇರಳವಾಗಿ ಲಭ್ಯವಿದ್ದು, ಅಲ್ಲಿ ಕೂಲಿ ಕಡಿಮೆ ಇರುತ್ತದೆ. ಆದರೆ ಜನಸಂಖ್ಯೆ ಕಡಿಮೆ ಇದ್ದಾಗ, ಕಾರ್ಮಿಕರ ಸಂಖ್ಯೆ ಕಡಿಮೆಯಿದ್ದು, ಕಾರ್ಮಿಕರಿಗೆ ಬೇಡಿಕೆ ಹೆಚ್ಚಾಗಿ, ಕೂಲಿಯ ದರವು ಸಹಜವಾಗಿ ಹೆಚ್ಚಾಗಿರುತ್ತದೆ. ಕೆಲವು ಕಾರ್ಮಿಕರು ಕೂಲಿಯ ಜೊತೆಗೆ ಮಧ್ಯಾಹ್ನದ ಊಟವನ್ನು ಪಡೆಯುತ್ತಿದ್ದರು. ಕೆಲವು ವೇಳೆ ವರ್ಷಕ್ಕೆ ಒಂದು ಭಾರಿ ಬಟ್ಟೆಯನ್ನು ಪಡೆಯುತ್ತಿದ್ದರು. ಘಟ್ಟ ಪ್ರದೇಶಗಳು ಚಳಿಯಿಂದ ಕೂಡಿರುವುದರಿಂದ ಕಾರ್ಮಿಕರು ಬೆಡ್‌ಶೀಟನ್ನು ಪಡೆಯುತ್ತಿದ್ದರು. ಹಬ್ಬ ಮುಂತಾದ ವಿಶೇಷ ಸಂದರ್ಭಗಳಲ್ಲಿ ಅಕ್ಕಿ, ಎಣ್ಣೆ ಹಾಗೂ ಉಪ್ಪನ್ನು ಉಡುಗೊರೆಯಾಗಿ ಪಡೆಯುತ್ತಿದ್ದರು. ಅಲ್ಲದೆ ಮಗು ಹುಟ್ಟಿದಾಗ, ಮದುವೆ ಅಥವಾ ಮೃತರಾದಾಗ ಅಂತ್ಯಕ್ರಿಯೆಗಳಿಗಾಗಿ ಕೂಡ ದೇಣಿಗೆಯಾಗಿ ಕೊಡುತ್ತಿದ್ದರು. ಕೃಷಿ ಕಾರ್ಮಿಕರು ತಮ್ಮ ಕುಟುಂಬದ ಸಮೇತ ಫಾರಂಗಳಲ್ಲಿ ವಾಸವಾಗಿರಬೇಕಾಗಿತ್ತು. ಇವರ ಸೇವೆ ಯಜಮಾನನಿಗೆ ಬೇಕಿಲ್ಲದ ಸಂದರ್ಭಗಳಲ್ಲಿ ಕೆಲಸವಿರುವ ಸ್ಥಳಗಳಿಗೆ ಹೋಗಬಹುದಿತ್ತು. ಆದರೆ ಕೆಲವು ಭಾಗಗಳಲ್ಲಿ ಹೊರಗಡೆ ಕೆಲಸಗಳು ಲಭ್ಯವಿಲ್ಲದಿದ್ದಾಗ ಅವರು ಕೊಡುವ ಕೂಲಿ ಜೀವನಕ್ಕೆ ಸಾಕಾಗುತ್ತಿರಲಿಲ್ಲ.

ಜಿಲ್ಲೆಯಲ್ಲಿ ಅನುಭೋಗಿ ವಸ್ತುಗಳ, ಅದರಲ್ಲೂ ಆಹಾರ ಪದಾರ್ಥಗಳ ಬೆಲೆಗಳು ತೀವ್ರ ಪ್ರಮಾಣದಲ್ಲಿ ಏರುತ್ತಿದ್ದರೂ, ಇದರ ಜೊತೆಗೆ ಕೂಲಿಯ ದರದಲ್ಲೂ ಏರಿಕೆ ಕಂಡುಬರಲಿಲ್ಲ. ಇದು ಕೂಲಿಕಾರರ ಹಾಗೂ ಸಂಬಳ ಪಡೆಯುವ ನೌಕರರ ಜೀವನಮಟ್ಟದಲ್ಲಿ ವ್ಯತ್ಯಾಸ ಉಂಟಾಯಿತು. ಸಂಬಳ ಪಡೆಯುವ ನೌಕರರು ಹೋರಾಟದ ಮೂಲಕ ತಮ್ಮ ವೇತನವನ್ನು ಹೆಚ್ಚಿಸಿಕೊಳ್ಳುತ್ತಿದ್ದರು. ಅಸಂಘಟಿತರಾಗಿದ್ದ ಕೂಲಿ ಕಾರ್ಮಿಕರು ಕಷ್ಟದ ಜೀವನ ನಡೆಸುತ್ತಿದ್ದರು. ಆದರೂ ಜಿಲ್ಲೆಯಲ್ಲಿ ಕಾರ್ಮಿಕರಿಗೆ ತುಂಬಾ ಬೇಡಿಕೆ ಇದ್ದುದರಿಂದ, ರಾಜ್ಯದ ಇತರೆ ಜಿಲ್ಲೆಯ ಕಾರ್ಮಿಕರಿಗಿಂತ ಹೆಚ್ಚು ಕೂಲಿಯನ್ನು ಪಡೆಯುತ್ತಿದ್ದರು.

ನಗರೀಕರಣದ ಬೆಳವಣಿಗೆ, ಕೈಗಾರಿಕೆಗಳ ಸಂಖ್ಯೆಯಲ್ಲಿ ಹೆಚ್ಚಳ ಹಾಗೂ ವಿಸ್ತರಣೆ, ದುಬಾರಿಯಾದ ಜೀವನಮಟ್ಟ, ಮುಂತಾದವು ಜಿಲ್ಲೆಯಲ್ಲಿ ಕೂಲಿ ನಿರ್ಧಾರದ ಮೇಲೆ ಪರಿಣಾಮ ಬೀರಿದವು. ಕಾರ್ಖಾನೆಗಳಲ್ಲಿ ದುಡಿಯುತ್ತಿದ್ದ ಕೆಲಸಗಾರರು ದಿನಕ್ಕೆ ಮೂರು ರೂಪಾಯಿಗಳಿಂದ ಎಂಟು ರೂಪಾಯಿಗಳನ್ನು ಪಡೆಯುತ್ತಿದ್ದರು. ವಿದ್ಯಾವಂತ ಹಾಗೂ ಕುಶಲಕೆಲಸಗಾರರು, ಅವಿದ್ಯಾವಂತ ಹಾಗೂ ಕುಶಲರಹಿತ ಕೆಲಸಗಾರರಿಗಿಂತ ಹೆಚ್ಚು ಕೂಲಿಯನ್ನು ಪಡೆಯುತ್ತಿದ್ದರು.

ಪುರುಷ ಕೃಷಿ ಕಾರ್ಮಿಕರು ೧೯೫೭ರಲ್ಲಿ ರೂ. ೧.೫೦ ಕೂಲಿ ಪಡೆಯುತ್ತಿದ್ದರೆ, ರೂ.೧.೮೭ ಫೀಷ್ ಕ್ಯೂರಿಂಗ್ ಮಾಡುವವರು ಹಾಗೂ ರೂ.೨.೦೭ಗಳನ್ನು ಇತರೆ ರೀತಿಯ ಕಾರ್ಮಿಕರು ಪಡೆಯುತ್ತಿದ್ದರು. ಮಹಿಳೆಯರು ಕ್ರಮವಾಗಿ ರೂ.೦.೮೦, ರೂ.೧.೨೧ ಹಾಗೂ ರೂ.೦.೯೫ಗಳನ್ನು ಪಡೆಯುತ್ತಿದ್ದರು. ಈ ದಶಕದಲ್ಲಿ ಸ್ವಲ್ಪ ಮಟ್ಟಿಗೆ ಇವರ ಕೂಲಿಯ ದರದಲ್ಲಿ ಹೆಚ್ಚಳ ಕಂಡುಬಂದರೂ, ಪುರುಷ ಮತ್ತು ಮಹಿಳೆಯರ ಕೂಲಿದರದಲ್ಲಿ ತಾರತಮ್ಯ ಮುಂದುವರಿದಿತ್ತು. ೧೯೭೭ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಿಂದ ಹೋಗಿ ಶ್ರೀಲಂಕಾದ ರಬ್ಬರ್ ತೋಟಗಳಲ್ಲಿ ದುಡಿಯುತ್ತಿದ್ದು, ಸ್ವದೇಶಕ್ಕೆ ಮರಳಿದ ಕಾರ್ಮಿಕರ ಕೂಲಿದರವು ಹೆಚ್ಚಾಗಿತ್ತು. ಇವರ ದಿನಕೂಲಿಯು ಪುರುಷರಿಗೆ ರೂ.೩.೫೦ ರಿಂದ ರೂ.೪.೧೦ ಪೈಸೆಗಳಿಗೂ, ಮಹಿಳೆಯರಿಗೆ ರೂ.೨.೨೫ ರಿಂದ ರೂ.೩.೪೦ ಪೈಸೆಗಳಿಗೂ, ವಯಸ್ಕ ಹುಡುಗ ಅಥವಾ ಹುಡುಗಿಯರಿಗೆ ರೂ.೧.೭೫ ರಿಂದ ರೂ.೨.೪೬ ಪೈಸೆಗೂ ಹೆಚ್ಚಳಗೊಂಡರೆ, ಮಕ್ಕಳು ರೂ.೨.೦೫ ಪಡೆಯುತ್ತಿದ್ದರು. ಬೀಡಿ ಕಟ್ಟುವ ಕಾರ್ಮಿಕರಿಗೆ ಅವರು ಕಟ್ಟುವ ಬೀಡಿಗಳ ಸಂಖ್ಯೆಯನ್ನು ಅವಲಂಬಿಸಿತ್ತು. ಒಬ್ಬ ವ್ಯಕ್ತಿ ದಿನಕ್ಕೆ ಸುಮಾರು ೬೨೮ ಬೀಡಿಗಳನ್ನು ಸುತ್ತುತ್ತಿದ್ದನು. ಅವರಿಗೆ ೧,೦೦೦ ಬೀಡಿಗೆ ೪.೩೦ ರೂಪಾಯಿಗಳನ್ನು ನೀಡಲಾಗುತ್ತಿತ್ತು.

ವೇಗವಾಗಿ ಬೀಡಿ ಸುತ್ತುವ ಕಾರ್ಮಿಕರು (ದಿನದ ಎಂಟು ಗಂಟೆಗಳಲ್ಲಿ) ಒಂಭತ್ತು ರೂಪಾಯಿಂದ ಹನ್ನೆರಡು ರೂಪಾಯಿ ಪಡೆಯುತ್ತಿದ್ದರು.

ಕೃಷಿ ಕಾರ್ಮಿಕರು ಪಡೆಯುತ್ತಿದ್ದ ಕೂಲಿಯನ್ನು ಇತರೆ ಕಾರ್ಮಿಕರ ಕೂಲಿಗೆ ಪೂರಕವಾಗಿ ಹೋಲಿಸಲು ಸಾಧ್ಯವಿಲ್ಲ. ಜಿಲ್ಲೆಯಲ್ಲಿ ೧೯೬೮, ೧೯೬೯ ಹಾಗೂ ೧೯೭೦ರಲ್ಲಿದ್ದ ಸರಾಸರಿ ಕೂಲಿಯ ದರವನ್ನು ಕೋಷ್ಟಕ ೮.೭ರಲ್ಲಿ ನೀಡಿದೆ.

**ಕೋಷ್ಟಕ ೮.೭ : ಸರಾಸರಿ ಕೂಲಿ ದರದ ವಿವರ**

| ಕೆಲಸಗಾರರು | ೧೯೬೮ | ೧೯೬೯ | ೧೯೭೦ |
|---|---|---|---|
| **ಕುಶಲ ಕೆಲಸಗಾರರು** | | | |
| ಅ) ಬಡಗಿಗಳು | ೫.೮೨ | ೬.೧೪ | ೬.೨೧ |
| ಆ) ಕಮ್ಮಾರರು | ೫.೯೩ | ೬.೨೪ | ೬.೦೮ |
| ಇ) ಚಮ್ಮಾರರು | ೫.೨೦ | ೫.೫೦ | ೫.೬೪ |
| **ಫೀಲ್ಡ್ ಕಾರ್ಮಿಕರು** | | | |
| ಪುರುಷ | ೪.೦೭ | ೩.೮೧ | ೩.೮೩ |
| ಮಹಿಳೆ | ೩.೧೫ | ೨.೯೯ | ೨.೮೯ |
| ಮಕ್ಕಳು | ೨.೩೧ | ೨.೪೫ | ೨.೮೯ |
| **ಇತರೆ ವ್ಯವಸಾಯ ಕಾರ್ಮಿಕರು** | | | |
| ಪುರುಷರು | ೨.೬೭ | ೩.೯೮ | ೪.೦೨ |
| ಮಹಿಳೆಯರು | ೨.೬೧ | ೨.೧೮ | ೨.೯೯ |
| ಮಕ್ಕಳು | ೧.೯೫ | ೨.೪೭ | ೨.೨೯ |
| **ದನ ಕಾಯುವವರಿಗೆ** | | | |
| ಪುರುಷ | ೩.೫೨ | ೩.೮೮ | ೩.೯೧ |
| ಮಹಿಳೆ | ೨.೬೧ | ೨.೯೬ | ೨.೯೧ |
| ಮಕ್ಕಳು | ೨.೦೨ | ೨.೪೦ | ೨.೩೧ |

*ಆಧಾರ : ದಕ್ಷಿಣ ಕನ್ನಡ ಜಿಲ್ಲಾ ಗ್ಯಾಸೆಟಿಯರ್ (೧೯೭೩)*

ಕೂಲಿಯ ದರ ಏರುಮುಖವಾಗಿದ್ದರೂ, ಸಾಕಷ್ಟು ಪ್ರಮಾಣದಲ್ಲಿ ಆಗಿರಲಿಲ್ಲ. ಕೃಷಿ ಕಾರ್ಮಿಕರ ಜೀವನ ನಿರ್ವಹಣೆ ಕಷ್ಟಕರವಾಗಿತ್ತು. ಆದ್ದರಿಂದ ಸರ್ಕಾರ ಕೃಷಿ ಕಾರ್ಮಿಕರಿಗೆ ಕನಿಷ್ಠ ಕೂಲಿ ನಿಗದಿ ಮಾಡಲು ತೀರ್ಮಾನಿಸಿತು. ಕನಿಷ್ಠ ಕೂಲಿ ಕಾಯಿದೆ ೧೯೪೮ (ಕೇಂದ್ರ ಆಕ್ಟ್ ೧, ೧೯೪೮) ಪ್ರಕಾರ ರಾಜ್ಯ ಸರ್ಕಾರ ೧೯೫೯ರಲ್ಲಿ ಕೃಷಿ ಕ್ಷೇತ್ರದ ವಿವಿಧ ಕಾರ್ಮಿಕರಿಗೆ ಕನಿಷ್ಠ ಕೂಲಿಯನ್ನು ನಿಗದಿಪಡಿಸಿತು. ೧೯೫೯, ೧೯೬೮, ೧೯೭೩ರಲ್ಲಿದ್ದ ವ್ಯವಸಾಯ ಕ್ಷೇತ್ರದ ವಿವಿಧ ಕಾರ್ಮಿಕರಿಗೆ ನಿಗದಿ ಮಾಡಿರುವ ಕನಿಷ್ಠ ಕೂಲಿಯ ದರವನ್ನು ಕೋಷ್ಟಕ ೮.೮ರಲ್ಲಿ ನೀಡಿದೆ.

೧೯೬೮ರಲ್ಲಿ ಎ–ವರ್ಗದಲ್ಲಿ ಖಾಯಂ ಕೆಲಸ ಮಾಡುವ ಯುವಕರಿಗೆ ಹಾಗೂ ಮಕ್ಕಳಿಗೆ ಮಾಸಿಕ ಕನಿಷ್ಠ ಕೂಲಿಯನ್ನು ನಿಗದಿಪಡಿಸಲಾಗಿತ್ತು. ಇವರಿಗೆ ಊಟ ಮತ್ತು ಬಟ್ಟೆಯ ಜೊತೆಗೆ ರೂ.೨೨.೦೫ ಪೈಸೆ ನೀಡುತ್ತಿದ್ದರೆ, ಊಟ ಮತ್ತು ಬಟ್ಟೆ ಇಲ್ಲದೆ ರೂ.೪೪.೦೫ ಪೈಸೆಗಳನ್ನು ನೀಡುತ್ತಿದ್ದರು. ಈ ದರ ೧೯೭೩ರಲ್ಲಿ ಪರಿಷ್ಕರಣೆಗೊಂಡು, ಕ್ರಮವಾಗಿ ರೂ.೩೭.೫೦ ಹಾಗೂ ರೂ.೭೪.೮೫ಗಳಿಗೆ ಹೆಚ್ಚಳಗೊಂಡಿತು. 'ಬಿ'–ವರ್ಗದ ಕೆಲಸಗಾರರಿಗೆ ಊಟ ಮತ್ತು ಬಟ್ಟೆಯ ಜೊತೆಗೆ ರೂ.೧೪.೭೦ ನೀಡುತ್ತಿದ್ದರೆ, ಊಟ ಮತ್ತು ಬಟ್ಟೆ ಇಲ್ಲದೆ ರೂ.೨೨.೦೫ ನೀಡುತ್ತಿದ್ದರು. ಇದು ೧೯೭೩ರಲ್ಲಿ ಕ್ರಮವಾಗಿ ರೂ.೨೪.೩೦ ಹಾಗೂ ರೂ.೩೭.೫೦ ಹೆಚ್ಚಳಗೊಂಡಿದೆ. 'ಸಿ'–ವರ್ಗದ ಕೆಲಸಗಾರರಿಗೆ ಊಟ ಮತ್ತು ಬಟ್ಟೆಯ ಜೊತೆಗೆ ರೂ.೭.೩೫ ಪೈಸೆ ನೀಡುತ್ತಿದ್ದರೆ, ಊಟ ಮತ್ತು ಬಟ್ಟೆ ಇಲ್ಲದೆ ರೂ.೨೨.೦೫ ಪೈಸೆ ಸಿಗುತ್ತಿತ್ತು. ಇದು ೧೯೭೩ರಲ್ಲಿ ಪರಿಷ್ಕರಣೆಗೊಂಡು ಕ್ರಮವಾಗಿ ರೂ.೧೨.೫೦ ಪೈಸೆ ಹಾಗೂ ರೂ.೩೭.೫೦ ಪೈಸೆಗೆ ಹೆಚ್ಚಳಗೊಂಡಿತ್ತು.

## ಕೋಷ್ಟಕ ೮.೮ : ಜಿಲ್ಲೆಯಲಿ ದಶವಾರ್ಷಿಕ ವರ್ಷಗಳಲ್ಲಿ ವ್ಯವಸಾಯ ಕ್ಷೇತ್ರದಲ್ಲಿ ನಿಗದಿ ಮಾಡಿರುವ ದಿನಗೂಲಿಯ ವಿವರ

| ವರ್ಗ | ಒಣಭೂಮಿ | | | ನೀರಾವರಿ ಭೂಮಿ | | | ಬಾಗಾಯ್ತು | | |
|---|---|---|---|---|---|---|---|---|---|
| | ೧೯೫೫ | ೧೯೬೮ | ೧೯೭೩ | ೧೯೫೫ | ೧೯೬೮ | ೧೯೭೩ | ೧೯೫೫ | ೧೯೬೮ | ೧೯೭೩ |
| | ರೂ.ಪೈ | ರೂ.ಪೈ | ರೂ.ಪೈ | ರೂ.ಪೈ | ರೂ.ಪೈ | ರೂ.ಪೈ | ರೂ.ಪೈ | ರೂ.ಪೈ | ರೂ.ಪೈ |
| **ವರ್ಗ – ಎ** | | | | | | | | | |
| ಉಳುವುದು, ಅಗೆಯುವುದು, ಕುಂಟೆ ಹೊಡೆಯುವುದು, ಬೀಜ ಬಿತ್ತುವುದು, ಇಂಟರ್ ಕಲ್ಚರಿಂಗ್ ನೀರಾಯಿಸುವುದು, ಬೇರು ತೆಗೆಯುವುದು. | ೧.೨೫ | ೧.೮೫ | ೩.೧೫ | ೧.೫೦ | ೨.೨೦ | ೩.೭೫ | ೧.೭೫ | ೨.೫೫ | ೪.೩೦ |
| **ವರ್ಗ – ಬಿ** | | | | | | | | | |
| ಗೊಬ್ಬರ ಹಾಕುವುದು, ನಾಟಿ ಮಾಡುವುದು, ಕಳೆ ತೆಗೆಯುವುದು, ಕೊಯ್ಯುವುದು ಅ) ಕೊಯ್ಲು ಮಾಡುವಿಕೆ ಆ) ಒಕ್ಕಣೆ ಇ)ತೂರುವಿಕೆ, ಪ್ಯಾಕಿಂಗ್ (ಕಾಟನ್ ಆಗಿದ್ದರೆ) | ೧.೦೦ | ೧.೪೫ | ೨.೩೦ | ೧.೧೨ | ೧.೬೫ | ೨.೮೦ | ೧.೩೭ | ೨.೦೦ | ೩.೪೦ |
| **ವರ್ಗ – ಸಿ** | | | | | | | | | |
| ದನ, ಕುರಿ ಹಾಗೂ ಮೇಕೆ ಮೇಯಿಸುವಿಕೆ | ೦.೫೦ | ೦.೭೫ | ೧.೩೦ | ೦.೫೦ | ೦.೭೫ | ೧.೩೦ | ೦.೫೦ | ೦.೭೫ | ೧.೩೦ |
| **ವರ್ಗ – ಡಿ** | | | | | | | | | |
| ಅಡಕೆ, ತೆಂಗು ಕೊಯ್ಲು ಮಾಡುವಿಕೆ ಅಡಕೆ, ತೆಂಗಿನ ಸಿಪ್ಪೆ ತೆಗೆಯುವುದು, ಅಡಕೆ ಹಾಗೂ ತೆಂಗಿನ ತೋಟಗಳನ್ನು ಹದ ಮಾಡುವುದು ಇತರೆ ಕೆಲಸಗಳು | – | – | ೩.೧೫ | – | – | ೩.೭೫ | – | – | ೪.೩೦ |

*ಆಧಾರ : ದಕ್ಷಿಣ ಕನ್ನಡ ಜಿಲ್ಲಾ ಗ್ಯಾಸೆಟಿಯರ್ (೧೯೭೩)*

ಕೃಷಿ ಕ್ಷೇತ್ರದ ಕಾರ್ಮಿಕರ ಕೂಲಿಯನ್ನು ಕೈಗಾರಿಕಾ ಕ್ಷೇತ್ರದ ಕೂಲಿಯೊಂದಿಗೆ ಹೋಲಿಸಲು ಸಾಧ್ಯವಿಲ್ಲ. ನಗರಪ್ರದೇಶಗಳಲ್ಲಿ ಕೈಗಾರಿಕಾ ಘಟಕಗಳು ಹೆಚ್ಚಿನ ಪ್ರಮಾಣದಲ್ಲಿ ಸ್ಥಾಪನೆಗೊಂಡಿದ್ದು, ಹೆಚ್ಚು ಕೂಲಿ ದೊರಕುತ್ತಿದ್ದುದರಿಂದ ನಗರ ಪ್ರದೇಶಗಳಿಗೆ ವಲಸೆ ಹೋಗುತ್ತಿದ್ದರು. ನಗರ ಪ್ರದೇಶದಲ್ಲಿನ ಕೂಲಿಗಿಂತ ಗ್ರಾಮೀಣ ಪ್ರದೇಶದಲ್ಲಿನ ಕೂಲಿ ಅತ್ಯಂತ ಕಡಿಮೆ ಇರುವುದೇ ವಲಸೆಗೆ ಪ್ರಮುಖ ಕಾರಣವಾಗಿತ್ತು. ೧೯೭೦ರಲ್ಲಿ ಕುಶಲಕರ್ಮಿಗಳಾದ ಬಡಗಿಗೆ ರೂ.೬.೨೧ ಪೈಸೆ ಸಿಗುತ್ತಿದ್ದರೆ, ಕಮ್ಮಾರರಿಗೆ ರೂ.೬.೦೮ ಪೈಸೆ ಹಾಗೂ ಮೋಚಿಗಳಿಗೆ ರೂ.೫.೬೪ ಪೈಸೆ ಮಾತ್ರ ಸಿಗುತ್ತಿತ್ತು. ಇದು ೨೦೦೪ರಲ್ಲಿ ಕ್ರಮವಾಗಿ ರೂ.೧೦೦, ರೂ.೯೦ ಹಾಗೂ ರೂ.೭೫.೦೦ಗಳಿಗೆ ಹೆಚ್ಚಳಗೊಂಡಿರುವುದು ಅಂಕಿಅಂಶಗಳಿಂದ ಸ್ಪಷ್ಟವಾಗಿದೆ. ಈ ಹೆಚ್ಚಳ ಕುಶಲಕರ್ಮಿಗಳ ಜೀವನಮಟ್ಟದ ಸುಧಾರಣೆಯನ್ನು ಸೂಚಿಸುತ್ತದೆ. ೨೦೦೦ ರಿಂದ ೨೦೦೪ರವರೆಗೆ ಕುಶಲಕಾರ್ಮಿಕರು ಹಾಗೂ ಕುಶಲರಲ್ಲದ ಕಾರ್ಮಿಕರು ಪಡೆಯುತ್ತಿದ್ದ ಕೂಲಿಯ ವಿವರಗಳನ್ನು ಕೋಷ್ಟಕ ೮.೯ರಲ್ಲಿ ನೀಡಿದೆ.

## ಉದ್ಯೋಗ

ಜಿಲ್ಲೆಯು ವ್ಯವಸಾಯ ಪ್ರಧಾನವಾಗಿದ್ದು, ವ್ಯವಸಾಯ ಹಾಗೂ ವ್ಯವಸಾಯೋದ್ಯಮ ಕ್ಷೇತ್ರಗಳು ಇಲ್ಲಿನ ಉದ್ಯೋಗದ ಪ್ರಮುಖ ಮೂಲಗಳಾಗಿವೆ. ಆದರೆ ಅರೆ ಉದ್ಯೋಗದ (ಅಂಡರ್ ಎಂಪ್ಲಾಯ್‌ಮೆಂಟ್) ರೂಪದಲ್ಲಿ ನಿರುದ್ಯೋಗವು ಈ ಕ್ಷೇತ್ರದಲ್ಲಿ ಪ್ರಚ್ಛನ್ನವಾಗಿದೆ. ಅರೆ ಉದ್ಯೋಗದಲ್ಲಿ ಎರಡು ಬಗೆ. ದೃಶ್ಯ

**ಕೋಷ್ಟಕ ೮.೯ : ಉಡುಪಿ ಜಿಲ್ಲೆಯ ೨೦೦೦ ರಿಂದ ೨೦೦೪ರವರೆಗೆ ಜಿಲ್ಲೆಯ ಕುಶಲಕರ್ಮಿಗಳು ಮತ್ತು ಕೃಷಿ ಕಾರ್ಮಿಕರ ದಿನಗೂಲಿಯ ವಿವರ**

(ರೂ.ಗಳಲ್ಲಿ)

| ವಿವರ | | ೨೦೦೦ | ೨೦೦೧ | ೨೦೦೨ | ೨೦೦೩ | ೨೦೦೪ | ೨೦೦೫ |
|---|---|---|---|---|---|---|---|
| **ಕುಶಲ ಕರ್ಮಿಗಳು** | | | | | | | |
| ಬಡಗಿ ಕೆಲಸಗಾರರು | | ೯೯ | ೧೦೦ | ೧೦೫ | ೧೦೦ | ೧೦೦ | – |
| ಕಮ್ಮಾರರು | | ೮೯ | ೯೦ | ೯೫ | ೯೦ | ೯೦ | – |
| ಮೋಚಿಗಳು | | ೭೫ | ೭೫ | ೭೫ | ೭೫ | ೭೫ | – |
| **ಕುಶಲ ರಹಿತ ಕಾರ್ಮಿಕರು** | | | | | | | |
| **ಖುಷ್ಕಿ ಭೂಮಿ ಕಾರ್ಮಿಕರು** | | | | | | | |
| ಎ | ಪುರುಷ | ೮೦ | ೭೮ | ೭೭ | ೮೪ | – | – |
| | ಮಹಿಳೆಯರು | – | – | – | – | – | – |
| ಬಿ | ಪುರುಷ | – | ೭೫ | – | ೭೫ | – | – |
| | ಮಹಿಳೆಯರು | – | ೫೦ | – | ೫೦ | – | – |
| ಸಿ | ಪುರುಷ | ೪೦ | ೪೦ | ೪೦ | ೪೦ | ೪೦ | – |
| | ಮಹಿಳೆಯರು | ೩೦ | ೩೦ | ೩೦ | ೩೦ | ೩೦ | – |
| ಡಿ | ಪುರುಷ | – | – | – | – | – | – |
| | ಮಹಿಳೆಯರು | – | – | – | – | – | – |
| **ತರಿ ಭೂಮಿ ಕಾರ್ಮಿಕರು** | | | | | | | |
| ಎ | ಪುರುಷ | ೭೭ | ೭೯ | ೮೧ | – | – | – |
| | ಮಹಿಳೆಯರು | – | – | – | – | – | – |
| ಬಿ | ಪುರುಷ | ೬೯ | ೭೪ | – | – | – | – |
| | ಮಹಿಳೆಯರು | ೪೫ | ೪೭ | – | – | – | – |
| ಸಿ | ಪುರುಷ | – | – | – | – | – | |
| | ಮಹಿಳೆಯರು | – | – | – | – | – | – |
| ಡಿ | ಪುರುಷ | – | – | – | – | – | – |
| | ಮಹಿಳೆಯರು | – | – | – | – | – | – |
| **ಬಾಗಾಯ್ತು ಕಾರ್ಮಿಕರು** | | | | | | | |
| ಎ | ಪುರುಷ | ೭೮ | ೮೨ | ೮೦ | ೮೨ | ೯೦ | – |
| | ಮಹಿಳೆಯರು | – | – | – | – | – | – |
| ಬಿ | ಪುರುಷ | ೬೬ | ೬೯ | – | ೮೧ | ೮೩ | – |
| | ಮಹಿಳೆಯರು | ೪೭ | ೪೫ | – | ೫೨ | ೫೫ | – |
| ಸಿ | ಪುರುಷ | – | – | – | – | – | – |
| | ಮಹಿಳೆಯರು | – | – | – | – | – | – |
| ಡಿ | ಪುರುಷ | ೭೭ | ೮೧ | ೮೦ | – | – | – |
| | ಮಹಿಳೆಯರು | ೪೩ | ೪೨ | ೪೪ | – | – | – |

***ಆಧಾರ : ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು.***

ಮತ್ತು ಅದೃಶ್ಯ. ದೃಶ್ಯ ಅಥವಾ ಕಾಣುವಂತಹ ಅರೆ ಉದ್ಯೋಗವನ್ನು ಕಡಿಮೆ ಅವಧಿಯ ಕೆಲಸದ ರೂಪದಲ್ಲಿ ಗುರುತಿಸಬಹುದು. ಆದರೆ, ಅದೃಶ್ಯ ಅಥವಾ ಕಾಣದೆ ಇರುವ ಅರೆ ಉದ್ಯೋಗವು ಕಡಿಮೆ ಆದಾಯ, ಕೌಶಲ್ಯದ ಅಪೂರ್ಣ ಉಪಯೋಗದ ಅಥವಾ ಕಡಿಮೆ ಉತ್ಪಾದನಾ ಶಕ್ತಿ ಇರುವ ಘಟಕಗಳಲ್ಲಿಯ ಉದ್ಯೋಗಗಳಲ್ಲಿ ಕಾಣಬಹುದು.

ಜಿಲ್ಲೆಯಲ್ಲಿ ಕೈಗಾರಿಕೆಗಳ ಬೆಳವಣಿಗೆ ಹೆಚ್ಚು ಹೆಚ್ಚು ಉದ್ಯೋಗವಕಾಶಗಳನ್ನು ಸೃಷ್ಟಿಸಿದೆ. ಉದ್ಯೋಗಾಕಾಂಕ್ಷಿಗಳಿಗೆ ಸೂಕ್ತ ಉದ್ಯೋಗ ಒದಗಿಸಲು ಹಾಗೂ ಉದ್ಯೋಗದಾತರಿಗೆ ಸೂಕ್ತ ಅಭ್ಯರ್ಥಿಗಳನ್ನು ಒದಗಿಸುವ ಹಿನ್ನೆಲೆಯಲ್ಲಿ ಉದ್ಯೋಗ ವಿನಿಮಯ ಕೇಂದ್ರಗಳನ್ನು ಸರ್ಕಾರವು ಸ್ಥಾಪಿಸಿತು. ಜಿಲ್ಲೆಯು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿದ್ದಾಗ ೧೯೪೭ರಿಂದಲೇ ಉದ್ಯೋಗ ವಿನಿಮಯ ಕಛೇರಿ ಅಸ್ತಿತ್ವದಲ್ಲಿತ್ತು.

ಈ ಕಛೇರಿಯು ಕೇಂದ್ರ ಸರ್ಕಾರದಿಂದ ಎಂಪ್ಲಾಯ್‌ಮೆಂಟ್ ಬ್ಯೂರೋ ಆಗಿ ಸ್ಥಾಪಿಸಲಾಯಿತು. ಎರಡನೇ ಮಹಾಯುದ್ಧದ ತರುವಾಯ ಸೇನೆಯಲ್ಲಿ ಸೇವೆ ಸಲ್ಲಿಸಿ ಹಿಂತಿರುಗಿದ ಭಾರಿ ಸೈನಿಕರಿಗೆ ಉದ್ಯೋಗ ಒದಗಿಸುವುದೇ ಇದರ ಮುಖ್ಯ ಉದ್ದೇಶವಾಗಿತ್ತು. ಈ ಕ್ರಿಯೆ ಪಾಕಿಸ್ತಾನದಿಂದ ನಿರಾಶ್ರಿತರಾಗಿ ಬಂದವರಿಗೂ ಉದ್ಯೋಗ ಒದಗಿಸುವ ಉದ್ದೇಶದಿಂದ ೧೯೫೬ರವರೆಗೂ ಮುಂದುವರಿದಿತ್ತು. ೧೯೪೮ರಲ್ಲಿ ಸಾರ್ವಜನಿಕ ಉದ್ಯೋಗಾಕಾಂಕ್ಷಿಗಳಿಗೂ ಮುಕ್ತವಾಗಿ ಉದ್ಯೋಗ ವಿನಿಮಯ ಸೇವೆಯನ್ನು ವಿಸ್ತರಿಸಲಾಯಿತು. ಭಾಷಾವಾರು ಪ್ರಾಂತ್ಯಗಳಾಗಿ ವಿಂಗಡಣೆಗೊಂಡ ನಂತರ ಒಂದನೇ ನವೆಂಬರ್ ೧೯೫೬ರಲ್ಲಿ ಮೈಸೂರು ಸರ್ಕಾರಕ್ಕೆ ವರ್ಗಾಯಿಸಲಾಯಿತು. ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಎಂಟು ತಾಲೂಕುಗಳು ಇದರ ವ್ಯಾಪ್ತಿಗೆ ಒಳಪಟ್ಟಿದ್ದವು. ಉದ್ಯೋಗ ವಿನಿಮಯ ಕಛೇರಿ ಉದ್ಯೋಗ ಕಾಯ್ದೆಗಳ ನೋಂದಣಿ ಹಾಗೂ ಖಾಲಿ ಹುದ್ದೆಗಳನ್ನು ಪ್ರಕಟಿಸಿ, ಅವಶ್ಯಕವಿರುವ ಕಡೆ ಭರ್ತಿ ಮಾಡುವ ಜವಾಬ್ದಾರಿಯನ್ನು ಹೊಂದಿರುತ್ತದೆ. ಆದ್ದರಿಂದ ಇದನ್ನು ತೀರುವಳಿ ಕೇಂದ್ರ (Clearing House) ಎಂದು ಕರೆಯಬಹುದು. ಭಿತ್ತಿಪತ್ರ, ಕರಪತ್ರಗಳನ್ನು ಪ್ರಕಟಿಸಿ ಸಾರ್ವಜನಿಕರಿಗೆ, ಸಂಘ ಸಂಸ್ಥೆಗಳಿಗೆ, ಗ್ರಂಥಾಲಯಗಳಿಗೆ, ಶಾಲಾಕಾಲೇಜುಗಳಿಗೆ ಹಂಚುವ ಮೂಲಕ ಉದ್ಯೋಗ ವಿನಿಮಯ ಕಛೇರಿಯ ಚಟುವಟಿಕೆಗಳನ್ನು ಮನವರಿಕೆ ಮಾಡಿಕೊಡುತ್ತದೆ. ಉದ್ಯೋಗ ವಿನಿಮಯ ಕಛೇರಿಯಲ್ಲಿ ೧೯೫೬ರಲ್ಲಿ ಉದ್ಯೋಗ ಮಾಹಿತಿ ಕೇಂದ್ರ ಪ್ರಾರಂಭಿಸಲಾಯಿತು. ಪ್ರಾರಂಭವಾದ ಕೆಲವು ವರ್ಷಗಳು ಸಾರ್ವಜನಿಕ ಕ್ಷೇತ್ರವನ್ನು ಮಾತ್ರ ತನ್ನ ವ್ಯಾಪ್ತಿಯಲ್ಲಿ ಹೊಂದಿತ್ತು. ೧೯೬೦ರ ನಂತರ ಖಾಸಗೀ ಕ್ಷೇತ್ರವನ್ನು ತನ್ನ ವ್ಯಾಪ್ತಿಗೆ ತೆಗೆದುಕೊಂಡಿತು. ಉದ್ಯೋಗ ವಿನಿಮಯ ಕಛೇರಿಯು ತನ್ನ ಕಾರ್ಯಚಟುವಟಿಕೆಗಳನ್ನು ಮೂರು ವಿಭಾಗಗಳ ಮೂಲಕ ನಿರ್ವಹಿಸುತ್ತಿದೆ. ೧) ಉದ್ಯೋಗ ವಿನಿಮಯ ವಿಭಾಗ, ೨) ವೃತ್ತಿ ಮಾರ್ಗದರ್ಶನ ವಿಭಾಗ ಹಾಗೂ ೩) ಉದ್ಯೋಗ ಮಾರುಕಟ್ಟೆ ಮಾಹಿತಿ. ಉದ್ಯೋಗ ವಿನಿಮಯ (ಖಾಲಿ ಹುದ್ದೆಗಳ ಕಡ್ಡಾಯ ಪ್ರಕಟಣೆ) ಕಾಯಿದೆ ೧೯೫೯ರನ್ವಯ ಉದ್ಯೋಗ ವಿನಿಮಯ ಕಛೇರಿಯು ಸಾರ್ವಜನಿಕ ಹಾಗೂ ಖಾಸಗಿ ಕ್ಷೇತ್ರಗಳಿಂದ ಉದ್ಯೋಗ ಮಾಹಿತಿಯನ್ನು ಸಂಗ್ರಹಿಸುವುದು ಹಾಗೂ ಉದ್ಯೋಗದ ಅವಕಾಶಗಳ ಬಗ್ಗೆ ನಿಷ್ಕರ್ಷಿಸುತ್ತದೆ. ಅಲ್ಲದೆ ಜಿಲ್ಲೆಯಲ್ಲಿರುವ ಉದ್ಯೋಗದ ಸ್ಥಿತಿಗತಿಗಳ ಪ್ರವೃತ್ತಿಯ ಬಗ್ಗೆ ಅಭ್ಯಾಸಿಸುತ್ತದೆ. ಅಧ್ಯಯನದಿಂದ ಕಂಡುಬಂದ ಅಂಶಗಳನ್ನು ತ್ರೈಮಾಸಿಕ ಹಾಗೂ ವಾರ್ಷಿಕವಾಗಿ ಪ್ರಕಟಿಸುತ್ತದೆ. ಉಡುಪಿ ಜಿಲ್ಲೆಯ ಒಟ್ಟು ಜನಸಂಖ್ಯೆ ೨೦೦೧ರಲ್ಲಿ ೧೧,೧೨,೨೪೩ ಇದ್ದು, ೫,೨೨,೨೩೧ ಮಂದಿ ಪುರುಷರು ಹಾಗೂ ೫,೯೦,೦೧೨ ಮಂದಿ ಮಹಿಳೆಯರು ಸೇರಿದ್ದರು. ಇವರಲ್ಲಿ ೪,೮೮,೧೭೩ ಒಟ್ಟು ಕೆಲಸಗಾರರಿದ್ದರು. ಇವರಲ್ಲಿ ೨,೮೭,೯೫೧ ಪುರುಷರು, ೨,೦೦,೨೨೨ ಮಹಿಳಾ ಕೆಲಸಗಾರಿದ್ದರು.

## ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ

ಉಡುಪಿ ಜಿಲ್ಲೆಯಲ್ಲಿ ಒಂದು ಉದ್ಯೋಗ ವಿನಿಮಯ ಕಛೇರಿಯಿದ್ದು, ಜನವರಿ ೭, ೧೯೯೮ರಲ್ಲಿ ಅಸ್ತಿತ್ವಕ್ಕೆ ಬಂದಿತು. ಜಿಲ್ಲಾ ಉದ್ಯೋಗ ವಿನಿಮಯ ಕಛೇರಿಯಲ್ಲಿದ್ದ ಚಾಲ್ತಿ ದಾಖಲೆ ಪ್ರಕಾರ (ಲೈವ್ ರಿಜಿಸ್ಟರ್) ನೋಂದಾವಣಿಗೊಂಡ ಉದ್ಯೋಕಾಂಕ್ಷಿಗಳ ಸಂಖ್ಯೆ ೧೯೯೮-೯೯ರಲ್ಲಿ ೨೦,೦೪೯ ಮಂದಿ ಇದ್ದರೆ, ೨೦೦೦-೦೧ರಲ್ಲಿ ೨೪,೭೮೧ ಮಂದಿ ಹಾಗೂ ೨೦೦೫-೦೬ರಲ್ಲಿ ೧೨,೧೪೯ ಮಂದಿ ಉದ್ಯೋಗಕ್ಕಾಗಿ ತಮ್ಮ ಹೆಸರನ್ನು ನೋಂದಾಯಿಸಿಕೊಂಡಿದ್ದರು. ೧೯೯೮-೯೯ ರಿಂದ ೨೦೦೫-೦೬ರವರೆಗೆ ಚಾಲ್ತಿ ದಾಖಲೆ ಪ್ರಕಾರ (ಲೈವ್ ರಿಜಿಸ್ಟರ್) ನೋಂದಣಿಗೊಂಡ ಉದ್ಯೋಗಾಕಾಂಕ್ಷಿಗಳ ಸಂಖ್ಯೆಯನ್ನು ಕೋಷ್ಟಕ ೮.೧೦ರಲ್ಲಿ ನೀಡಲಾಗಿದೆ.

### ಉದ್ಯೋಗ ಸೇವೆಗಳು

ಜಿಲ್ಲೆಯ ಉದ್ಯೋಗ ವಿನಿಮಯ ಕೇಂದ್ರ, ಉದ್ಯೋಗಾರ್ಥಿಗಳ ಹೆಸರುಗಳನ್ನು ನೋಂದಣಿ ಮಾಡುವುದರಲ್ಲಿ ಮತ್ತು ವಿವಿಧ ಸಂಸ್ಥೆಗಳಲ್ಲಿ ಹುದ್ದೆಗಳನ್ನು ಭರ್ತಿ ಮಾಡುವಲ್ಲಿ ವೈಜ್ಞಾನಿಕ ಪದ್ಧತಿಯನ್ನು ಅನುಸರಿಸುತ್ತಿದೆ. ತಮ್ಮಲ್ಲಿ ನೋಂದಣಿ ಹೊಂದಿದ ಉದ್ಯೋಗಾರ್ಥಿಗಳನ್ನು ಮತ್ತು ವಿವಿಧ ಸಂಸ್ಥೆಗಳು ಸೂಚಿಸಿದ ಹುದ್ದೆಗಳನ್ನು ವಿವಿಧ ರೀತಿಯಲ್ಲಿ ವರ್ಗೀಕರಣ ಮಾಡಲಾಗುತ್ತದೆ.

**ಕೋಷ್ಟಕ ೮.೧೦ : ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಚಾಲ್ತಿ ದಾಖಲೆ ಪ್ರಕಾರ ನೋಂದಣಿಗೊಂಡಿದ್ದ ಉದ್ಯೋಗಾರ್ಥಿಗಳ ವಿವರ.**

| ವರ್ಷ | ಪುರುಷರು | | ಮಹಿಳೆಯರು | | ಒಟ್ಟು | |
|---|---|---|---|---|---|---|
| | ಉದ್ಯೋಗಸ್ಥರು | ನಿರುದ್ಯೋಗಸ್ಥರು | ಉದ್ಯೋಗಸ್ಥರು | ನಿರುದ್ಯೋಗಸ್ಥರು | ಉದ್ಯೋಗಸ್ಥರು | ನಿರುದ್ಯೋಗಸ್ಥರು |
| ೧೯೯೮-೯೯ | – | ೧೨,೧೯೭ | – | ೭,೮೫೨ | – | ೨೦,೦೪೯ |
| ೧೯೯೯-೦೦ | – | ೧೪,೨೬೦ | – | ೮,೫೬೨ | – | ೨೨,೮೨೨ |
| ೨೦೦೦-೦೧ | – | ೧೫,೩೪೫ | – | ೯,೪೩೬ | – | ೨೪,೭೮೧ |
| ೨೦೦೧-೦೨ | – | ೧೫,೨೩೨ | – | ೧೦,೦೯೦ | – | ೨೫,೩೨೨ |
| ೨೦೦೨-೦೩ | – | ೧೩,೮೧೦ | – | ೮,೯೬೭ | – | ೨೨,೭೭೭ |
| ೨೦೦೩-೦೪ | – | ೧೧,೬೨೫ | – | ೭,೮೫೪ | – | ೧೯,೪೭೯ |
| ೨೦೦೪-೦೫ | – | ೮,೬೩೦ | – | ೬,೩೩೮ | – | ೧೪,೯೬೮ |
| ೨೦೦೫-೦೬ | – | ೬,೮೬೪ | – | ೫,೨೮೫ | – | ೧೨,೧೪೯ |

*ಆಧಾರ: ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ, ಉಡುಪಿ.*

೧೯೫೯ರ ಖಾಲಿ ಹುದ್ದೆಗಳ ಕಡ್ಡಾಯ ನೋಂದಣಿ ಕಾಯಿದೆಯು ಸೂಚಿಸುವಂತೆ ೨೫ಕ್ಕೂ ಹೆಚ್ಚಿಗೆ ಕೆಲಸಗಾರರನ್ನು ನೇಮಿಸಿಕೊಳ್ಳುವ ಮತ್ತು ಮಾಸಿಕ ರೂ.೬೦ ಮತ್ತು ಮೇಲ್ಪಟ್ಟು ಸಂಬಳದ ಉದ್ಯೋಗ ಒದಗಿಸುವ ಎಲ್ಲಾ ಸಂಸ್ಥೆಗಳು ತಮ್ಮಲ್ಲಿರುವ ಖಾಲಿ ಹುದ್ದೆಗಳ ಬಗ್ಗೆ ಉದ್ಯೋಗ ವಿನಿಮಯ ಕೇಂದ್ರಗಳಿಗೆ ಮಾಹಿತಿಯನ್ನು ಸಲ್ಲಿಸಬೇಕಾಗುತ್ತದೆ. ಆದರೆ ಉದ್ಯೋಗ ವಿನಿಮಯ ಕೇಂದ್ರಗಳು ತಯಾರಿಸಿದ ಪಟ್ಟಿಯಿಂದಲೇ ಹುದ್ದೆಗಳನ್ನು ತುಂಬಬೇಕೆಂಬ ಯಾವ ನಿಬಂಧನೆಗೂ ಸಂಸ್ಥೆಗಳು ಒಳಪಡುವುದಿಲ್ಲ. ಆದರೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಇಂಥ ಹುದ್ದೆಗಳನ್ನು ಉದ್ಯೋಗ ವಿನಿಮಯ ಕೇಂದ್ರಗಳ ಮೂಲಕವೇ ತುಂಬಬೇಕೆಂದು ಸೂಚಿಸಿವೆ. ೧೯೯೮-೯೯ ರಿಂದ ೨೦೦೫-೨೦೦೬ರ ವರೆವಿಗೆ ಆಯ್ದ ವರ್ಷಗಳಲ್ಲಿ ವಿದ್ಯಾರ್ಹತೆ ಹಾಗೂ ಲಿಂಗ ಪ್ರಭೇದಕ್ಕನುಗುಣವಾಗಿ ನೋಂದಣಿಗೊಂಡವರ ಸಂಖ್ಯೆಯನ್ನು ಕೋಷ್ಟಕ ೮.೧೧ರಲ್ಲಿ ನೀಡಲಾಗಿದೆ.

ಜಿಲ್ಲಾ ಉದ್ಯೋಗ ವಿನಿಮಯ ಕಛೇರಿಯಲ್ಲಿ ೧೯೯೮-೯೯ರಿಂದ ೨೦೦೫-೦೬ರವರೆಗೆ ನೋಂದಾಯಿಸಿಕೊಂಡ ಉದ್ಯೋಗಾಕಾಂಕ್ಷಿಗಳ ಸಂಖ್ಯೆ, ಪ್ರಕಟಿತ ಹುದ್ದೆಗಳು, ಭರ್ತಿ ಹಾಗೂ ಖಾಲಿ ಹುದ್ದೆಗಳ ವಿವರವನ್ನು ಕೋಷ್ಟಕ ೮.೧೨ರಲ್ಲಿ ನೀಡಲಾಗಿದೆ.

ಜಿಲ್ಲಾ ಉದ್ಯೋಗ ವಿನಿಮಯ ಕಛೇರಿಯಲ್ಲಿ ೧೯೯೮-೯೯ರಿಂದ ೨೦೦೫-೦೬ರವರೆಗೆ ನೋಂದಾಯಿಸಿಕೊಂಡ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಉದ್ಯೋಗಾಕಾಂಕ್ಷಿಗಳ ಸಂಖ್ಯೆ ಹಾಗೂ ಉದ್ಯೋಗ ಪಡೆದವರ ಸಂಖ್ಯೆಯ ವಿವರಗಳನ್ನು ಕೋಷ್ಟಕ ೮.೧೩ರಲ್ಲಿ ನೀಡಲಾಗಿದೆ.

ಜಿಲ್ಲಾ ಉದ್ಯೋಗ ವಿನಿಮಯ ಕಛೇರಿಯ ನೆರವಿನೊಂದಿಗೆ ಕೇಂದ್ರ ಸರ್ಕಾರ, ಅರೆ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಅರೆ ರಾಜ್ಯ ಸರ್ಕಾರ ಸ್ಥಳೀಯ ಸಂಸ್ಥೆ ಹಾಗೂ ಖಾಸಗಿ ಸಂಸ್ಥೆಗಳು ಖಾಲಿ ಹುದ್ದೆಗಳನ್ನು ಭರ್ತಿ ಮಾಡಿಕೊಂಡ ವಿವರವನ್ನು ಕೋಷ್ಟಕ ೮.೧೪ರಲ್ಲಿ ನೀಡಲಾಗಿದೆ. ಉಡುಪಿ ಜಿಲ್ಲೆಯಲ್ಲಿ ಸ್ನಾತಕೋತ್ತರ ಪದವೀಧರರು ವಿಶಿಷ್ಟ ವೃತ್ತಿ ಮತ್ತು ಕಾರ್ಯನಿರ್ವಾಹಕ ಉದ್ಯೋಗ ವಿನಿಮಯ ಕೇಂದ್ರ, ಬೆಂಗಳೂರು. ಇಲ್ಲಿ ಉದ್ಯೋಗ ಬಯಸಿ ನೋಂದಾಯಿಸಿಕೊಂಡಿರುವ ವಿವರಗಳನ್ನು ಮುಂದಿನ ಕೋಷ್ಟಕ ೮.೧೫ರಲ್ಲಿ ನೀಡಲಾಗಿದೆ.

## ಭೂ ಬಳಕೆ

ನೈಸರ್ಗಿಕ ಸಂಪನ್ಮೂಲಗಳಲ್ಲಿ ಭೂ ಸಂಪನ್ಮೂಲ ಅತ್ಯಂತ ಪ್ರಮುಖವಾದುದು. ಕೃಷಿ, ಕೈಗಾರಿಕೆ, ಗಣಿಗಾರಿಕೆ, ಹೈನುಗಾರಿಕೆ ಮುಂತಾದ ಎಲ್ಲಾ ಆರ್ಥಿಕ ಚಟುವಟಿಕೆಗಳು ನಡೆಯುವುದು ಭೂಮಿಯ

**ಕೋಷ್ಟಕ . ೮.೧೧ : ೧೯೯೦-೯೧ ರಿಂದ ೨೦೦೫-೦೬ರವರೆಗೆ ವಿದ್ಯಾರ್ಹತೆ ಹಾಗೂ ಲಿಂಗ ಪ್ರಭೇದಕ್ಕನುಗುಣವಾಗಿ ಆಯ್ದ ವರ್ಷಗಳಲ್ಲಿ ನೊಂದಣಿಗೊಂಡಿದ್ದವರ ವಿವರ.**

| ಉದ್ಯೋಗ ಪ್ರಭೇದ | ನೋಂದಣಿಗೊಂಡ ವರ್ಷ | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|
| | ೧೯೯೮-೯೯ | | ೧೯೯೯-೨೦೦೦ | | ೨೦೦೦-೦೧ | | ೨೦೦೧-೦೨ | | ೨೦೦೨-೦೩ | | ೨೦೦೩-೦೪ | | ೨೦೦೪-೦೫ | | ೨೦೦೫-೦೬ | |
| ಪದವೀಧರರು | ಪು | ಮ | ಪು | ಮ | ಪು | ಮ | ಪು | ಮ | ಪು | ಮ | ಪು | ಮ | ಪು | ಮ | ಪು | ಮ |
| ಕಲೆ | ೧೧೫ | ೧೬೩ | ೧೨೯ | ೧೭೭ | ೧೨೫ | ೧೬೬ | ೧೬೭ | ೧೮೯ | ೧೪೭ | ೧೯೨ | ೧೧೫ | ೧೬೩ | ೭೧ | ೧೭೩ | ೫೯ | ೧೩೧ |
| ವಿಜ್ಞಾನ | ೩೬ | ೫೧ | ೪೮ | ೬೪ | ೨೯ | ೩೭ | ೩೭ | ೬೪ | ೨೪ | ೪೯ | ೧೨ | ೨೭ | ೧೩ | ೧೪ | ೦೭ | ೧೩ |
| ವಾಣಿಜ್ಯ | ೨೦೫ | ೧೮೮ | ೨೫೩ | ೨೩೦ | ೧೯೦ | ೧೫೯ | ೧೭೪ | ೧೩೪ | ೧೭೮ | ೧೨೦ | ೧೬೧ | ೧೫೩ | ೧೧೪ | ೯೨ | ೭೧ | ೯೭ |
| ಬಿ.ಎಡ್ | ೪೫ | ೧೦೦ | ೮೨ | ೧೨೬ | ೫೧ | ೯೧ | ೮೫ | ೯೪ | ೪೨ | ೭೫ | ೩೯ | ೭೧ | ೨೩ | ೬೪ | ೧೯ | ೪೨ |
| ಬಿ.ಪಿ.ಎಡ್ | ೦೨ | – | ೧೦ | ೦೧ | ೦೩ | ೦೨ | ೦೯ | ೦೨ | ೦೪ | ೦೧ | ೦೩ | – | ೦೬ | – | ೦೯ | ೦೨ |
| ಡಿಪ್ಲೋಮಾದಾರರು | ೧೧೦ | ೦೯ | ೯೦ | ೩೨ | ೧೦೬ | ೦೮ | ೧೨೫ | ೦೭ | ೧೦೮ | ೦೭ | ೫೭ | ೦೪ | ೬೬ | ೦೩ | ೫೯ | ೧೦ |
| ಐ.ಟಿ.ಐ.ಉತ್ತೀರ್ಣ | ೮೭ | ೦೫ | ೭೯ | ೦೩ | ೧೦೦ | – | ೨೦೧ | ೦೪ | ೧೫೪ | – | ೧೫೯ | ೦೨ | ೧೨೧ | ೦೧ | ೧೨೨ | ೦೬ |
| ಬೆರಳಚ್ಚುಗಾರರು | ೨೯ | ೯೨ | ೨೫ | ೬೬ | ೧೭ | ೬೨ | ೧೧ | ೫೫ | ೦೭ | ೫೫ | ೧೪ | ೩೬ | ೦೬ | ೧೧ | ೦೪ | ೨೫ |
| ಶೀಘ್ರಲಿಪಿಗಾರರು | – | ೦೧ | – | ೦೧ | – | ೦೫ | – | ೦೬ | ೦೧ | ೦೧ | ೦೧ | ೦೬ | ೦೧ | ೦೫ | – | ೦೫ |
| ಪ್ರಾಥಮಿಕ ಶಾಲಾ ಶಿಕ್ಷಕರು | ೨೬ | ೨೫ | ೮೮ | ೧೧೪ | ೪೨ | ೭೯ | ೨೯ | ೬೮ | ೦೬ | ೮೭ | ೨೯ | ೭೦ | ೨೧ | ೪೨ | ೦೯ | ೪೧ |
| ನರ್ಸರಿ ಶಿಕ್ಷಕರು | – | ೧೮ | – | ೩೪ | – | ೨೩ | – | ೧೨ | – | ೧೧ | – | ೦೪ | – | ೦೨ | – | – |
| ದೈಹಿಕ ಶಿಕ್ಷಕರು | ೭೪ | ೨೨ | ೮೪ | ೩೭ | ೬೦ | ೨೯ | ೭೦ | ೧೭ | ೨೯ | ೧೪ | ೩೦ | ೧೪ | ೧೬ | ೦೪ | ೧೩ | ೧೯ |
| ನಿರ್ವಾಹಕರು | ೮೫ | ೦೧ | ೯೩ | ೧೧ | ೮೫ | ೦೨ | ೩೯ | ೦೧ | ೨೪ | – | ೧೫ | ೦೨ | ೦೮ | – | ೦೪ | ೦೪ |
| ಎಸ್‌ಎಸ್‌ಎಲ್‌ಸಿ ಉತ್ತೀರ್ಣ | ೯೨೧ | ೪೫೯ | ೧೦೯೫ | ೬೫೦ | ೧೪೩೧ | ೭೯೮ | ೧೧೫೮ | ೭೦೦ | ೫೮೧ | ೩೪೭ | ೫೪೬ | ೩೩೨ | ೨೨೮ | ೧೨೬ | ೨೩೧ | ೭೩ |
| ಪಿಯುಸಿ ಉತ್ತೀರ್ಣ | ೯೧೮ | ೮೨೭ | ೧೨೮೯ | ೯೬೯ | ೯೩೮ | ೭೮೧ | ೭೨೩ | ೬೨೫ | ೬೨೫ | ೬೦೭ | ೪೯೬ | ೪೪೨ | ೩೪೦ | ೩೪೧ | ೩೨೨ | ೨೫೬ |
| ಮಾಧ್ಯಮಿಕ ಪರೀಕ್ಷೆ ಉತ್ತೀರ್ಣ | ೩೬೩ | ೨೧೦ | ೪೩೮ | ೧೯೩ | ೪೭೯ | ೧೨೩ | ೩೫೬ | ೧೧೪ | ೨೪೪ | ೭೯ | ೧೯೪ | ೮೦ | ೧೩೬ | ೩೮ | ೧೦೭ | ೩೧ |
| ಅಕ್ಷರಸ್ಥರು | ೩೦ | ೩೬ | ೪೬ | ೩೩ | ೪೫ | ೨೬ | ೩೫ | ೨೭ | ೩೧ | ೧೮ | ೧೦ | ೧೮ | ೧೩ | ೧೩ | ೧೨ | ೦೫ |
| ಅನಕ್ಷರಸ್ಥರು | – | – | – | – | – | ೦೨ | – | – | ೦೧ | – | ೦೧ | ೦೧ | ೦೨ | ೦೨ | – | ೦೧ |

* ಪು-ಪುರುಷ; ಮ-ಮಹಿಳೆ

*ಆಧಾರ: ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ, ಉಡುಪಿ.*

**ಕೋಷ್ಟಕ ೮.೧೨ : ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ನೋಂದಣಿಗೊಂಡಿದ್ದ ಉದ್ಯೋಗಾಕಾಂಕ್ಷಿಗಳು, ಪ್ರಕಟಿತ ಖಾಲಿ ಹುದ್ದೆ, ಭರ್ತಿಗೊಂಡ ಹುದ್ದೆಗಳ ವಿವರ**

| ವರ್ಷಗಳು | ನೋಂದಾಯಿಸಿ ಕೊಂಡವರ ಸಂಖ್ಯೆ | ಪ್ರಕಟಿತ ಹುದ್ದೆಗಳು | ಭರ್ತಿಗೊಂಡ ಹುದ್ದೆಗಳ ಸಂಖ್ಯೆ | ಖಾಲಿ ಹುದ್ದೆಗಳ ಸಂಖ್ಯೆ |
|---|---|---|---|---|
| ೧೯೯೮-೧೯೯೯ | ೫೦೮೫ | ೩೯೫ | ೪೭ | – |
| ೧೯೯೯-೨೦೦೦ | ೭೧೬೩ | ೧೮೬ | ೧೬೪ | – |
| ೨೦೦೦-೨೦೦೧ | ೬೭೮೯ | ೨೩೯ | ೨೮೯ | – |
| ೨೦೦೧-೨೦೦೨ | ೫೮೧೨ | ೧೩೯ | ೩೪ | – |
| ೨೦೦೨-೨೦೦೩ | ೪೩೦೫ | ೬೮ | ೩೨ | – |
| ೨೦೦೩-೨೦೦೪ | ೩೫೭೭ | ೪೮ | ೧೧ | – |
| ೨೦೦೪-೨೦೦೫ | ೨೩೮೧ | ೩೨ | ೨೦ | – |
| ೨೦೦೫-೨೦೦೬ | ೧೯೮೫ | ೧೮ | ೫ | – |

*ಆಧಾರ: ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ, ಉಡುಪಿ.*

**ಕೋಷ್ಟಕ ೮.೧೩ : ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ನೋಂದಣಿಗೊಂಡಿದ್ದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರ ವಿವರ**

| ವರ್ಷಗಳು | ನೋಂದಾಯಿಸಿಕೊಂಡವರು | | ಉದ್ಯೋಗ ಪಡೆದವರು | |
|---|---|---|---|---|
| | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ |
| ೧೯೯೮-೧೯೯೯ | ೬೫೯ | ೨೪೮ | ೧೧ | ೦೧ |
| ೧೯೯೯-೨೦೦೦ | ೭೧೮ | ೩೦೪ | ೪೪ | ೦೮ |
| ೨೦೦೦-೨೦೦೧ | ೬೨೬ | ೩೩೭ | ೬೬ | ೨೩ |
| ೨೦೦೧-೨೦೦೨ | ೭೦೨ | ೩೫೩ | ೦೯ | ೦೪ |
| ೨೦೦೨-೨೦೦೩ | ೫೦೫ | ೨೯೨ | ೦೬ | ೦೩ |
| ೨೦೦೩-೨೦೦೪ | ೩೫೬ | ೧೫೩ | ೦೨ | ೦೫ |
| ೨೦೦೪-೨೦೦೫ | ೨೭೫ | ೧೪೩ | ೦೩ | ೦೮ |
| ೨೦೦೫-೨೦೦೬ | ೨೩೧ | ೧೩೦ | ೦೨ | ೦೧ |

*ಆಧಾರ: ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ, ಉಡುಪಿ.*

**ಕೋಷ್ಟಕ ೮.೧೪ : ೧೯೯೮-೯೯ ರಿಂದ ೨೦೦೫-೦೬ರವರೆಗೆ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಸೇವೆಯನ್ನು ಉಪಯೋಗಿಸಿಕೊಂಡ ಘಟಕಗಳು, ಭರ್ತಿಗೊಂಡವರ ವಿವರ**

| ವರ್ಷಗಳು | ಸೇವೆಯನ್ನು ಉಪಯೋಗಿಸಿಕೊಂಡವರ ಸಂಖ್ಯೆ | | | | | | | ಭರ್ತಿಗೊಂಡವರ ಸಂಖ್ಯೆ | | | | | | |
|---|---|---|---|---|---|---|---|---|---|---|---|---|---|---|
| | ಕೇಂದ್ರ ಸರ್ಕಾರ | ಅರೆ ಕೇಂದ್ರ ಸರ್ಕಾರ | ರಾಜ್ಯ ಸರ್ಕಾರ | ಅರೆ ರಾಜ್ಯ ಸರ್ಕಾರ | ಸ್ಥಳೀಯ ಸಂಸ್ಥೆಗಳು | ಖಾಸಗಿ | ಒಟ್ಟು | ಕೇಂದ್ರ ಸರ್ಕಾರ | ಅರೆ ಕೇಂದ್ರ ಸರ್ಕಾರ | ರಾಜ್ಯ ಸರ್ಕಾರ | ಅರೆ ರಾಜ್ಯ ಸರ್ಕಾರ | ಸ್ಥಳೀಯ ಸಂಸ್ಥೆಗಳು | ಖಾಸಗಿ | ಒಟ್ಟು |
| ೧೯೯೮-೧೯೯೯ | ೦೮ | ೦೫ | ೦೧ | ೦೪ | – | ೦೧ | ೧೯ | ೦೭ | ೦೩ | ೦೪ | ೧೯ | – | ೦೪ | ೪೭ |
| ೧೯೯೯-೨೦೦೦ | ೨೯ | ೧೭ | ೦೯ | – | – | ೦೩ | ೫೮ | ೦೬ | ೪೫ | ೧೧೦ | – | – | ೦೩ | ೧೬೪ |
| ೨೦೦೦-೨೦೦೧ | ೧೨ | ೧೫ | ೧೦ | – | – | ೦೨ | ೩೯ | ೦೬ | ೭೧ | ೨೧೧ | – | – | ೦೧ | ೨೮೯ |
| ೨೦೦೧-೨೦೦೨ | ೩೫ | ೦೪ | ೦೬ | – | – | ೦೨ | ೪೭ | ೦೨ | ೦೬ | ೨೫ | – | – | ೦೧ | ೩೪ |
| ೨೦೦೨-೨೦೦೩ | ೩೬ | ೦೩ | ೦೯ | – | – | ೦೧ | ೪೯ | ೦೭ | ೨೦ | ೦೪ | – | – | ೦೧ | ೩೨ |
| ೨೦೦೩-೨೦೦೪ | ೨೫ | ೦೬ | ೦೩ | – | – | ೦೫ | ೩೯ | ೦೨ | ೦೬ | ೦೨ | ೦೧ | – | – | ೧೧ |
| ೨೦೦೪-೨೦೦೫ | ೧೮ | ೦೫ | ೦೧ | – | – | ೦೧ | ೨೫ | ೦೫ | ೦೬ | ೦೯ | – | – | – | ೨೦ |
| ೨೦೦೫-೨೦೦೬ | ೦೫ | ೦೭ | – | – | – | ೦೩ | ೧೫ | ೦೧ | ೦೪ | – | – | – | – | ೦೫ |

*ಆಧಾರ: ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ, ಉಡುಪಿ.*

**ಕೋಷ್ಟಕ ೮.೧೫ : ಜಿಲ್ಲೆಯ ಸ್ನಾತಕೋತ್ತರ ಮತ್ತು ವಿಶಿಷ್ಟ ವೃತ್ತಿ ಪದವೀಧರರ ವಿವರ**

| ಕ್ರಸಂ. | ವಿದ್ಯಾರ್ಹತೆ | ೨೦೦೦-೦೧ | | ೨೦೦೪-೦೫ | |
|---|---|---|---|---|---|
| | | ಪುರುಷ | ಮಹಿಳೆ | ಪುರುಷ | ಮಹಿಳೆ |
| ಸ್ನಾತಕೋತ್ತರ ಪದವಿಧರರು | | | | | |
| ೧. | ಕಲೆ | ೨೫ | ೧೫ | ೧೮ | ೧೨ |
| ೨. | ವಿಜ್ಞಾನ | ೨೨ | ೧೮ | ೧೬ | ೧೩ |
| ೩. | ವಾಣಿಜ್ಯ | ೩೦ | ೨೦ | ೨೩ | ೧೫ |
| ಇಂಜಿನಿಯರ್‌ಗಳು | | | | | |
| ೪. | ಸಿವಿಲ್ | ೧೫ | ೦೬ | ೧೧ | ೦೩ |
| ೫. | ಮೆಕ್ಯಾನಿಕಲ್ | ೧೬ | ೦೨ | ೧೨ | ೦೨ |
| ೬. | ಎಲೆಕ್ಟ್ರಿಕಲ್ | ೧೮ | ೦೭ | ೧೪ | ೦೩ |
| ೭. | ಇತರೆ | ೨೨೭ | ೧೦೨ | ೨೦೦ | ೫೫ |
| ೮. | ಎಂ.ಬಿ.ಬಿ.ಎಸ್. (ಮೆಡಿಸಿನ್) | ೦೬ | ೦೫ | ೦೪ | ೦೨ |
| ೯. | ವ್ಯವಸಾಯ * | ೦೭ | ೦೬ | ೦೫ | ೦೨ |
| ೧೦. | ಶಿಕ್ಷಣ | ೦೯ | ೦೫ | ೦೭ | ೦೩ |
| ೧೧. | ದೈಹಿಕ ಶಿಕ್ಷಣ | ೧೦ | ೦೩ | ೦೮ | ೦೧ |
| ೧೨. | ಪಶು ವೈದ್ಯ | ೦೭ | ೦೪ | ೦೫ | ೧೨ |
| ೧೩. | ಇತರೇ ವೃತ್ತಿ ಪದವೀಧರರು | ೨೬ | ೧೧ | ೧೪ | ೦೭ |
| | ಒಟ್ಟು | ೪೧೮ | ೨೦೪ | ೩೩೭ | ೧೩೦ |

** ಬಿಎಸ್ಸಿ ಅಗ್ರಿಕಲ್ಚರ್; ಎಂ.ಎಸ್ಸಿ ಅಗ್ರಿಕಲ್ಚರ್;ಎಂ.ಎಸ್ಸಿ ಸಿರಿಕಲ್ಚರ್; ಎಂ.ಎಸ್ಸಿ ಹಾರ್ಟಿಕಲ್ಚರ್; ಎಂ.ಎಸ್ಸಿ ಪ್ಲೋರಿಕಲ್ಚರ್ ಪದವೀಧರರು, ವ್ಯವಸಾಯ ಸ್ನಾತಕೋತ್ತರ ಪದವೀಧರರಲ್ಲಿ ಸೇರಿರುತ್ತಾರೆ.*

*ಆಧಾರ : ವಿಶಿಷ್ಟ ವೃತ್ತಿ ಮತ್ತು ಕಾರ್ಯನಿರ್ವಾಹಕ ಉದ್ಯೋಗ ವಿನಿಮಯ ಕಛೇರಿ, ಬೆಂಗಳೂರು*

ಮೇಲೆ. ಜಿಲ್ಲೆಯು ರಾಜ್ಯದ ಭೌಗೋಳಿಕ ವಿಸ್ತೀರ್ಣದಲ್ಲಿ ೩೫೭೫ ಚದರ ಕಿ.ಮೀ. ಭೌಗೋಳಿಕ ವಿಸ್ತೀರ್ಣ ಹೊಂದಿದ್ದು, ರಾಜ್ಯದಲ್ಲಿ ಭೌಗೋಳಿಕವಾಗಿ ೧.೮೬ರಷ್ಟಿದೆ. ಇದರಲ್ಲಿ ಭೂಬಳಕೆ ಈ ರೀತಿಯಿದೆ. ಅರಣ್ಯಭೂಮಿ ೧೯೯೦-೨೦೦೦ದಲ್ಲಿ ಶೇ ೨೭.೯೦ ಹಾಗೂ ೨೦೦೦-೦೧ರಲ್ಲಿ ೨೭.೯೩ರಷ್ಟಿದೆ. ಅರಣ್ಯ ಪ್ರದೇಶದಲ್ಲಿ ರಾಜ್ಯದಲ್ಲಿ (೨೭ ಜಿಲ್ಲೆಗಳಲ್ಲಿ) ಐದನೇ ಸ್ಥಾನ ಪಡೆದುಕೊಂಡಿದೆ.

ಮೇಲಿನ ಅವಧಿಗಳಲ್ಲಿ ಕ್ರಮವಾಗಿ ವ್ಯವಸಾಯೇತರ ಭೂಮಿ ಶೇ ೧೦.೭೬ ಹಾಗೂ ಶೇ ೧೦.೮೦ರಷ್ಟು ಆಗಿದ್ದರೆ, ಬಂಜರು ಭೂಮಿ ಮತ್ತು ಸಾಗುವಳಿ ಮಾಡದಿರುವ ಭೂಮಿ ಶೇ ೩.೩೪ ಹಾಗೂ ಶೇ ೩.೨೭ ಆಗಿತ್ತು. ಖಾಯಂ ಬಂಜರು ಮತ್ತು ಇತರೆ ಹುಲ್ಲುಗಾವಲು ಪ್ರದೇಶ ಶೇ. ೩.೧೫ ಹಾಗೂ ಶೇ ೨.೯೯ರಷ್ಟು, ಇತರೆ ವೃಕ್ಷಗಳು ಮತ್ತು ತೋಪುಗಳು ಶೇ ೧೩.೪೯ ಹಾಗೂ ಶೇ ೧೩.೪೯ರಷ್ಟು, ಸಾಗುವಳಿಗೆ ಯೋಗ್ಯವಾದ ಬಂಜರು ಭೂಮಿ ಶೇ ೯.೦೫ ಹಾಗೂ ಶೇ ೯.೨೪ರಷ್ಟು, ಇತರೆ ಬೀಳು ಭೂಮಿ ಶೇ ೨.೩೦ ಹಾಗೂ ಶೇ ೨.೪೨ರಷ್ಟು, ಚಾಲ್ತಿ ಬೀಳುಭೂಮಿ ಶೇ ೧.೪೯ ಹಾಗೂ ಶೇ.೧.೩೭ರಷ್ಟು. ನಿವ್ವಳ ಬಿತ್ತನೆಯಾದ ಪ್ರದೇಶ ಶೇ ೨೮.೫೨ ಹಾಗೂ ೨೮.೨೨ರಷ್ಟಿತ್ತು. ಒಂದಕ್ಕಿಂತ ಹೆಚ್ಚು ಭಾರಿ ಬಿತ್ತನೆಯಾದ ಪ್ರದೇಶ ಶೇ ೩೧.೦೮ ಹಾಗೂ ೨೯.೭೬ರಷ್ಟು, ನಿವ್ವಳ ಬಿತ್ತನೆಯಾದ ಪ್ರದೇಶದಲ್ಲಿ ನಿವ್ವಳ ನೀರಾವರಿಯಿಂದ ಪ್ರದೇಶ ಶೇ ೩೫.೨೭, ಹಾಗೂ ೩೪.೦೯ರಷ್ಟು ಹಾಗೂ ಒಟ್ಟು ಬಿತ್ತನೆಯಾದ ಪ್ರದೇಶದಲ್ಲಿ ಒಟ್ಟು ನೀರಾವರಿ ಪ್ರದೇಶ ಶೇ ೩೮.೩೮ ಹಾಗೂ ಶೇ ೨೭.೬೦ ರಷ್ಟಿರುವುದನ್ನು ಅಂಕಿಅಂಶಗಳು ಸ್ಪಷ್ಟಪಡಿಸುತ್ತವೆ. ಹೆಚ್ಚಿನ ವಿವರಗಳಿಗೆ ಕೋಷ್ಟಕ ೮.೧೬ ನೋಡಿ.

## ಭೂ ಹಿಡುವಳಿ

ಭೂ ಹಿಡುವಳಿ ಗಣತಿಯನ್ನು ಪ್ರತಿ ಐದು ವರ್ಷಗಳಿಗೊಂದಾವರ್ತಿ ನಡೆಸಲಾಗುತ್ತಿದ್ದು, ೨೦೦೧-೦೨ರ ಕೃಷಿ ಗಣತಿಯಂತೆ ಒಂದು ಹೆಕ್ಟೇರಿಗಿಂತ ಕಡಿಮೆ (ಅತಿ ಸಣ್ಣ) ಭೂ ಹಿಡುವಳಿದಾರರ ಸಂಖ್ಯೆ ೧,೩೯,೯೫ (೪೪,೫೫೮), ಒಂದರಿಂದ ಎರಡು ಹೆಕ್ಟೇರು (ಸಣ್ಣ) ಭೂ ಹಿಡುವಳಿದಾರರ ಸಂಖ್ಯೆ ೨೪,೪೪೬ (೩೪,೨೮೪), ಎರಡರಿಂದ ನಾಲ್ಕು ಹೆಕ್ಟೇರು (ಅರೆ ಮಧ್ಯಮ) ಭೂ ಹಿಡುವಳಿದಾರರ

**ಕೋಷ್ಟಕ ೮.೧೬ : ಉಡುಪಿ ಜಿಲ್ಲೆಯ ಭೂ ಬಳಕೆಯ ವಿವರ**

(ಹೆಕ್ಟೇರ್‌ಗಳಲ್ಲಿ)

| ವರ್ಷಗಳು | ಭೌಗೋಳಿಕ ವಿಸ್ತೀರ್ಣ ಚದುರ ಕಿ.ಮೀಗಳಲ್ಲಿ | ಅರಣ್ಯ ಪ್ರದೇಶ | ಭೂ ಬಳಕೆ | | | | | | | | | | | |
|---|---|---|---|---|---|---|---|---|---|---|---|---|---|---|
| | | | ಸಾಗುವಳಿಗೆ ಲಭ್ಯವಿಲ್ಲದ ಭೂಮಿ | | | ಸಾಗುವಳಿ ಮಾಡದಿರುವ ಇತರೆ ಭೂಮಿ | | | | ಬೀಳು ಭೂಮಿ | | | ಬಿತ್ತನೆಯಾದ ಪ್ರದೇಶ | |
| | | | ಕೃಷಿಯೇತರ ಉದ್ದೇಶಗಳಿಗೆ | ಬಂಜರು ಮತ್ತು ವ್ಯವಸಾಯ ಮಾಡಲು ಸಾಧ್ಯವಿಲ್ಲದ ಭೂಮಿ | ಒಟ್ಟು | ಸಾಗುವಳಿಗೆ ಯೋಗ್ಯವಾದ ಬಂಜರು | ಖಾಯಂ ಗೋಮಾಳ | ವೃಕ್ಷ ಮತ್ತು ತೋಪುಗಳು | ಒಟ್ಟು | ಚಾಲ್ತಿ | ಇತರೆ | ಒಟ್ಟು | ನಿವ್ವಳ | ಒಂದಕ್ಕಿಂತ ಹೆಚ್ಚು |
| ೧೯೯೭-೯೮ | ೩೫೬೪೪೬ | ೯೯೪೩೯ | ೩೮೨೧೯ | ೧೧೯೨೪ | ೫೦೧೩೩ | ೩೪೨೨೮ | ೧೧೨೫೯ | ೪೮೪೨೨ | ೯೩೯೦೯ | ೫೧೯೨ | ೭೭೬೫ | ೧೨೯೫೭ | ೧೦೦೨೪೬ | ೩೦೨೩೮ |
| ೧೯೯೯-೨೦೦೦ | " | ೯೯೪೩೯ | ೩೮೩೪೫ | ೧೧೯೧೦ | ೫೦೨೫೫ | ೩೨೨೬೭ | ೧೧೨೩೯ | ೪೮೦೮೪ | ೯೧೫೯೦ | ೫೨೯೭ | ೮೨೦೪ | ೧೩೫೦೧ | ೧೦೧೬೬೧ | ೩೧೬೦೦ |
| ೨೦೦೦-೦೧ | " | ೯೯೫೬೯ | ೩೮೫೨೬ | ೧೧೬೮೯ | ೫೦೨೧೫ | ೩೨೯೨೪ | ೧೦೬೭೮ | ೪೮೯೦೦ | ೯೨೫೦೮ | ೪೯೦೩ | ೮೬೩೨ | ೧೩೫೩೫ | ೧೦೦೬೧೯ | ೨೯೯೩೭ |
| ೨೦೦೧-೦೨ | " | ೯೯೫೬೯ | ೩೮೬೧೬ | ೧೧೬೭೦ | ೫೦೨೮೬ | ೩೩೦೬೭ | ೧೦೬೭೮ | ೪೮೫೯೧ | ೯೨೩೩೬ | ೪೨೦೨ | ೮೪೧೫ | ೧೨೬೧೭ | ೧೦೧೬೩೮ | ೨೭೬೪೭ |
| ೨೦೦೨-೦೩ | " | ೧೦೧೦೨ | ೩೮೬೯೭ | ೧೧೬೨೧ | ೫೦೩೧೮ | ೩೩೭೯೮ | ೧೦೬೪೦ | ೪೮೫೯೧ | ೯೨೦೨೯ | ೩೯೦೩ | ೯೬೮೫ | ೧೩೫೮೮ | ೯೯೪೦೯ | ೨೫೭೭೩ |
| ೨೦೦೩-೦೪ | " | ೧೦೧೦೨ | ೩೮೮೧೯ | ೧೧೯೧೨ | ೫೦೪೩೧ | ೩೫೧೧೬ | ೧೦೬೩೭ | ೪೮೪೨೮ | ೯೪೧೮೧ | ೨೨೩೦ | ೧೦೩೬೪ | ೧೨೫೯೪ | ೯೧೩೮ | ೨೨೬೪೬ |

*ಆಧಾರ : ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ, ಉಡುಪಿ.*

ಸಂಖ್ಯೆ ೧೨,೬೫೬ (೩೪,೫೭೯), ನಾಲ್ಕರಿಂದ ಹತ್ತು ಹೆಕ್ಟೇರು (ಮಧ್ಯಮ) ಭೂ ಹಿಡುವಳಿದಾರರ ಸಂಖ್ಯೆ ೪,೭೭೫ (೨೭,೧೭೫) ಹಾಗೂ ಹತ್ತು ಹೆಕ್ಟೇರುಗಳು ಮತ್ತು ಅದಕ್ಕಿಂತ ಹೆಚ್ಚು (ದೊಡ್ಡ) ಭೂ ಹಿಡುವಳಿದಾರರ ಸಂಖ್ಯೆ ೫೧೮ (೮,೬೧೩) ಹೀಗೆ ಒಟ್ಟು ೧,೮೨,೮೪೫ ಭೂ ಹಿಡುವಳಿದಾರರು ೧,೫೧,೯೬೬ ಹೆಕ್ಟೇರು ವಿಸ್ತೀರ್ಣವನ್ನು ಹೊಂದಿದ್ದರು. ಆವರಣದಲ್ಲಿ ನೀಡಿರುವ ಅಂಕಿಅಂಶಗಳು ಭೂ ಹಿಡುವಳಿದಾರರು ಹೊಂದಿದ್ದ ಭೂ ವಿಸ್ತೀರ್ಣವನ್ನು (ಹೆಕ್ಟೇರುಗಳಲ್ಲಿ) ಸೂಚಿಸುತ್ತದೆ. ಜನಸಂಖ್ಯಾ ಹೆಚ್ಚಳದಿಂದಾಗಿ ದೊಡ್ಡ ಹಿಡುವಳಿದಾರರ ಸಂಖ್ಯೆ ಕುಂಠಿತಗೊಂಡು, ಚಿಕ್ಕ ಹಿಡುವಳಿದಾರರ ಸಂಖ್ಯೆ ಹೆಚ್ಚಳಗೊಂಡಿರುವುದು ಅಂಕಿಅಂಶಗಳಿಂದ ತಿಳಿದುಬಂದಿರುತ್ತದೆ. ಹೆಚ್ಚಿನ ವಿವರಗಳಿಗೆ ಕೋಷ್ಟಕ ೮.೧೭ ನೋಡಿ.

## ನೀರಾವರಿ

ರಾಜ್ಯದ ಮೂರು ಕರಾವಳಿ ಜಿಲ್ಲೆಗಳಲ್ಲಿ ಉಡುಪಿ ಜಿಲ್ಲೆಯು ಒಂದಾಗಿದೆ. ಜಿಲ್ಲೆಯಲ್ಲಿ ಗಂಗೊಳ್ಳಿ, ಹಾಲಾಡಿ, ಸ್ವರ್ಣ, ವಾರಾಹಿ, ಸೌಪರ್ಣಿಕ, ಚಕ್ರಾ, ಕುಬ್ಜ, ಸೀತಾ, ಎಣ್ಣೆಹೊಳೆ ಮತ್ತಿತರ ನದಿ ಕೊಳ್ಳಗಳು ಹರಿದರೂ, ಜಿಲ್ಲೆಯಲ್ಲಿ ದೊಡ್ಡ ಪ್ರಮಾಣದ ಕಾಲುವೆ ನೀರಾವರಿ ಪದ್ಧತಿಯಾಗಲಿ, ಜಲಾಶಯಗಳಾಗಲಿ ಇರುವುದಿಲ್ಲ. ಜಿಲ್ಲೆಯಲ್ಲಿ ಸಾಮಾನ್ಯ ಮಳೆ ೪,೨೦೮ ಮಿ.ಮೀ. ಆಗಿದ್ದು, ೨೦೦೪ರಲ್ಲಿ ೪,೨೮೭ ಮಿ.ಮೀ. ವಾಸ್ತವ ಮಳೆಯಾಗಿದೆ.

## ಕೋಷ್ಟಕ ೮.೧೭ : ೧೯೯೦–೯೧, ೧೯೯೫–೯೬ ಹಾಗೂ ೨೦೦೦–೦೧ರ ನಡೆದ ಕೃಷಿ ಗಣತಿಯ ಪ್ರಕಾರ ಭೂ ಹಿಡುವಳಿದಾರರ ವಿವರ

ವಿಸ್ತೀರ್ಣ: ಹೆಕ್ಟೇರುಗಳಲ್ಲಿ
ಹಿಡುವಳಿದಾರರು: ಸಂಖ್ಯೆಗಳಲ್ಲಿ

| ಭೂಹಿಡುವಳಿಯ ವಿವರ | | ೧೯೯೦–೯೧ | | | | ೧೯೯೫–೯೬ | | | | ೨೦೦೧–೦೨ | | | |
|---|---|---|---|---|---|---|---|---|---|---|---|---|---|
| | | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಇತರೆ | ಒಟ್ಟು | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಇತರೆ | ಒಟ್ಟು | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಇತರೆ | ಒಟ್ಟು |
| ಅತಿ ಸಣ್ಣ (೧ ಹೆ.ಗಿಂತ ಕಡಿಮೆ | ಸಂಖ್ಯೆ | ೩೮೫೮ | ೨೧೦೨ | ೮೯೧೯೧ | ೯೫೧೫೧ | ೪೬೯೧ | ೨೪೬೨ | ೧೦೪೮೭೨ | ೧೧೨೦೨೫ | ೪೬೮೨ | ೪೧೮೭ | ೧೩೧೧೨೬ | ೧೩೯೯೯೫ |
| | ವಿಸ್ತೀರ್ಣ | ೧೨೩೨ | ೮೭೦ | ೨೯೭೦೦ | ೩೧೮೦೨ | ೧೬೧೭ | ೧೧೮೩ | ೩೬೩೧೨ | ೩೯೧೧೨ | ೧೫೪೬ | ೧೭೩೧ | ೪೧೨೮೧ | ೪೪೫೫೮ |
| ಸಣ್ಣ (೧–೨ ಹೆ) | ಸಂಖ್ಯೆ | ೪೮೮ | ೮೫೪ | ೨೦೩೯೯ | ೨೧೭೪೧ | ೬೦೬ | ೯೬೪ | ೨೩೧೪೦ | ೨೪೭೧೦ | ೫೫೯ | ೧೧೬೯ | ೨೨೬೫೬ | ೨೪೩೮೪ |
| | ವಿಸ್ತೀರ್ಣ | ೬೬೭ | ೧೧೬೧ | ೨೯೨೦೫ | ೩೧೦೩೩ | ೮೨೪ | ೧೩೬೧ | ೩೨೭೨೪ | ೩೪೯೧೯ | ೭೫೨ | ೧೬೨೪ | ೩೧೯೦೮ | ೩೪೨೮೪ |
| ಅರೆ ಮಧ್ಯಮ (೨–೪ ಹೆ) | ಸಂಖ್ಯೆ | ೫೯ | ೨೮೬ | ೧೨೦೯೫ | ೧೨೪೪೦ | ೭೫ | ೩೫೫ | ೧೩೮೨೬ | ೧೪೨೫೬ | ೮೨ | ೩೪೬ | ೧೨೨೨೮ | ೧೨೬೫೬ |
| | ವಿಸ್ತೀರ್ಣ | ೧೪೮ | ೭೫೩ | ೩೩೫೧೮ | ೩೪೪೧೯ | ೧೮೬ | ೯೪೬ | ೩೭೮೪೮ | ೩೮೯೮೦ | ೧೯೫ | ೮೯೭ | ೩೩೪೩೭ | ೩೪೫೨೯ |
| ಮಧ್ಯಮ (೪–೧೦ ಹೆ) | ಸಂಖ್ಯೆ | ೦೯ | ೮೨ | ೫೬೯೭ | ೫೭೮೮ | ೦೬ | ೮೨ | ೫೬೨೯ | ೫೭೧೭ | ೦೮ | ೭೧ | ೪೬೯೬ | ೪೭೭೫ |
| | ವಿಸ್ತೀರ್ಣ | ೪೮ | ೪೪೮ | ೩೨೯೫೨ | ೩೩೪೪೮ | ೩೩ | ೪೨೮ | ೩೨೨೪೧ | ೩೨೭೦೨ | ೪೭ | ೩೭೭ | ೨೬೭೫೧ | ೨೭೧೭೫ |
| ದೊಡ್ಡ (೧೦ ಹೆ ಗಿಂತ ಹೆಚ್ಚು) | ಸಂಖ್ಯೆ | – | ೦೪ | ೮೮೪ | ೮೮೮ | ೦೧ | ೦೨ | ೬೭೨ | ೬೭೫ | – | ೦೧ | ೫೧೭ | ೫೧೮ |
| | ವಿಸ್ತೀರ್ಣ | – | ೪೫ | ೧೬೮೪೫ | ೧೬೮೪೫ | ೧೭ | ೨೦ | ೧೧೨೬೭ | ೧೦೩೦೪ | – | ೧೦ | ೮೬೦೩ | ೮೬೦೩ |

ಉಡುಪಿ ಜಿಲ್ಲೆಯಲ್ಲಿ ೧೯೯೭-೯೮ರಲ್ಲಿ ವಿವಿಧ ಮೂಲಗಳಿಂದ ನೀರಾವರಿಯಾದ ನಿವ್ವಳ ಪ್ರದೇಶದ ವಿವರ ಹೀಗಿದೆ. ೨,೦೧೫ ಹೆ. ಕೆರೆಗಳಿಂದ, ೧೨,೫೩೨ ಹೆ., ಬಾವಿಗಳಿಂದ, ೩೧ಹೆ. ಕೊಳವೆ ಬಾವಿಗಳಿಂದ, ೮೫೭ಹೆ., ಏತ ನೀರಾವರಿಯಿಂದ, ೧೭,೯೦೮ ಹೆ. ಇತರ ಜಲಮೂಲಗಳಿಂದ ಹೀಗೆ ಒಟ್ಟು ೩೩,೩೪೪ ಹೆ. ಪ್ರದೇಶ ನೀರಾವರಿಯಾಗಿತ್ತು. ಉಡುಪಿ ಜಿಲ್ಲೆಯು ೨೦೦೩-೦೪ರಲ್ಲಿ ೧,೮೮೭ ಹೆಕ್ಟೇರು ಪ್ರದೇಶ ಕೆರೆಗಳಿಂದ ನೀರಾವರಿಯಾಗಿದ್ದರೆ, ೧೫,೮೯೦ ಹೆ. ಬಾವಿಗಳಿಂದ, ೪೬೦ ಹೆ ಕೊಳವೆ ಬಾವಿಗಳಿಂದ, ೫,೨೫೭ ಹೆ. ಏತನೀರಾವರಿಯಿಂದ ಹಾಗೂ ೮,೯೦೩ಹೆ. ಇತರೆ ಮೂಲಗಳಿಂದ ಹೀಗೆ ಒಟ್ಟು ೩೨,೫೯೭ ಹೆ. ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಿಕೊಡಲಾಗಿತ್ತು. ಹೆಚ್ಚಿನ ವಿವರಗಳಿಗೆ ಕೋಷ್ಟಕ ೮.೧೮ ನೋಡಿ.

**ಕೋಷ್ಟಕ ೮.೧೮ : ವಿವಿಧ ಮೂಲಗಳಿಂದಾದ ನೀರಾವರಿ ಸೌಲಭ್ಯ**

(ಹೆಕ್ಟೇರುಗಳಲ್ಲಿ)

| ನೀರಾವರಿಯ ಮೂಲಗಳು | ೧೯೯೬-೯೭ | ೧೯೯೭-೯೮ | ೧೯೯೮-೯೯ | ೧೯೯೯-೨೦೦೦ | ೨೦೦೦-೦೧ | ೨೦೦೧-೦೨ | ೨೦೦೨-೦೩ | ೨೦೦೩-೦೪ |
|---|---|---|---|---|---|---|---|---|
| **ಕೆರೆಗಳು** | ೨೦೧೭ | ೨೦೧೫ | ೨೨೫೬ | ೨೨೬೬ | ೨೨೦೧ | ೨೨೭೩ | ೨೧೭೮ | ೧೮೮೭ |
| **ಬಾವಿಗಳು** | ೧೧೩೮೫ | ೧೨೫೩೨ | ೧೨೨೪೪ | ೧೩೩೩೫ | ೧೨೮೭೦ | ೧೩೭೨೨ | ೧೬೨೮೫ | ೧೫೮೯೦ |
| **ಕೊಳವೆ ಬಾವಿಗಳಿಂದ** | ೨೪ | ೩೧ | ೧೬೬ | ೧೯೪ | ೩೩೦ | ೩೩೪ | ೪೯೧ | ೪೬೦ |
| **ಏತ ನೀರಾವರಿ ಯಿಂದ** | ೮೬೨ | ೮೫೭ | ೮೬೮ | ೮೫೨ | ೮೪೮ | ೮೪೩ | ೪೫೩೨ | ೫೨೫೭ |
| **ಇತರೆ ಜಲ ಮೂಲಗಳಿಂದ** | ೧೬೫೫೯ | ೧೭೯೦೮ | ೧೮೭೧೬ | ೧೯೨೧೮ | ೧೮೦೫೪ | ೧೭೮೫೯ | ೧೦೧೩೧ | ೮೯೦೩ |
| **ಒಟ್ಟು** | **೩೦೮೪೭** | **೩೩೩೪೪** | **೩೪೨೫೦** | **೩೫೮೬೫** | **೩೪೩೦೩** | **೩೫೦೩೧** | **೩೩೬೧೭** | **೩೨೫೯೭** |

## ಬೆಳೆಗಳು

ಜಿಲ್ಲೆಯಲ್ಲಿ ಪ್ರಮುಖ ಏಕದಳ ಧಾನ್ಯವಾದ ಭತ್ತ, ದ್ವಿದಳ ಧಾನ್ಯಗಳಾದ ಉದ್ದು, ಹುರಳಿ, ಹೆಸರು, ಎಣ್ಣೆಕಾಳುಗಳಾದ ಕಡಲೆಕಾಯಿ, ಎಳ್ಳು, ಅಗಸೆಬೀಜ, ವಾಣಿಜ್ಯ ಬೆಳೆಯಾದ ಕಬ್ಬು, ತೋಟಗಾರಿಕಾ ಬೆಳೆಗಳಾದ ಬದನೆಕಾಯಿ, ಈರುಳ್ಳಿ, ಬಾಳೆ, ಸಿಹಿಗೆಣಸು, ಟೋಪಿಯೋಕಾ (Topioca), ಮಾವು, ಪರಂಗಿಹಣ್ಣು, ಗೇರು (ಗೋಡಂಬಿ), ಸೀಬೆಹಣ್ಣು, ಸಪೋಟ, ನಿಂಬೆ, ಮೆಣಸಿನಕಾಯಿ, ಸಂಬಾರು ಪದಾರ್ಥಗಳಾದ ಅರಿಸಿನ, ಶುಂಠಿ, ಮೆಣಸು ಮುಂತಾದ ಬೆಳೆಗಳನ್ನು ಬೆಳೆಯಲಾಗುತ್ತಿದೆ. ಜಿಲ್ಲೆಯು ವಿಭಜನೆಗೊಂಡ ನಂತರ (ದಕ್ಷಿಣ ಕನ್ನಡ ಜಿಲ್ಲೆಯಿಂದ) ೧೯೯೯-೨೦೦೦ದಲ್ಲಿ ೬೯,೮೯೨ ಹೆಕ್ಟೇರು ಪ್ರದೇಶದಲ್ಲಿ ಏಕದಳ ಧಾನ್ಯ ಹಾಗೂ ಉಪತೃಣ ಧಾನ್ಯಗಳನ್ನು, ೧೨,೧೬೪ ಹೆಕ್ಟೇರು ಪ್ರದೇಶದಲ್ಲಿ ದ್ವಿದಳ ಧಾನ್ಯಗಳನ್ನೂ, ೮೨,೦೫೬ ಹೆಕ್ಟೇರು ಪ್ರದೇಶದಲ್ಲಿ ಒಟ್ಟು ಆಹಾರ ಧಾನ್ಯಗಳನ್ನು ಬೆಳೆಯಲಾಗುತ್ತಿದ್ದು, ೧,೨೮,೬೧೮ ಟನ್ ಆಹಾರ ಪದಾರ್ಥಗಳನ್ನು ಉತ್ಪಾದಿಸಲಾಗಿತ್ತು. ೧೯೯೯-೨೦೦೦ ದಿಂದ ೨೦೦೪-೦೫ರವರೆಗೆ ಆಯ್ದ ವರ್ಷಗಳಲ್ಲಿ ಉತ್ಪಾದಿಸಿದ ಪ್ರಮುಖ ಆಹಾರ ಪದಾರ್ಥಗಳ ವಿವರಗಳನ್ನು ಕೋಷ್ಟಕ ೮.೧೯ರಲ್ಲಿ ನೀಡಲಾಗಿದೆ.

## ರೇಷ್ಮೆ

ರೇಷ್ಮೆಯು ಗೃಹ ಕೈಗಾರಿಕೆಗಳಲ್ಲಿ ಒಂದಾಗಿರುವುದಲ್ಲದೆ, ವ್ಯವಸಾಯಕ್ಕೆ ಪೂರಕವಾಗಿದೆ. ಗ್ರಾಮೀಣ ಪ್ರದೇಶದ ಕೃಷಿಕರಿಗೆ ಸಾಕಷ್ಟು ಉದ್ಯೋಗಾವಕಾಶ ಹಾಗೂ ಗ್ರಾಮೀಣ ಪ್ರದೇಶದ ಆರ್ಥಿಕಾಭಿವೃದ್ಧಿಗೆ ರೇಷ್ಮೆಯು ಸಹಕಾರಿಯಾಗಿದೆ. ಜಿಲ್ಲೆಯಲ್ಲಿ ರೇಷ್ಮೆ ಕೃಷಿಗೆ ಹಲವಾರು ರೀತಿಯ

## ಕೋಷ್ಟಕ ೮.೧೯ : ಜಿಲ್ಲೆಯಲ್ಲಿನ ಆಹಾರ ಪದಾರ್ಥಗಳ ಉತ್ಪಾದನಾ ವಿವರ

ವಿಸ್ತೀರ್ಣ– ಹೆಕ್ಟೇರುಗಳಲ್ಲಿ
ಉತ್ಪನ್ನ– ಟನ್ನುಗಳಲ್ಲಿ
ಇಳುವರಿ– (ಕೆ.ಜಿ.ಗಳಲ್ಲಿ ಪ್ರತಿ ಹೆಕ್ಟೇರ್‌ಗೆ)

| ಆಹಾರ ಪದಾರ್ಥಗಳು | | ೧೯೯೯–೨೦೦೦ | ೨೦೦೦–೦೧ | ೨೦೦೩–೦೪ |
|---|---|---|---|---|
| ಏಕದಳ ಮತ್ತು ಉಪತೃಣ ಧಾನ್ಯಗಳು | ವಿಸ್ತೀರ್ಣ | ೬೯,೮೯೨ | ೬೭,೧೩೬ | ೬೨,೧೦೩ |
| | ಉತ್ಪನ್ನ | ೧,೨೩,೯೦೮ | ೧,೩೫,೭೯೦ | ೧,೫೭,೬೫೩ |
| | ಇಳುವರಿ | ೧,೮೬೬ | ೨,೧೨೯ | ೨,೬೭೨ |
| ದ್ವಿದಳ ಧಾನ್ಯಗಳು | ವಿಸ್ತೀರ್ಣ | ೧೨,೧೬೪ | ೧೧,೩೮೯ | ೭,೭೫೭ |
| | ಉತ್ಪನ್ನ | ೪,೭೦೮ | ೫,೩೫೦ | ೪,೬೨೦ |
| | ಇಳುವರಿ | ೪೦೭ | ೪೯೪ | ೬೨೭ |
| ಒಟ್ಟು ಆಹಾರ ಧಾನ್ಯಗಳು | ವಿಸ್ತೀರ್ಣ | ೮೨,೦೫೬ | ೭೮,೫೨೫ | ೬೯,೮೬೦ |
| | ಉತ್ಪನ್ನ | ೧,೨೮,೬೧೬ | ೧,೪೧,೧೪೦ | ೧,೬೨,೨೭೩ |
| | ಇಳುವರಿ | ೧,೬೫೦ | ೧,೮೯೨ | ೨,೪೪೫ |
| ಎಣ್ಣೆ ಬೀಜಗಳು | ವಿಸ್ತೀರ್ಣ | ೩,೧೧೩ | ೩,೦೪೪ | ೨,೧೦೩ |
| | ಉತ್ಪನ್ನ | ೪,೯೧೩ | ೪,೧೦೯ | ೩,೧೮೪ |
| | ಇಳುವರಿ | ೧,೬೬೧ | ೧,೪೨೧ | ೧,೫೯೪ |

ಸೌಲಭ್ಯಗಳು ದೊರೆಯುತ್ತಿರುವುದರಿಂದ ರೇಷ್ಮೆ ಕೃಷಿಯು ವರ್ಷದಿಂದ ವರ್ಷಕ್ಕೆ ಅಭಿವೃದ್ಧಿ ಹೊಂದುತ್ತಿದೆ. ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯ ಕೃಷಿಕರು ಸಣ್ಣ ಹಿಡುವಳಿದಾರರಾಗಿದ್ದು, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಕೃಷಿಕರೂ ಸಾಕಷ್ಟು ಸಂಖ್ಯೆಯಲ್ಲಿ ರೇಷ್ಮೆ ಕೃಷಿಯಲ್ಲಿ ತೊಡಗಿದ್ದಾರೆ. ಜಿಲ್ಲೆಯಲ್ಲಿ ಒಟ್ಟು ೧೨೦ ಎಕರೆ ವಿಸ್ತೀರ್ಣದಲ್ಲಿ ಒಟ್ಟು ೧೫೩ ಕುಟುಂಬಗಳು ಈ ಕೃಷಿಯಲ್ಲಿ ತೊಡಗಿವೆ. ಇಲ್ಲಿ ಜೂನ್‌ನಿಂದ ಸೆಪ್ಟೆಂಬರ್‌ವರೆಗೆ ವಿಪರೀತ ಮಳೆಯಿಂದಾಗಿ (ಸು.೪೦೦೦ ಎಂ.ಎಂ. ಮಳೆ) ಮಳೆಗಾಲದ ಸಮಯದಲ್ಲಿ ರೇಷ್ಮೆ ಕೃಷಿ ಕಷ್ಟಸಾಧ್ಯ. ಅಕ್ಟೋಬರ್‌ನಿಂದ ಫೆಬ್ರವರಿಯವರೆಗೆ ದ್ವಿತಳಿ ಬೆಳೆಯನ್ನು ಬೆಳೆಯಬಹುದು. ನಂತರ ಏಪ್ರಿಲ್‌ವರೆಗೆ ನೀರಾವರಿ ವ್ಯವಸ್ಥೆ ಇದ್ದಲ್ಲಿ ಮಿಶ್ರ ತಳಿ ಬೆಳೆಯಬಹುದು. ಎಂV ತಳಿ ಸ್ಥಳೀಯವಾಗಿ ಚಾಲ್ತಿಯಲ್ಲಿದೆ. ಇತ್ತೀಚಿಗಿನ ವರ್ಷಗಳಲ್ಲಿ ವಿV, ಎನ್‌ಬಿಳಿಡಿ೨; ಕೆಎII. ಸಿ.ಎಸ್.ಆರ್, ಸಿಎಸ್‌ಆರ್೨X ಸಿಎಸ್‌ಆರ್೪; ಸಿಎಸ್‌ಆರ್೪ Xಸಿಎಸ್‌ಆರ್೨ ಮತ್ತಿತರ ತಳಿಗಳನ್ನು ರೇಷ್ಮೆ ಕೃಷಿಗೆ ಬಳಸಲಾಗುತ್ತಿದೆ. ಜಿಲ್ಲೆಯಲ್ಲಿ ಎರಡು ತಾಂತ್ರಿಕ ಸೇವಾ ಕೇಂದ್ರ (ಕುಂದಾಪುರ ಹಾಗೂ ಕಾರ್ಕಳ) ಗಳು ಹಾಗೂ ಒಂದು ರೇಷ್ಮೆ ವಿಸ್ತರಣಾ ಕೇಂದ್ರ (ಉಡುಪಿ) ಕಾರ್ಯನಿರ್ವಹಿಸುತ್ತಿವೆ. ಜಿಲ್ಲೆಯಲ್ಲಿ ರೇಷ್ಮೆಗೂಡಿನ ಮಾರುಕಟ್ಟೆಯಿಲ್ಲದ ಕಾರಣ, ಬೆಳೆದ ರೇಷ್ಮೆಗೂಡನ್ನು ಒಟ್ಟು ಸೇರಿಸಿ, ಹಾಸನ, ರಾಮನಗರ ಹಾಗೂ ಕೊಳ್ಳೇಗಾಲ ಮಾರುಕಟ್ಟೆಗಳಿಗೆ ಕಳುಹಿಸಲಾಗುತ್ತಿದೆ. ಜಿಲ್ಲೆಯಲ್ಲಿ ಹಿಪ್ಪುನೇರಳೆ ಕ್ಷೇತ್ರ, ಗೂಡಿನ ಉತ್ಪಾದನೆ ಮುಂತಾದ ಅಂಶಗಳನ್ನು ಕೋಷ್ಟಕ ೮.೨೦ರಲ್ಲೂ ರೇಷ್ಮೆ ಕೃಷಿಯನ್ನು ಅವಲಂಬಿಸಿರುವ ಕುಟುಂಬಗಳ ವಿವರವನ್ನು ಕೋಷ್ಟಕ ೮.೨೧ರಲ್ಲೂ ನೀಡಲಾಗಿದೆ.

## ಅರಣ್ಯ ಸಂಪತ್ತು

ಕಾಡುಗಳು ನಾಡಿನ ಕಣ್ಮಣಿಗಳು; ಕಾಡುಗಳಿಲ್ಲದ ನಾಡು ನಾಡಲ್ಲ ಎಂದು ಹೇಳುವುದುಂಟು. ಈ ಮಾತುಗಳು ಅರಣ್ಯ ಸಂಪತ್ತಿನ ಪ್ರಾಮುಖ್ಯತೆಯನ್ನು ಸ್ಪಷ್ಟಪಡಿಸುತ್ತವೆ. ಕೃಷಿ ಅಭಿವೃದ್ಧಿ, ಕೈಗಾರಿಕಾಭಿವೃದ್ಧಿ, ವಿದೇಶಿ ವಿನಿಮಯ ಗಳಿಕೆ, ದನಕರುಗಳಿಗೆ ಮೇವು, ಉದ್ಯೋಗ, ಉತ್ತಮ ಹವಾಮಾನ, ವನ್ಯಮೃಗ

**ಕೋಷ್ಟಕ ೮.೨೦ : ತಾಲೂಕುವಾರು ರೇಷ್ಮೆಗೂಡಿನ ತುಲನಾತ್ಮಕ ಉತ್ಪಾದನಾ ವಿವರ**

| ಕ್ರ ಸಂ. | ತಾಲೂಕುಗಳು | ೧೯೯೭-೯೮ | | | ೨೦೦೦-೦೧ | | | ೨೦೦೫-೦೬ | | |
|---|---|---|---|---|---|---|---|---|---|---|
| | | ಹಿಪ್ಪುನೇರಳೆ ಕ್ಷೇತ್ರ (ಹೆಕ್ಟೇರ್ ಗಳಲ್ಲಿ) | ಚಾಕಿ ಕಟ್ಟಿದ ಮೊಟ್ಟೆಗಳು (ಸಂಖ್ಯೆ ಗಳಲ್ಲಿ) | ಗೂಡಿನ ಉತ್ಪಾದನೆ (ಮೆ.ಟನ್ನು ಗಳಲ್ಲಿ) | ಹಿಪ್ಪುನೇರಳೆ ಕ್ಷೇತ್ರ (ಹೆಕ್ಟೇರ್ ಗಳಲ್ಲಿ) | ಚಾಕಿ ಕಟ್ಟಿದ ಮೊಟ್ಟೆಗಳು (ಸಂಖ್ಯೆ ಗಳಲ್ಲಿ) | ಗೂಡಿನ ಉತ್ಪಾದನೆ (ಮೆ.ಟನ್ನು ಗಳಲ್ಲಿ) | ಹಿಪ್ಪುನೇರಳೆ ಕ್ಷೇತ್ರ (ಹೆಕ್ಟೇರ್ ಗಳಲ್ಲಿ) | ಚಾಕಿ ಕಟ್ಟಿದ ಮೊಟ್ಟೆಗಳು (ಸಂಖ್ಯೆ ಗಳಲ್ಲಿ) | ಗೂಡಿನ ಉತ್ಪಾದನೆ (ಮೆ.ಟನ್ನು ಗಳಲ್ಲಿ) |
| ೧ | ಉಡುಪಿ | ೧೭.೧೦ | ೭,೫೮೫ | ೩.೪೪೦ | ೨೧.೦೦ | ೬,೭೭೫ | ೨.೭೯೦ | ೧೨.೮೬ | ೧೪೨೫ | ೦.೩೩೪ |
| ೨ | ಕುಂದಾಪುರ | ೨೪.೫೦ | ೧೬,೩೬೦ | ೭.೦೭೨ | ೪೬.೨೦ | ೯,೧೫೦ | ೪.೦೨೬ | ೯.೮೦ | ೭೫೦ | ೦.೨೪೭ |
| ೩ | ಕಾರ್ಕಳ | ೬೦.೧೮ | ೨೦,೨೧೮ | ೮.೩೫೬ | ೪೩.೦೦ | ೧೩,೪೦೦ | ೫.೯೧೩ | ೨೨.೭೪ | ೨೯೫೭ | ೧.೫೨೩ |
| | ಒಟ್ಟು | ೧೦೧.೭೮ | ೪೪,೧೬೩ | ೧೮.೮೬೮ | ೧೧೦.೨೦ | ೨೯,೩೨೫ | ೧೨.೭೨೯ | ೪೫.೪೦ | ೫,೧೩೨ | ೨.೧೦೪ |

*ಆಧಾರ: ರೇಷ್ಮೆ ಇಲಾಖೆ, ಉಡುಪಿ*

**ಕೋಷ್ಟಕ : ೮.೨೧ ಜಿಲ್ಲೆಯಲ್ಲಿ ರೇಷ್ಮೆ ಕೃಷಿಯಲ್ಲಿ ತೊಡಗಿರುವ ಕುಟುಂಬಗಳ ತಾಲೂಕುವಾರು ವಿವರ**

| ಕ್ರ ಸಂ. | ತಾಲೂಕು ಗಳು | ರೇಷ್ಮೆ ಉದ್ಯಮ ಅವಲಂಬಿತ ಕುಟುಂಬಗಳು | | | | | | | | | | | |
|---|---|---|---|---|---|---|---|---|---|---|---|---|---|
| | | ಹಿಪ್ಪುನೇರಳೆ ಕೃಷಿಯಲ್ಲಿ ತೊಡಗಿರುವ ಗ್ರಾಮಗಳ ಸಂಖ್ಯೆ | | ಪರಿಶಿಷ್ಟ ಜಾತಿ | | ಪರಿಶಿಷ್ಟ ಪಂಗಡ | | ಅಲ್ಪ ಸಂಖ್ಯಾತರು | | ಇತರರು | | ಒಟ್ಟು | |
| | | ೧೯೯೭-೯೮ | ೨೦೦೫-೦೬ | ೧೯೯೭-೯೮ | ೨೦೦೫-೦೬ | ೧೯೯೭-೯೮ | ೨೦೦೫-೦೬ | ೧೯೯೭-೯೮ | ೨೦೦೫-೦೬ | ೧೯೯೭-೯೮ | ೨೦೦೫-೦೬ | ೧೯೯೭-೯೮ | ೨೦೦೫-೦೬ |
| ೧ | ಉಡುಪಿ | ೧೪ | ೧೩ | ೧೨ | ೦೪ | ೨೬ | ೧೧ | ೦೩ | ೦೧ | ೩೨ | ೧೮ | ೭೩ | ೩೪ |
| ೨ | ಕುಂದಾಪುರ | ೩೧ | ೮ | ೨೪ | ೦೪ | ೫೧ | ೨೬ | ೦೪ | – | ೧೦೩ | ೧೦ | ೧೮೨ | ೪೦ |
| ೩ | ಕಾರ್ಕಳ | ೨೮ | ೨೨ | ೦೪ | ೦೭ | ೦೬ | ೧೪ | ೦೯ | ೦೨ | ೧೩೦ | ೫೬ | ೧೪೯ | ೭೯ |
| | ಒಟ್ಟು | ೭೩ | ೪೩ | ೪೦ | ೧೫ | ೮೩ | ೫೧ | ೧೬ | ೦೩ | ೨೬೫ | ೮೪ | ೪೦೪ | ೧೫೩ |

***ಆಧಾರ: ರೇಷ್ಮೆ ಇಲಾಖೆ, ಉಡುಪಿ***

ಜಿಲ್ಲೆಯಲ್ಲಿ ೧೯೯೭-೯೮ ರಿಂದ ೨೦೦೫-೦೬ರಲ್ಲಿ ಫಲಾನುಭವಿಗಳಿಗೆ ವಿತರಿಸಲಾದ ರೋಗರಹಿತ ರೇಷ್ಮೆ ಮರಿಗಳ ಸಂಖ್ಯೆ ಹಾಗೂ ಪಡೆಯಲಾದ ರೇಷ್ಮೆಗೂಡಿನ ಇಳುವರಿಯ ಪ್ರಮಾಣವನ್ನು ಕೋಷ್ಟಕ ೮.೨೨ರಲ್ಲಿ ನೀಡಲಾಗಿದೆ.

**ಕೋಷ್ಟಕ ೮.೨೨ : ಜಿಲ್ಲೆಯಲ್ಲಿ ಫಲಾನುಭವಿಗಳಿಗೆ ವಿತರಿಸಲಾದ ರೋಗರಹಿತ ರೇಷ್ಮೆ ಮರಿಗಳು ಹಾಗೂ ಪಡೆಯಲಾದ ರೇಷ್ಮೆ ಗೂಡಿನ ಇಳುವರಿ ಪ್ರಮಾಣ**

| ವಿವರಗಳು | | ೧೯೯೭-೯೮ | | | ೨೦೦೫-೦೬ | | |
|---|---|---|---|---|---|---|---|
| | | ಉಡುಪಿ | ಕುಂದಾಪುರ | ಕಾರ್ಕಳ | ಉಡುಪಿ | ಕುಂದಾಪುರ | ಕಾರ್ಕಳ |
| ಮೊಟ್ಟೆಗಳ ಚೌಕಿ (ಸಂಖ್ಯೆಗಳಲ್ಲಿ) | ಸಿ.ಬಿ. | ೫,೪೨೫ | ೧೨,೬೫೦ | ೧೫,೧೭೦ | ೫೦೦ | ೬೦೦ | ೫೩೦ |
| | ಬಿ.ವಿ. | ೧,೩೫೦ | ೩,೭೧೦ | ೫,೦೪೮ | ೯೨೫ | ೧೫೦ | ೨,೪೨೭ |
| | ಒಟ್ಟು | ೬,೭೭೫ | ೧೬,೩೬೦ | ೨೦,೨೧೮ | ೧,೪೨೫ | ೭೫೦ | ೨,೯೫೭ |
| ಗೂಡಿನ ಉತ್ಪಾದನೆ ಎಂ.ಟಿ.ಗಳಲ್ಲಿ | ಸಿ.ಬಿ. | ೨.೧೨೮ | ೫.೪೪೦ | ೬.೫೨೩ | ೦.೧೩೩ | ೦.೧೬೭ | ೦.೩೭೭ |
| | ಬಿ.ವಿ. | ೦.೬೬೩ | ೧.೬೩೨ | ೧.೮೩೩ | ೦.೨೦೧ | ೦.೦೮೦ | ೧.೧೪೬ |
| | ಒಟ್ಟು | ೨.೭೯೧ | ೭.೦೭೨ | ೮.೩೫೬ | ೦.೩೩೪ | ೦.೨೪೭ | ೧.೫೨೩ |
| ಸರಾಸರಿ ಇಳುವರಿ (ಕೆ.ಜಿ.ಗಳಲ್ಲಿ) | ಒಟ್ಟು | ೪೧.೬೦ | ೪೩.೦೦ | ೪೧.೨೦ | ೪೦.೬೦ | ೩೩.೦೦ | ೪೫.೭೮ |

*ಆಧಾರ : ರೇಷ್ಮೆ ಇಲಾಖೆ, ಉಡುಪಿ.*

ಸಂರಕ್ಷಣೆ, ಸರ್ಕಾರಕ್ಕೆ ಆದಾಯ, ಉರುವಲು ಪೂರೈಕೆ, ಕಾಲಕ್ಕೆ ಸರಿಯಾದ ಮಳೆ, ಪ್ರವಾಹ ನಿಯಂತ್ರಣ, ದೇಶಸಂರಕ್ಷಣೆ, ಭೂಫಲವತ್ತತೆಯ ವರ್ಧನೆ ಮುಂತಾದವುಗಳಲ್ಲಿ ಪ್ರಮುಖ ಪಾತ್ರವಹಿಸುತ್ತಿವೆ.

ಜಿಲ್ಲೆಯಲ್ಲಿ ಒಟ್ಟು ಭೌಗೋಳಿಕ ವಿಸ್ತೀರ್ಣದಲ್ಲಿ ಶೇ. ೨೭.೯೩ರಷ್ಟು ಅರಣ್ಯ ಪ್ರದೇಶ ಹೊಂದಿ ರಾಜ್ಯದಲ್ಲಿ ಐದನೆಯ ಸ್ಥಾನ ಪಡೆದುಕೊಂಡಿದೆ. ಬೀಟೆ, ನಂದಿ, ಸಾಗುವನಿ, ಕರಿಮರ, ಸಿರಿಹೊನ್ನೆ, ಹೆಬ್ಬಲಸು, ಹಲಸು, ತಿರುವೆ, ಕಲ್ಬಾಗೆ, ನಾಗಸಂಪಿಗೆ, ಬೇರಿಗ, ಮರುವ, ಕಿರಾಲ್‌ಬೋಗಿ, ಬಣ್ಪು, ಅಣವು ಉತ್ತಮ ಮೌಲ್ಯವುಳ್ಳ (ಬೆಲೆ) ಮರಗಳು ಲಭ್ಯವಿದ್ದು, ಅರಣ್ಯಾಧಾರಿತ ಕೈಗಾರಿಕೆಗಳ ಸ್ಥಾಪನೆಗೆ ಅವಕಾಶವಿದೆ. ಅಲ್ಲದೆ ವಿದೇಶಗಳಿಗೆ ಮರಗಳನ್ನು ರಫ್ತು ಮಾಡಿ ವಿದೇಶಿ ವಿನಿಮಯ ಗಳಿಸಲು ನೆರವಾಗಿದೆ. ತನ್ಮೂಲಕ ಜಿಲ್ಲೆಯ ಆರ್ಥಿಕಾಭಿವೃದ್ಧಿಗೆ ಸಹಕಾರಿಯಾಗಿದೆ.

## ಕೈಗಾರಿಕೆ

ಆರ್ಥಿಕತೆಯ ಎಲ್ಲಾ ವಲಯಗಳನ್ನು ಮೂರು ಭಾಗಗಳಾಗಿ ವರ್ಗೀಕರಿಸಿದಾಗ ಕೈಗಾರಿಕೆಯು 'ದ್ವಿತೀಯ' ವಲಯ ಎನ್ನಿಸಿಕೊಳ್ಳುತ್ತದೆ. ಕೈಗಾರಿಕೆಗಳು ಒಂದು ಪ್ರದೇಶದ ಮೂಳೆಗಳಿದ್ದಂತೆ, ಮಾನವನ ದೇಹಕ್ಕೆ ಪೂರ್ಣ ಚೈತನ್ಯವನ್ನು ಒದಗಿಸಲು ಮೂಳೆಗಳು ಹೇಗೆ ಅವಶ್ಯಕವೋ ಹಾಗೆಯೇ ಆರ್ಥಿಕತೆಗೆ ಚೇತನ ನೀಡಿ ದೀರ್ಘಕಾಲೀನ ಅಭಿವೃದ್ಧಿ ಸಾಧನೆಗೆ ನೆರವಾಗಲು ಕೈಗಾರಿಕೆಗಳು ಅತ್ಯಂತ ಅವಶ್ಯಕ. ಕೈಗಾರಿಕೆಗಳ ಅಭಿವೃದ್ಧಿಗೆ ಬೇಕಾದ ಖನಿಜ ಸಂಪನ್ಮೂಲಗಳು, ವಿದ್ಯುಚ್ಛಕ್ತಿ, ಸಾರಿಗೆ-ಸಂಪರ್ಕ, ನುರಿತ ಕಾರ್ಮಿಕರ ಸಂಖ್ಯೆ ಮುಂತಾದ ಅಂಶಗಳು ಜಿಲ್ಲೆಯಲ್ಲಿ ಲಭ್ಯವಿದ್ದು, ಕೈಗಾರಿಕಾ ಬೆಳವಣಿಗೆಗೆ ಪೂರಕವಾಗಿವೆ.

ಮಣಿಪಾಲ್ ಸೆಕ್ಯೂರಿಟಿ ಪ್ರಿಂಟರ್ಸ್, ಮಣಿಪಾಲ; ಕೆನರಾ ಸೆಕ್ಯೂರಿಟಿ ಪ್ರೆಸ್, ಮಣಿಪಾಲ್; ಮಣಿಪಾಲ ಪವರ್‌ಪ್ರೆಸ್, ಮಣಿಪಾಲ್; ಮಣಿಪಾಲ್ ಪ್ರಿಂಟರ್ಸ್ ಅಂಡ್ ಪಬ್ಲೀಷರ್ಸ್ (ಲಿ) ಮಣಿಪಾಲ್; ಇಂಡಿಯನ್ ಫ್ಲೈವುಡ್ ಮ್ಯಾನ್ಯುಫ್ಯಾಕ್ಚರಿಂಗ್ ಕಂಪನಿ, ಹಂಗಾರಕಟ್ಟೆ, ಉಡುಪಿ; ಮಣಿಪಾಲ್ ಪ್ರಕಾಶನ್ ಪ್ರೈ. (ಲಿ), ಮಣಿಪಾಲ್; ದಕ್ಷಿಣ ಕನ್ನಡ ಸಹಕಾರಿ ಸಕ್ಕರೆ ಕಾರ್ಖಾನೆ ಬ್ರಹ್ಮಾವರ (ಪ್ರಸ್ತುತ ಮುಚ್ಚಲ್ಪಟ್ಟಿದೆ), ಉಡುಪಿ ತಾ॥; ಬಾಳಿಗ ಎಕ್ಸ್‌ಪೋರ್ಟ್ಸ್ ಪ್ರೈ. (ಲಿ), ಉಡುಪಿ; ಲೂಸಿ ಅಂಡ್ ಫಿಷರ್ಸ್ ಪ್ರೈ. (ಲಿ), ಮಲ್ಪೆ, ಉಡುಪಿ; ಅಮಿತ ಜೂಲಿಯನ್ ಮರೈನ್ ಪ್ರೈ. ಲಿಮಿಟೆಡ್, ಹಿರಿಯಡ್ಕ, ಉಡುಪಿ ತಾ॥; ಕೆಲ್‌ಟೆಕ್ ಎಂಜಿನ್ಸ್ ಪ್ರೈ. (ಲಿ), ವರಂಗ, ಕಾರ್ಕಳ ತಾ॥; ಬೆಸ್ಟ್ ಸೆಲ್ಲರ್ಸ್ ಮಣಿಪಾಲ್; ಲ್ಯಾಮಿನಾ ಫೌಂಡರೀಸ್ ಹಾಗೂ ಶುಭೋಷಿಕಾ ಐಲ್ ಪ್ರೈ. ಮೈಯೂರ್, ಕಾರ್ಕಳ ತಾ॥ ಮುಂತಾದ ಮಧ್ಯಮ ಪ್ರಮಾಣದ ಕೈಗಾರಿಕೆಗಳು, ಮಲ್ಪೆ ಬಂದರು, ಮೀನುಗಾರಿಕೆ ಹಾಗೂ ಅದಕ್ಕೆ ಸಂಬಂಧಿಸಿದ ಉದ್ಯಮಗಳು, ಸಾಫ್ಟ್‌ವೇರ್ ಕಂಪನಿಗಳು (ಐ.ಟಿ) ಜಿಲ್ಲೆಯ ಸಂಪೂರ್ಣ ಬೆಳವಣಿಗೆಗೆ ಸಹಕಾರಿಯಾಗಿವೆ. ಜಿಲ್ಲೆಯಲ್ಲಿ ಮಾರ್ಚ್ ೨೦೦೬ರ ಅಂತ್ಯಕ್ಕೆ ೧೪ ಮಧ್ಯಮ ಪ್ರಮಾಣದ ಕೈಗಾರಿಕೆಗಳಿದ್ದು, ಅವುಗಳಲ್ಲಿ ರೂ. ೫,೬೦೮.೭೧ ಲಕ್ಷ ಬಂಡವಾಳ ತೊಡಗಿಸಲಾಗಿದೆ. ಇವು ೨,೯೬೦ ಮಂದಿಗೆ ಉದ್ಯೋಗ ಒದಗಿಸಿದ್ದವು. ಹಾಗೆಯೇ ಜಿಲ್ಲೆಯಲ್ಲಿ ೭,೧೮೩ ಸಣ್ಣ ಮತ್ತು ಅತೀ ಸಣ್ಣ ಕೈಗಾರಿಕಾ ಘಟಕಗಳಿದ್ದು, ಅವುಗಳಲ್ಲಿ ರೂ. ೩೧,೧೮೯.೨೭ ಲಕ್ಷ ಬಂಡವಾಳ ತೊಡಗಿಸಲಾಗಿದೆ. ಇವು ೪೪,೦೭೬ ಮಂದಿಗೆ ಉದ್ಯೋಗ ಒದಗಿಸಿದ್ದವು.

## ಮತ್ಸ್ಯ ಸಂಪತ್ತು

ಉಡುಪಿ ಜಿಲ್ಲೆಯು ೮೦ ಕಿ.ಮೀ. ಉದ್ದದ ಕರಾವಳಿ ತೀರವನ್ನು ಹೊಂದಿದ್ದು, ಹೇರಳ ಮತ್ಸ್ಯ ಸಂಪತ್ತಿನಿಂದ ಕೂಡಿದೆ. 'ನೀಲಿ ಕ್ರಾಂತಿ' ಎಂದೇ ಕರೆಯಲ್ಪಡುವ ಮೀನುಗಾರಿಕೆ ಪ್ರಮುಖ ಆಹಾರದ ಮೂಲಗಳಲ್ಲೊಂದಾಗಿದೆ. ಮೀನು ಅತ್ಯಂತ ಪೌಷ್ಠಿಕ ಆಹಾರವಾಗಿರುವುದರಿಂದ ಹಾಗೂ ಸುಲಭವಾಗಿ ಲಭ್ಯವಿರುವುದರಿಂದ ಕರಾವಳಿಯಲ್ಲಿ ಇದನ್ನು ದಿನನಿತ್ಯದ ಆಹಾರವಾಗಿ ಸೇವಿಸುತ್ತಾರೆ. ಅಲ್ಲದೆ ಮೀನಿನಲ್ಲಿ 'ಎ' ಮತ್ತು 'ಬಿ' ಅನ್ನಾಂಗವಿರುವುದು.

ವಿದೇಶಿ ವಿನಿಮಯವನ್ನು ತರುವ, ರಫ್ತು ಮಾಡಲು ಯೋಗ್ಯವಾದ ಸಿಗಡಿ, ಬೊಂಡಾಸ್, ಅಂಜಾಲ್, ಪಾಂಫ್ರಿಟ್, ರಿಬ್ಬನ್‌ಫಿಶ್, ಪಿಂಕ್ ಪರ್ಚ್ ಮುಂತಾದ ಮೀನುಗಳು ಸೇರಿವೆ. ಇದರಿಂದಾಗಿ ಇದು ಜಿಲ್ಲೆಯ ಜನರ ಆರ್ಥಿಕ ಸ್ಥಿತಿಯನ್ನು ಬಲಪಡಿಸುವುದಲ್ಲದೆ ಜೀವನ ಮಟ್ಟ ಉತ್ತಮಗೊಳ್ಳುತ್ತದೆ.

ಜಿಲ್ಲೆಯಲ್ಲಿ ಭೂತಾಯಿ ಮೀನು ಹೇರಳವಾಗಿ ದೊರೆಯುವುದರಿಂದ ಹಾಗೂ ಮೀನೆಣ್ಣೆ ತಯಾರಿಸುವ ಉದ್ಯಮಗಳನ್ನು ಸ್ಥಾಪಿಸಬಹುದು. ಅಲ್ಲದೆ ಸುರುಮಿ, ಮೀನಿನ ಎಣ್ಣೆ, ಮೀನಿನ ಉಪ್ಪಿನಕಾಯಿ, ಮೀನಿನ ಚಕ್ಕುಲಿ, ಮೀನಿನ ಸಂಡಿಗೆ, ಮೀನಿನ ಗೊಂದು, ಮೀನಿನ ಕಟ್ಲೇಟ್ ಮುಂತಾದವುಗಳನ್ನು ತಯಾರಿಸುವ ಉದ್ಯಮಗಳನ್ನು ಸ್ಥಾಪಿಸಲು ಅವಕಾಶವಿದ್ದು ತನ್ಮೂಲಕ ಜಿಲ್ಲೆಯ ಆರ್ಥಿಕ ಬೆಳವಣಿಗೆಗೆ ಸಹಕಾರಿಯಾಗುತ್ತದೆ.

## ಮಲ್ಪೆ ವಾಣಿಜ್ಯ ಬಂದರು

ಮಲ್ಪೆ ಬಂದರು ಉಡುಪಿ ಜಿಲ್ಲಾ ಕೇಂದ್ರ ಸ್ಥಾನದಿಂದ ಐದು ಕಿ.ಮೀ. ಪಶ್ಚಿಮದಲ್ಲಿದ್ದು, ರಾಷ್ಟ್ರೀಯ ಹೆದ್ದಾರಿಯಿಂದ ಕೇವಲ ನಾಲ್ಕು ಕಿ.ಮೀ ಹಾಗೂ ರೈಲ್ವೆ ಮಾರ್ಗದಿಂದ ಏಳು ಕಿ.ಮೀ ಪಶ್ಚಿಮಕ್ಕಿದೆ. ಇದು ರಾಜ್ಯ ಕರಾವಳಿಯ ಪ್ರಮುಖ ಚಿಕ್ಕ ವಾಣಿಜ್ಯ ಬಂದರಾಗಿದ್ದು, ಉದ್ಯಾವರ ನದಿಯು ಅರಬ್ಬೀಸಮುದ್ರ ಸೇರುವಲ್ಲಿ ಇರುವ ನೈಸರ್ಗಿಕ ಬಂದರು ಆಗಿರುತ್ತದೆ. ಸ್ವಾತಂತ್ರ್ಯ ಪೂರ್ವದಿಂದಲೂ ಮಲ್ಪೆ ಬಂದರಿನಿಂದ ದೇಶವಿದೇಶಗಳಿಗೆ ಹೆಂಚು, ಇಟ್ಟಿಗೆ, ಮ್ಯಾಂಗನೀಸ್ ಅದಿರು, ಕಬ್ಬಿಣದ ಅದಿರು, ಮೀನು ಮತ್ತೀತರ ಸರಕುಗಳನ್ನು ರಫ್ತು ಮಾಡಲಾಗುತ್ತಿತ್ತು ಹಾಗೂ ಉಪ್ಪು ಜೀನಸು ವಸ್ತುಗಳ ಆಮದು ಸಹ ಆಗುತ್ತಿತ್ತು. ವರ್ಷಕ್ಕೆ ೫೦೦ಕ್ಕೂ ಮೇಲ್ಪಟ್ಟು ಹಾಯಿ ಹಡಗುಗಳು ಈ ಬಂದರಿನಲ್ಲಿ ಆಮದು-ರಫ್ತು ಚಟುವಟಿಕೆಗಳಲ್ಲಿ ನಿರತವಾಗಿದ್ದವು. ಅಲ್ಲದೇ, ಸಮುದ್ರ ಮಧ್ಯೆ ಆಂಕರೇಜ್ ಹಾಗೂ ಹಡಗುಗಳ ಮೂಲಕ ಸರಕುಗಳನ್ನು ವಿದೇಶಗಳಿಗೆ ರಫ್ತು ಮಾಡಲಾಗುತ್ತಿತ್ತು. 'ನವಮಂಗಳೂರು ಬೃಹತ್ ಬಂದರು' ನಿರ್ಮಾಣಗೊಳ್ಳುವ ಮೊದಲು ಮಲ್ಪೆಯನ್ನು ಬೃಹತ್ ಬಂದರು ಆಗಿ ನಿರ್ಮಿಸುವ ಯೋಜನೆ ಇತ್ತು. ಇತ್ತೀಚಿನ ವರ್ಷಗಳಲ್ಲಿ

**ಕೋಷ್ಟಕ ೮.೨೩ : ಆಮದು-ರಫ್ತು ವಿವರ**

| ವರ್ಷಗಳು | ಆಗಮಿಸಿ ನಿರ್ಗಮಿಸಿದ ಯಾಂತ್ರಿಕ ಹಾಯಿ ಹಡಗುಗಳ ಸಂಖ್ಯೆ | ಒಟ್ಟು ಆಮದು (ಮೆಟ್ರಿಕ್ ಟನ್ನುಗಳಲ್ಲಿ) | ಒಟ್ಟು ರಫ್ತು (ಮೆಟ್ರಿಕ್‌ಟನ್ನುಗಳಲ್ಲಿ) | ಒಟ್ಟು ಮೌಲ್ಯ (ರೂ.ಗಳಲ್ಲಿ) | ನಿವ್ವಳ ಆದಾಯ (ರೂ.ಗಳಲ್ಲಿ) |
|---|---|---|---|---|---|
| ೧೯೯೮–೧೯೯೯ | ೮೬ | ೧೨೮೦.೬೦೦ | ೧೮,೪೭೫.೦೦೦ | ೩೧,೬೪,೨೨೧.೦೦ | ೪,೨೪,೦೪೫.೦೦ |
| ೧೯೯೯–೨೦೦೦ | ೮೩ | ೧೩೩೭.೦೦೦ | ೧೭,೧೦೫.೦೦೦ | ೪೩,೦೬,೯೨೫.೦೦ | ೫,೭೮,೦೧೧.೦೦ |
| ೨೦೦೦–೨೦೦೧ | ೫೩ | ೫೭೦.೦೦೦ | ೧೦,೯೯೫.೩೦೦ | ೧೫,೭೫,೫೦೦.೦೦ | ೪,೮೧,೨೯೭.೦೦ |
| ೨೦೦೧–೨೦೦೨ | ೩೪ | ೨೦೫೯.೬೪೦ | ೬,೪೫೦.೦೦೦ | ೧,೪೦,೧೪,೮೫೩.೦೦ | ೪,೫೮,೭೪೯.೦೦ |
| ೨೦೦೨–೨೦೦೩ | ೫೦ | ೧೩೫೮.೨೫೦ | ೯,೧೦೦.೦೦೦ | ೧,೫೬,೮೮,೫೪೦.೦೦ | ೫,೭೩,೧೩೪.೦೦ |
| ೨೦೦೩–೨೦೦೪ | ೫೨ | ೧೨೨೨.೬೦೦ | ೯,೬೫೦.೦೦೦ | ೩೦,೫೦,೧೦೦.೦೦ | ೫,೧೧,೫೨೦.೦೦ |
| ೨೦೦೪–೨೦೦೫ | ೫೭ | ೧೬೯೪.೧೫೨ | ೧೧,೧೮೦.೦೦೦ | ೬೮,೬೬,೦೨೦.೦೦ | ೫,೯೯,೬೯೯.೦೦ |
| ೨೦೦೫–೨೦೦೬ | ೭೩ | ೯೩೧.೧೫೨ | ೧೫,೧೦೦.೦೦೦ | ೧,೦೬,೬೮,೨೫೨.೦೦ | ೫,೪೧,೭೦೪.೦೦ |

ಮಲ್ಪೆಯು ಒಂದು ಬೃಹತ್ ಮೀನುಗಾರಿಕಾ ಬಂದರು ಆಗಿದ್ದು, ವಾಣಿಜ್ಯ ಚಟುವಟಿಕೆಗಳನ್ನು ಈ ಬಂದರಿನ ಮೂಲಕ ಮಳೆಗಾಲವನ್ನು ಹೊರತುಪಡಿಸಿ ನಿರಂತರವಾಗಿ ನಡೆಸಲಾಗುತ್ತಿದೆ. ೧೯೯೮–೯೯ ರಿಂದ ೨೦೦೫–೦೬ರವರೆಗೆ ಮಲ್ಪೆ ವಾಣಿಜ್ಯ ಬಂದರಿನಲ್ಲಿ ಮಾಡಲಾದ ಆಮದು-ರಫ್ತು ಹಾಗೂ ಆದಾಯದ ವಿವರವನ್ನು ಕೋಷ್ಟಕ ೮.೨೩ರಲ್ಲಿ ನೀಡಲಾಗಿದೆ.

ಜಿಲ್ಲೆಯಲ್ಲಿ ಒಟ್ಟು ಮೀನುಗಾರರ ೪೦ ಸಹಕಾರ ಸಂಘಗಳಿದ್ದು ಇವುಗಳಲ್ಲಿ ೧೧ ಮಹಿಳಾ ಮೀನುಗಾರರ ಸಹಕಾರಿ ಸಂಘಗಳು ಸೇರಿವೆ. ಈ ಸಂಘಗಳಲ್ಲಿ ೧೮೨೦ ಪರಿಶಿಷ್ಟ ಜಾತಿಯ ಸದಸ್ಯರಿದ್ದರು.

**ಕೋಷ್ಟಕ ೮.೨೪ : ೩೧-೩-೨೦೦೫ರ ಅಂತ್ಯಕ್ಕೆ ಜಿಲ್ಲೆಯಲ್ಲಿದ್ದ ಮೀನುಗಾರರ ಸಹಕಾರ ಸಂಘಗಳ ವಿವರ**

| ಸಹಕಾರಿ ಸಂಘಗಳ ಹೆಸರು ಮತ್ತು ವಿಳಾಸ | ನೋಂದಣಿ ಸಂಖ್ಯೆ ಮತ್ತು ದಿನಾಂಕ | ಸದಸ್ಯರು | | | ಒಟ್ಟು |
|---|---|---|---|---|---|
| | | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಇತರೆ | |
| ಹೆಜಮಾಡಿ ಮೀನುಗಾರರ ಸಹಕಾರಿ ಸಂಘ. ಪೋಸ್ಟ್: ಹೆಜಮಾಡಿ. | ಎ.ಆರ್. ನಂ.೩೪೯೯, ದಿ: ೪-೧-೧೯೧೯, | ೦೧ | – | ೫೧೫ | ೫೧೬ |
| ಹೆಜಮಾಡಿ ಮಹಿಳಾ ಮೀನುಗಾರ್ತಿಯರ ಸಹಕಾರಿ ಸಂಘ, ಪೋಸ್ಟ್: ಹೆಜಮಾಡಿ. | ನಂ ೨೪೬೨೯ ದಿ: ೨೨-೫-೧೯೯೮, | ೦೨ | – | ೧೮೨ | ೧೮೪ |
| ಹೆಜಮಾಡಿ ಕೋಡಿ ಮೀನುಗಾರರ ಸಹಕಾರಿ ಸಂಘ. ಪೋಸ್ಟ್: ಹೆಜಮಾಡಿ, ಮುಲ್ಕಿ. | ನಂ ೨೭೭೧ ದಿ: ೧೪-೬-೧೯೧೮ | ೦೨ | – | ೧೮೨ | ೧೮೪ |
| ಹೆರೂರು ಮೀನುಗಾರರ ಪ್ರಾಥಮಿಕ ಬಹು ಉದ್ದೇಶಿತ (ಮಲ್ಟಿಪರ್ಪಸ್) ಸಹಕಾರಿ ಸಂಘ. ಹೆರೂರು, ಬ್ರಹ್ಮಾವರ. | ನಂ. ೩೧೦೧೬ ದಿ: ೧೮-೬-೨೦೦೧ | – | – | ೩೧೮ | ೩೧೮ |
| ಕೈಪುಂಜಾಲ ಮೀನುಗಾರರ ಸಹಕಾರಿ ಸಂಘ. ಪೋಸ್ಟ್: ಕೈಪುಂಜಾಲ, ಕಾಪು-೫೭೪೧೦೬ | ನಂ. ೫೨೭೦ ದಿ: ೪-೧೧-೧೯೨೦ | – | – | ೪೪೦ | ೪೪೦ |
| ಕಾಪು ಮೀನುಗಾರರ ಸಹಕಾರಿ ಸಂಘ. ಪೋಸ್ಟ್: ಕಾಪು | ನಂ. ೭೨೮ ದಿ: ೨-೧೧-೧೯೫೨ | – | – | ೨೯೯ | ೨೯೯ |
| ಕೋಡಿ ಮೀನುಗಾರರ ಸಹಕಾರಿ ಸಂಘ. ಪೋಸ್ಟ್: ಕೋಡಿ-ಕಲ್ಯಾಣ-೫೭೬೨೨೬. | ನಂ. ೬೯೮ ದಿ: ೨೫-೦೨-೧೯೫೧ | ೧೮೦ | – | ೨,೦೪೫ | ೨,೨೨೫ |
| ಕೊಟಥಟ್ಟು ಮಹಿಳಾ ಮೀನುಗಾರ್ತಿಯರ ಸೇವಾ ಸಹಕಾರಿ ಸಂಘ, ಪೋಸ್ಟ್: ಕೊಟಥಟ್ಟು, ಪಡುಕೆರೆ-೫೭೬೨೨೧. | ನಂ: ೨೩೫೬೩/೯೭ ದಿ: ೮-೧-೧೯೯೭ | ೧೫ | – | ೭೫೭ | ೭೭೨ |
| ಕೋಟೆ ಪಂಚಾಕ್ಷರಿ ಮಹಿಳಾ ಮೀನುಗಾರ್ತಿಯರ ಬಹು ಉದ್ದೇಶಿತ (ಮಲ್ಟಿಪರ್ಪಸ್) ಸಹಕಾರಿ ಸಂಘ. ಕೋಟೆ, ಪೋಸ್ಟ್: ಕಾಟಪಾಡಿ | ನಂ: ೨೦೩೭೧ ದಿ: ೬-೧-೧೯೯೫ | – | – | ೨೮೩ | ೨೮೩ |
| ಮಲ್ಪೆ ಪ್ರಾಥಮಿಕ ಮಹಿಳಾ ಮೀನುಗಾರ್ತಿಯರ ಸಹಕಾರಿ ಸಂಘ. ಮಲ್ಪೆ-೫೭೬೧೧೮. | ನಂ:ಎ.ಆರ್.ಎಸ್./೪೮೦೮/ ೭೬-೭೭ ದಿ: ೩೧-೧-೧೯೭೭ | – | – | ೧,೦೦೦ | ೧,೦೦೦ |
| ಮಲ್ಪೆ ಪ್ರಾಥಮಿಕ ಮೀನುಗಾರರ ಸಹಕಾರಿ ಸಂಘ. ಪೋಸ್ಟ್: ಮಲ್ಪೆ-೫೭೩೧೧೮ | ನಂ: ೬೯೬/೫೦-೫೧ ದಿನಾಂಕ:೧೧-೨-೧೯೫೧ | ೧೦೫ | – | ೨,೭೫೨ | ೨,೮೫೭ |
| ಮಲ್ಪೆ ಯಾಂತ್ರಿಕ (Trawl) ದೋಣಿ ಮೀನುಗಾರರ ಪ್ರಾಥಮಿಕ ಸೇವಾ ಸಹಕಾರಿ ಸಂಘ. ಮಲ್ಪೆ ಮೀನು- -ಗಾರಿಕಾ ಬಂದರು, ಪೋಸ್ಟ್: ಮಲ್ಪೆ-೫೭೬೧೧೮. | ನಂ: ೧೬೮೦೫ ದಿ: ೧೬-೭-೧೯೯೭ | ೦೩ | – | ೫೪೫ | ೫೪೮ |
| ಮನ್ನೂರ್ ಮೀನುಗಾರರ ಸಹಕಾರಿ ಸಂಘ, ಪೋಸ್ಟ್: ಕೊಟತುಟ್ಟು, ಪಡುಕೆರೆ: ೫೭೬೨೨೧ | ನಂ: ೫೩೯ ದಿ: ೨೨-೦೩-೧೯೪೭ | ೧೦ | – | ೨೦೯೩ | ೨೧೦೩ |
| ಮನ್ನೂರ್‌ಕೋಟ ಮಹಿಳಾ ಮೀನುಗಾರ್ತಿಯರ ಪ್ರಾಥಮಿಕ ಸಹಕಾರಿ ಸಂಘ, ಪೋಸ್ಟ್: ಕೊಟಥಟ್ಟು-೫೭೬೨೨೧ | ನಂ: ೨೩೫೭೩/೯೭ ದಿ: ೧೮-೧೧-೧೯೯೭ | ೨೩ | – | ೪೩೬ | ೪೫೯ |
| ಮುಲೂರ್ ಮೀನುಗಾರರ ಸಹಕಾರಿ ಸಂಘ ಪೋಸ್ಟ್: ಉಚ್ಚಿಲ್. | ನಂ : ಎಲ್. ೭೦೧ ದಿ: ೬-೩-೧೯೫೧ | – | – | ೧೮೮ | ೧೮೮ |
| ಪಡುಬಿದ್ರೆ ಮೀನುಗಾರರ ಸಹಕಾರಿ ಸಂಘ. ಪೋಸ್ಟ್: ಪಡುಬಿದ್ರೆ. | ನಂ: ೭೦೩ ದಿ: ೬-೩-೧೯೫೧ | ೦೨ | – | ೬೬೭ | ೬೬೯ |

ಮುಂದುವರಿದಿದೆ....

| ಸಹಕಾರಿ ಸಂಘಗಳ ಹೆಸರು ಮತ್ತು ವಿಳಾಸ | ನೋಂದಣಿ ಸಂಖ್ಯೆ ಮತ್ತು ದಿನಾಂಕ | ಸದಸ್ಯರು | | | ಒಟ್ಟು |
|---|---|---|---|---|---|
| | | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಇತರೆ | |
| ಪಡುತೋಣ್ಸೆ ಮೀನುಗಾರರ ಸಹಕಾರಿ ಸಂಘ ಗುಜ್ಜರಬೆಟ್ಟು, ಪೋಸ್ಟ್: ಕೆಮ್ಮಣ್ಣು–೫೭೬೧೧೫. | ನಂ: ೬೯<br>ದಿ: ೨೫–೦೨–೧೯೫೧ | ೧೩೮ | – | ೧೪೯೯ | ೧೬೩೭ |
| ಪೊಲಿಪ್ಪು ಮೀನುಗಾರರ ಸಹಕಾರಿ ಸಂಘ. ಪೋಸ್ಟ್: ಪೊಲಿಪ್ಪು | ನಂ: ೬೯<br>ದಿ: ೧೩–೭–೧೯೫೦ | – | – | ೩೩೮ | ೩೩೮ |
| ಪೊಲಿಪ್ಪು ಮೀನುಗಾರರ ಸಹಕಾರಿ ಸಂಘ. ಪೋಸ್ಟ್: ಪೊಲಿಪ್ಪು | ನಂ: ೯೧೯೮<br>ದಿ: ೮–೧೧–೧೯೮೪ | – | – | ೩೩೩ | ೩೩೩ |
| ಪರ್ಸೆ–ಸೇನೆ ಮೀನುಗಾರರ ಪ್ರಾಥಮಿಕ ಸೇವಾ ಸಹಕಾರಿ ಸಂಘ ಕೋಟ, ಮುಖ್ಯ ಕಛೇರಿ–ಗಂಗೊಳ್ಳಿ, ಗಂಗೊಳ್ಳಿ ಮೀನುಗಾರಿಕಾ ಬಂದರು, ಪೋಸ್ಟ್: ಗಂಗೊಳ್ಳಿ, ಕುಂದಾಪುರ ತಾಲೂಕು. | ನಂ: ಡಿ.ಆರ್.ಪಿ/ಆರ್.ಎಸ್.ಆರ್/೭೧೬೭/೮೯–೯೦<br>ದಿ: ೧–೩–೧೯೯೦ | – | – | ೬೨೩ | ೬೨೩ |
| ಎಸ್. ಸಿ. ಮಹಿಳಾ ಮೀನುಗಾರರ ಪ್ರಾಥಮಿಕ ಬಹು ಉದ್ದೇಶಿತ (ಮಲ್ಟಿಪರ್ಪಸ್) ಸಹಕಾರಿ ಸಂಘ. ಪೋಸ್ಟ್: ತೊಟ್ಟಂ | ನಂ:ಎ.ಆರ್.ಸಿ/೮೪೦೧/೮೧–೮೨<br>ದಿ: ೩–೧೧–೧೯೮೧ | ೧,೦೫೬ | – | – | ೧,೦೫೬ |
| ಮೀನು ಮತ್ತು ಮೀನುಗಾರಿಕಾ ಉತ್ಪನ್ನಗಳ ತಯಾರಿಕಾ ಸಹಕಾರಿ ಸಂಘ. ಹದಿನಾಲ್ಕುಪಟ್ಟಣ, ಪಿತ್ರೋಡಿ, ಉದ್ಯಾವರ. | ನಂ: ೮೩೬<br>ದಿ: ೨೧–೧–೧೯೪೯ | ೦೭ | – | ೩೭೮ | ೩೮೫ |
| ತೆಂಕಾ ಯರ್ಮಾಲ್ ಮೀನುಗಾರರ ಸಹಕಾರಿ ಸಂಘ. ಪೋಸ್ಟ್ ಯರ್ಮಾಲ್ | ನಂ: ೭೦೪<br>ದಿ: ೬–೩–೧೯೫೧ | – | – | ೪೭೫ | ೪೭೫ |
| ತೆಂಕಾ ಯರಮಲ್ ಮಹಿಳಾ ಮೀನುಗಾರ್ತಿಯರ ಸಹಕಾರಿ ಸಂಘ, ಪೋಸ್ಟ್ ಯರ್ಮಾಲ್ | ನಂ: ೨೨೮೩೫<br>ದಿ: ೪–೪–೧೯೯೬ | – | – | ೧೮೫ | ೧೮೫ |
| ಉದ್ಯಾವರ ಮೀನುಗಾರರ ಸಹಕಾರಿ ಸಂಘ. ಪೋಸ್ಟ್: ಪಿತ್ರೋಡಿ. | ನಂ: ೨೭೬೮೦<br>ದಿ: ೧೪–೬–೧೯೮೦ | – | – | ೨,೪೭೮ | ೨,೪೭೮ |
| ಉಪ್ಪಿನಕೋಟೆ ಮೀನುಗಾರರ ಸಹಕಾರಿ ಸಂಘ. ಪೋಸ್ಟ್: ಉಪ್ಪಿನಕೋಟೆ–೫೭೬೨೧೩, ಬ್ರಹ್ಮಾವರ. | ನಂ: ೨೩೫೬೬೬/೯೭–೯೮<br>ದಿ: ೯–೬–೧೯೯೭ | – | – | ೪೩೭ | ೪೩೭ |
| ಯರ್ಮಾಲ್ ಬಡಾ ಮೀನುಗಾರರ ಸಹಕಾರಿ ಸಂಘ ಪೋಸ್ಟ್: ಯರ್ಮಾಲ್. | ನಂ: ೭೦೨<br>ದಿ: ೬–೩–೧೯೫೧ | ೦೧ | – | ೩೬೫ | ೩೬೬ |
| ಯರ್ಮಾಲ್ ಬಡಾ ಮಹಿಳಾ ಮೀನುಗಾರ್ತಿಯರ ಸಹಕಾರಿ ಸಂಘ. ಪೋಸ್ಟ್: ಯರ್ಮಾಲ್. | ನಂ: ೯೧೯೯/೮೪–೮೫<br>ದಿ: ೮–೧೧–೧೯೮೪ | – | – | ೩೪೫ | ೩೪೫ |
| ಬೇಜಡಿ ಮೀನುಗಾರರ ಸಹಕಾರಿ ಸಂಘ. ಪೋಸ್ಟ್: ಕೋಟೇಶ್ವರ, ಕುಂದಾಪುರ. | ನಂ: ೫೨೭೧<br>ದಿ: ೮–೧೧–೧೯೨೦ | ೮೩ | – | ೩೫೬೧ | ೩೬೪೪ |
| ಗಂಗೊಳ್ಳಿ ಪ್ರಾಥಮಿಕ ಮೀನುಗಾರರ ಸಹಕಾರಿ ಸಂಘ. ಪೋಸ್ಟ್: ಗಂಗೊಳ್ಳಿ, ಕುಂದಾಪುರ–೨೭೬೨೧೬. | ನಂ: ಎಲ್. ೪೦೪<br>ದಿ: ೨೮–೦೨–೧೯೪೯ | ೯೭ | – | ೭೩೨೩ | ೭೪೨೦ |
| ಹಡವಿನಕೋಣೆ ಮೀನುಗಾರರ ಸಹಕಾರಿ ಸಂಘ. ಪೋಸ್ಟ್: ಕೊಡೇರಿ. | ನಂ: ೬೯೭<br>ದಿ: ೨೫–೦೨–೧೯೫೧ | – | – | ೯೯೮ | ೯೯೮ |
| ಹಲಡಿ ಮೀನುಗಾರರ ಸಹಕಾರಿ ಸಂಘ. ಹಲಡಿ. | ನಂ: ಆರ್/೩೮/ಸಂಪನ್ಮೂಲ/೫೭೬/ಎಫ್‌ಸಿಎಸ್–೯೮–೯೯<br>ದಿ: ೨–೬–೧೯೯೯ | – | – | ೫೮೪ | ೫೮೪ |
| ಹೆಮ್ಮಾಡಿ ಮೀನುಗಾರರ ಸಹಕಾರಿ ಸಂಘ. ಹೆಮ್ಮಾಡಿ | ನಂ: ೨೫೮೮೧<br>ದಿ: ೯–೮–೧೯೯೯ | ೫೪ | – | ೧೮೧೯ | ೧೮೭೩ |
| ಕರ್ವಾಡಿ ಮೀನುಗಾರರ ಸಹಕಾರಿ ಸಂಘ. ಕಂದಲೂರ, ಕರ್ವಾಡಿ | ನಂ: ೨೫೮೭೯<br>ದಿ: ೨೦–೭–೧೯೯೯ | – | – | ೩೧೫ | ೩೧೫ |
| ಕಿರಿಮಂಜೇಶ್ವರ ಮೀನುಗಾರರ ಸಹಕಾರಿ ಸಂಘ. ಪೋಸ್ಟ್: ಕೊಡೇರಿ | ನಂ: ೧೩೬೪<br>ದಿ: ೧೯–೯–೧೯೫೮ | ೨೪ | – | ೧೧೦೬ | ೧೧೩೦ |
| ಮರವಂತೆ ಮೀನುಗಾರರ ಸಹಕಾರಿ ಸಂಘ. ಪೋಸ್ಟ್ ಮರವಂತೆ–೫೭೬೨೬೧ | ನಂ: ೪೫೩<br>ದಿ: ೧೭–೫–೧೯೪೨ | – | – | ೧೭೮೩ | ೧೭೮೩ |

ಮುಂದುವರಿದಿದೆ

| ಸಹಕಾರಿ ಸಂಘಗಳ ಹೆಸರು ಮತ್ತು ವಿಳಾಸ, | ನೋಂದಣಿ ಸಂಖ್ಯೆ ಮತ್ತು ದಿನಾಂಕ | ಸದಸ್ಯರು | | | ಒಟ್ಟು |
|---|---|---|---|---|---|
| | | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಇತರೆ | |
| ಮೀನುಗಾರ್ತಿ ಮಹಿಳೆಯರ ವಿವಿದ್ದೋದ್ದೇಶ ಸಹಕಾರಿ ಸಂಘ, ಮರವಂತೆ, ಶ್ರೀ ರಾಮಭಜನ ಮಂದಿರ ಹತ್ತಿರ, ಮರವಂತೆ. | ನಂ: ೨೫೫೭೯<br>ದಿ: ೪-೧-೨೦೦೧ | ೧೦ | ೦೭ | ೬೨೮ | ೬೪೫ |
| ಮೀನುಗಾರ್ತಿ ಮಹಿಳೆಯರ ವಿವಿದ್ದೋದ್ದೇಶ ಸಹಕಾರಿ ಸಂಘ, ಉಪ್ಪುಂದ, ಎಸ್.ಎನ್. ಕಾಂಪ್ಲೆಕ್ಸ್, ಉಪ್ಪುಂದ- ಮಡಿಕಲ್ ರಸ್ತೆ, ಉಪ್ಪುಂದ. | ನಂ: ೨೫೫೮೦<br>ದಿ: ೪-೧-೨೦೦೧ | ೦೪ | – | ೬೮೫ | ೬೮೯ |
| ನವುಂದಾ ಮೀನುಗಾರರ ಸಹಕಾರಿ ಸಂಘ. ಪೋಸ್ಟ್ ನವುಂದಾ | ನಂ: ೮೫೧<br>ದಿ: ೧೨-೧೨-೧೯೭೯ | – | – | ೭೨೭ | ೭೨೭ |
| ತರಪತಿ ಮೀನುಗಾರರ ಸಹಕಾರಿ ಸಂಘ. ಪೋಸ್ಟ್: ತರಪತಿ, ವಯಾ: ಉಪ್ಪುಂದ | ನಂ: ೫೫೦<br>ದಿ: ೨೭-೧೦-೧೯೪೭ | ೦೩ | – | ೨೧೮೩ | ೨೧೮೬ |

*ಆಧಾರ: ಮೀನುಗಾರಿಕಾ ಇಲಾಖೆ, ಉಡುಪಿ*

ಏಳು ಪರಿಶಿಷ್ಟ ಪಂಗಡಕ್ಕೂ, ೪೧,೯೨೦ ಇತರೆ ಸದಸ್ಯರೂ ಸೇರಿದಂತೆ ಒಟ್ಟು ೪೩,೭೪೭ ಮಂದಿ ಸದಸ್ಯರಿದ್ದರು. ಜಿಲ್ಲೆಯಲ್ಲಿದ್ದ ಮೀನುಗಾರರ ಸಹಕಾರಿ ಸಂಘಗಳನ್ನು ಕೋಷ್ಟಕ ೮.೨೪ರಲ್ಲಿ ನೀಡಲಾಗಿದೆ.

## ಪಶುಸಂಪತ್ತು

ಗ್ರಾಮೀಣ ಜನರ ಆರ್ಥಿಕ ಸ್ಥಾನಮಾನ ಹಾಗೂ ಜೀವನ ಮತ್ತು ಸುಧಾರಣೆಗೆ ಪಶುಸಂಪತ್ತು ಪೂರ್ವದಿಂದಲೂ ಮಹತ್ತರ ಪಾತ್ರವಹಿಸುತ್ತಿದೆ. ಜಿಲ್ಲೆಯಲ್ಲಿ ಪಶುಸಂಪತ್ತು ಶ್ರೀಮಂತವಾಗಿದ್ದು, ವ್ಯವಸಾಯ ಮಾಡಲು, ಬಾವಿಗಳಿಂದ ನೀರೆತ್ತಲು, ಬೆಳೆದ ದವಸ-ಧಾನ್ಯಗಳನ್ನು ಮಾರುಕಟ್ಟೆಗೆ ಸಾಗಿಸಲು ರೈತಾಪಿ ವರ್ಗಕ್ಕೆ ನೆರವಾಗಿದೆ. ಅದರಲ್ಲೂ ಹೈನುಗಾರಿಕೆ ಜನರ ಆರ್ಥಿಕ ಸ್ಥಿತಿಗತಿ ಸುಧಾರಿಸಲು ನೆರವಾಗಿರುವುದು ಉಲ್ಲೇಖಾರ್ಹವಾಗಿದೆ. ಜಿಲ್ಲೆಯಲ್ಲಿ ಹೈನುಗಾರಿಕೆಯ ಅಭಿವೃದ್ಧಿಯಿಂದ ಡೈರಿ ಉದ್ಯಮದ ಸ್ಥಾಪನೆಯಾಗಿ ಉದ್ಯೋಗ ಸೃಷ್ಟಿಸುವ ಜೊತೆಗೆ ಜನರ ಜೀವನ ಮಟ್ಟ ಸುಧಾರಿಸಲು ನೆರವಾಗಿದೆ. ೧೯೭೨ರ ಜಾನುವಾರು ಗಣತಿಯಂತೆ ೧,೩೩,೩೪೪ ದನಕರುಗಳಿದ್ದರೆ, ೨೮,೧೫೧ ಎಮ್ಮೆಗಳು, ೫೫ ಕುರಿಗಳು, ೪೬೮ ಮೇಕೆಗಳು, ೭೬೩ ಹಂದಿಗಳು, ೫೧,೨೯೮ ನಾಯಿಗಳನ್ನು ಹಾಗೂ ೫೫ ಇತರೆ ಜಾನುವಾರುಗಳಿದ್ದವು. ೪,೨೬,೫೯೦ ಕೋಳಿಗಳಿದ್ದವು. ೨೦೦೩ರ ಜಾನುವಾರು ಗಣತಿಯಂತೆ ಜಿಲ್ಲೆಯಲ್ಲಿ ಒಟ್ಟು ಆರು ಕೋಳಿ (ಲೇಯರ್ಸ್) ಫಾರಂಗಳಿದ್ದು, ೧,೬೮,೫೦೦ ಕೋಳಿಗಳಿದ್ದವು. ಒಟ್ಟು ೨೧೯ ಕೋಳಿ (ಬ್ರಾಯ್ಲರ್) ಫಾರಂಗಳಿದ್ದು, ೫,೧೬,೦೦೦ ಕೋಳಿಗಳಿದ್ದವು. ಜಿಲ್ಲೆಯಲ್ಲಿ ೧೯೯೭-೯೮ರಲ್ಲಿ ಆರು ಪಶುವೈದ್ಯ ಆಸ್ಪತ್ರೆಗಳು, ೮೨ ಪ್ರಾಥಮಿಕ ಪಶುವೈದ್ಯ ಕೇಂದ್ರಗಳು ಹಾಗೂ ಮೂರು ಸಂಚಾರಿ ಚಿಕಿತ್ಸಾಲಯಗಳಿದ್ದವು. ಈ ಸಾಲಿನಲ್ಲಿ

**ಕೋಷ್ಟಕ : ೮.೨೫ ಜಿಲ್ಲೆಯಲ್ಲಿ ೨೦೦೩ರಲ್ಲಿ ನಡೆದ ೧೭ನೇ ರಾಷ್ಟ್ರೀಯ ಜಾನುವಾರು ಗಣತಿಯಂತೆ ಜಾನುವಾರುಗಳ ವಿವರಗಳು**

| ತಾಲೂಕು | ದನಗಳು | | ಎಮ್ಮೆಗಳು | ಕುರಿಗಳು | ಆಡುಗಳು | ಹಂದಿಗಳು | ನಾಯಿಗಳು | ಇತರೆ | ಒಟ್ಟು | ಕುಕ್ಕುಟಗಳು |
|---|---|---|---|---|---|---|---|---|---|---|
| | ಸ್ಥಳೀಯ | ಮಿಶ್ರತಳಿ | | | | | | | | |
| ಉಡುಪಿ | ೭೧,೩೪೨ | ೪೮,೪೭೨ | ೧೪,೪೭೬ | – | ೧,೨೬೫ | ೩೭೫ | ೫೦,೭೭೨ | ೪೨ | ೧,೮೬,೭೪೪ | ೨,೫೫,೩೧೫ |
| ಕುಂದಾಪುರ | ೧,೦೯,೪೨೪ | ೨೬,೮೩೮ | ೨೨,೫೯೬ | ೪ | ೪೪೮ | ೩೯೫ | ೩೭,೪೫೫ | ೨೪೫ | ೧,೯೭,೪೦೫ | ೩,೮೧,೮೧೯ |
| ಕಾರ್ಕಳ | ೬೭,೦೬೧ | ೧೫,೪೬೦ | ೧೨,೮೯೭ | ೧ | ೨೮೦ | ೩೨೩ | ೨೯,೦೭೯ | ೪ | ೧,೨೫,೧೦೫ | ೧,೧೬,೭೫೩ |
| ಒಟ್ಟು | ೨,೪೭,೮೨೭ | ೯೦,೭೭೦ | ೪೯,೯೬೯ | ೫ | ೧,೯೯೩ | ೧,೦೯೩ | ೧,೧೭,೩೦೬ | ೨೯೧ | ೫,೦೯,೨೫೪ | ೭,೫೩,೮೮೭ |

*ಆಧಾರ: ಉಪನಿರ್ದೇಶಕರು, ಪಶುಪಾಲನಾ ಇಲಾಖೆ, ಉಡುಪಿ.*

೧,೬೨,೭೪೨ ಜಾನುವಾರುಗಳು ಚಿಕಿತ್ಸೆ ಪಡೆದಿದ್ದವು. ಮಾರ್ಚ್ ೨೦೦೫ರ ಅಂತ್ಯದಲ್ಲಿ ೧೦ ಪಶುವೈದ್ಯ ಆಸ್ಪತ್ರೆಗಳು, ೨೮ ಪಶುವೈದ್ಯ ಚಿಕಿತ್ಸಾಲಯಗಳು, ೪೬ ಪ್ರಾಥಮಿಕ ಪಶುವೈದ್ಯ ಕೇಂದ್ರಗಳು, ಮೂರು ಸಂಚಾರಿ ಗರ್ಭಾಧಾರಣಾ ಕೇಂದ್ರಗಳು ಹಾಗೂ ಐದು ಕೃತಕ ಗರ್ಭಧಾರಣ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದವು. ೧,೪೨,೦೮೯ ಜಾನುವಾರುಗಳು ಚಿಕಿತ್ಸೆ ಪಡೆದಿದ್ದವು. ಹೆಚ್ಚಿನ ವಿವರಗಳಿಗೆ ಕೋಷ್ಟಕ ೮.೨೫ ರಲ್ಲಿ ನೋಡಿ.

## ವಿದ್ಯುಚ್ಛಕ್ತಿ

ಒಂದು ಪ್ರದೇಶದ ಆರ್ಥಿಕ ಅಭಿವೃದ್ಧಿಯು ವಿಪುಲವಾದ ಶಕ್ತಿ ಸಂಪನ್ಮೂಲವನ್ನು ಅವಲಂಬಿಸಿರುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯ ಭಾಗವಾಗಿದ್ದ ಈ ಜಿಲ್ಲೆಗೆ ೧೯೫೫ರಲ್ಲಿ ಉಡುಪಿಯ ಡಿಸೇಲ್ ಪವರ್ ಹೌಸ್‌ನಿಂದ ವಿದ್ಯುತ್ ಪೂರೈಕೆಯಾಗುತ್ತಿತ್ತು. ಈ ಕೇಂದ್ರದಿಂದ ೩೩ ಕಿ.ವಿ. ಮಾರ್ಗದ ಮೂಲಕ ಉಡುಪಿ ಮತ್ತು ಕಾರ್ಕಳಗಳಿಗೆ ವಿದ್ಯುತ್ ಸರಬರಾಜಾಗುತ್ತಿದ್ದು, ಉಳಿದ ಹೆಚ್ಚುವರಿ ವಿದ್ಯುತ್ ಅನ್ನು ಕುಂದಾಪುರಕ್ಕೆ ಪೂರೈಸಲಾಗುತ್ತಿತ್ತು. ನಂತರ ೧೯೫೬ರಲ್ಲಿ ಜೋಗ್‌ನಿಂದ ವಿದ್ಯುತ್ ಪೂರೈಕೆ ಮಾಡಲಾಯಿತು. ಆಗ ಮೈಸೂರು ರಾಜ್ಯ ವಿದ್ಯುಚ್ಛಕ್ತಿ ಮಂಡಳಿಯು ಕಾರ್ಕಳ, ಉಡುಪಿ ಹಾಗೂ ಕುಂದಾಪುರ ಪಟ್ಟಣಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿತು. ೧೯೭೨ರಲ್ಲಿ ಹಿರಿಯಡ್ಕದಲ್ಲಿ ೧೧೦/೩೩/೧೨ ಕೆ.ವಿ. ಉಪಕೇಂದ್ರ ಇದ್ದು, ಇದರ ಸಾಮರ್ಥ್ಯ ೧೬.೫ ಎಂ.ವಿ.ಎ. ಆಗಿತ್ತು. ೩೩/೧೧ ಕೆ.ವಿ. ಉಪಕೇಂದ್ರ ಉಡುಪಿಯಲ್ಲಿದ್ದು, ೧೦ ಎಂ.ವಿ.ಎ. ಸಾಮರ್ಥ್ಯ ಹೊಂದಿತ್ತು. ೩೩/೧೧ ಕೆ.ವಿ. ಉಪಕೇಂದ್ರ ಕುಂದಾಪುರದಲ್ಲಿದ್ದು, ಐದು ಎಂ.ವಿ.ಎ. ಸಾಮರ್ಥ್ಯ ಹೊಂದಿತ್ತು. ೩೩/೧೧ ಕೆ.ವಿ. ಉಪಕೇಂದ್ರ ಕಾರ್ಕಳದಲ್ಲಿದ್ದು, ಐದು ಎಂ.ವಿ.ಎ. ಸಾಮರ್ಥ್ಯ ಹೊಂದಿತ್ತು.

ಜಲ ವಿದ್ಯುತ್ ಬಳಕೆ ಬಂದ ನಂತರ (೧೯೫೬ರಲ್ಲಿ) ಗ್ರಾಮೀಣ ವಿದ್ಯುದ್ದೀಕರಣ ಯೋಜನೆಯಡಿಯಲ್ಲಿ ಹಳ್ಳಿಗಳಿಗೆ ಹಾಗೂ ನೀರಾವರಿ ಪಂಪು ಸೆಟ್ಟುಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಯಿತು. ಜಿಲ್ಲೆಯಲ್ಲಿ ೧೯೭೨ರಲ್ಲಿ ಕುಂದಾಪುರ ತಾಲೂಕಿನಲ್ಲಿ ೧೦೧ ಗ್ರಾಮಗಳಿದ್ದು, ೭೧ ಹಳ್ಳಿಗಳು ವಿದ್ಯುತ್ ಹಾಗೂ ೨೯೩ ನೀರಾವರಿ ಪಂಪುಸೆಟ್ಟುಗಳು ವಿದ್ಯುತ್ ಸಂಪರ್ಕ ಹೊಂದಿದ್ದವು. ಕಾರ್ಕಳ ತಾಲೂಕಿನಲ್ಲಿ ೭೯ ಹಳ್ಳಿಗಳಿದ್ದು, ೫೬ ಹಳ್ಳಿಗಳು ಹಾಗೂ ೧,೩೯೭ ನೀರಾವರಿ ಪಂಪುಸೆಟ್ಟುಗಳು ಹಾಗೂ ಉಡುಪಿ ತಾಲೂಕಿನಲ್ಲಿ ೧೧೫ ಗ್ರಾಮಗಳಿದ್ದು, ೧೦೯ ಗ್ರಾಮಗಳು ಹಾಗೂ ೪,೬೬೫ ನೀರಾವರಿ ಪಂಪುಸೆಟ್ಟುಗಳು ವಿದ್ಯುತ್ ಸಂಪರ್ಕ ಪಡೆದಿದ್ದವು. ಉಡುಪಿ ವಿಭಾಗದಲ್ಲಿ ೧೯೯೫ರ ಮಾರ್ಚ್ ಅಂತ್ಯದಲ್ಲಿದ್ದಂತೆ, ಕುಂದಾಪುರದಲ್ಲಿ ೧೧೦/೩೩/೧೧ ಹಾಗೂ ೧೧೦/೧೧ ಕೆ.ವಿ.ಯ ಒಂದೊಂದು ಉಪಕೇಂದ್ರವಿದ್ದು, ಇವುಗಳ ಒಟ್ಟು ಸಾಮರ್ಥ್ಯ ೨೦ ಎಂ.ವಿ.ಎ. ಆಗಿತ್ತು. ಹಾಗೆಯೇ ಹಿರಿಯಡ್ಕದಲ್ಲಿ ೧೧೦/೩೩/೧೧ ಕೆ.ವಿ.ಯ ಎರಡು ಉಪಕೇಂದ್ರ (೨೦ ಎಂ.ವಿ.ಎ), ಕಾರ್ಕಳದಲ್ಲಿ ೩೩/೧೧ ಕೆ.ವಿ.ಯ ಎರಡು ಉಪಕೇಂದ್ರ (೧೦ ಎಂ.ವಿ.ಎ), ಉಡುಪಿ (ಮಣಿಪಾಲ್)ದಲ್ಲಿ ೧೧೦/೧೧ ಕೆ.ವಿ.ಯ ಎರಡು ಹಾಗೂ ೧೧೦/೩೩ ಕೆ.ವಿ.ಯ ಒಂದು ಉಪಕೇಂದ್ರಗಳಿದ್ದು, (೩೦.ಎಂ.ವಿ.ಎ), ಬ್ರಹ್ಮಾವರದಲ್ಲಿ ೩೩/೧೧ ಕೆ.ವಿ.ಯ ಒಂದು (ಐದು ಎಂ.ವಿ.ಎ) ಹಾಗೂ ಕುಂಜಿಬೆಟ್ಟುನಲ್ಲಿ ೩೩/೧೧ ಕೆ.ವಿ.ಯ ಒಂದು ಉಪಕೇಂದ್ರ (ಐದು ಎಂ.ವಿ.ಎ)ಗಳಿವೆ. ಆವರಣದಲ್ಲಿ ನೀಡಿರುವುದು ಆಯಾ ಉಪಕೇಂದ್ರಗಳ ಒಟ್ಟು ಸಾಮರ್ಥ್ಯವನ್ನು ಸೂಚಿಸುತ್ತದೆ. ಮೂರು ತಾಲೂಕುಗಳನ್ನೊಳಗೊಂಡ ಉಡುಪಿ ಜಿಲ್ಲೆಯು ದಿನಾಂಕ: ೨೫–೦೮–೧೯೯೭ ರಂದು ದಕ್ಷಿಣ ಕನ್ನಡ ಜಿಲ್ಲೆಯಿಂದ ವಿಭಜನೆಗೊಂಡು ಅಸ್ತಿತ್ವಕ್ಕೆ ಬಂದಿರುತ್ತದೆ. ದಿನಾಂಕ: ೧೬–೭–೧೯೯೭ರಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಎಂದು ನಾಮಕರಣ ಮಾಡಲಾಯಿತು. ಇದನ್ನು ದಿನಾಂಕ: ೧–೬–೨೦೦೨ರಲ್ಲಿ ಬೆಸ್ಕಾಂ, ಹೆಸ್ಕಾಂ, ಗೆಸ್ಕಾಂ ಹಾಗೂ ಮೆಸ್ಕಾಂಗಳೆಂಬ ನಾಲ್ಕು ಕಂಪನಿಗಳಾಗಿ ವಿಭಜಿಸಲಾಯಿತು. ಮತ್ತೇ ದಿನಾಂಕ ೧–೬–೨೦೦೫ರಲ್ಲಿ ಮೆಸ್ಕಾಂ ಅನ್ನು ಚೆಸ್ಕಾಂ ಹಾಗೂ ಮೆಸ್ಕಾಂ ಎಂಬ ಎರಡು ಕಂಪನಿಗಳಾಗಿ ವಿಭಜಿಸಲಾಯಿತು. ಪ್ರಸ್ತುತ ಉಡುಪಿ ಜಿಲ್ಲೆಯನ್ನು ಮೆಸ್ಕಾಂ ತನ್ನ ವ್ಯಾಪ್ತಿಯಲ್ಲಿ ಹೊಂದಿದೆ. ಜಿಲ್ಲೆಯು

## ಕೋಷ್ಟಕ ೮.೨೬ : ಜಿಲ್ಲೆಯ ಪ್ರವರ್ಗವಾರು ವಿದ್ಯುತ್ ಬಳಕೆದಾರರ ವಿವರ

| ವಿವರ | ೧೯೯೭-೯೮ | ೧೯೯೮-೯೯ | ೧೯೯೯-೦೦ | ೨೦೦೦-೦೧ | ೨೦೦೧-೦೨ | ೨೦೦೨-೦೩ | ೨೦೦೩-೦೪ | ೨೦೦೪-೦೫ | ೨೦೦೫-೦೬ |
|---|---|---|---|---|---|---|---|---|---|
| ಗೃಹ ಬಳಕೆ | ೯೭,೧೧೪ | ೯೮,೭೦೨ | ೯೯,೧೦೧ | ೧,೧೨,೪೭೦ | ೧,೦೯,೩೯೪ | ೧,೧೫,೬೧೫ | ೧,೨೩,೭೨೭ | ೧,೨೮,೩೪೪ | ೧,೯೪,೨೧೮ |
| ಸರ್ವವಿದ್ಯುತ್ | ೩೧,೮೧೨ | ೩೨,೭೦೭ | ೩೩,೨೧೭ | ೪೪,೧೩೧ | ೪೫,೬೪೪ | ೫೦,೨೨೯ | ೫೩,೩೬೫ | ೫೬,೪೫೪ | – |
| ವಾಣಿಜ್ಯ | ೨೧,೨೫೪ | ೨೧,೬೨೬ | ೨೧,೮೩೨ | ೨೪,೭೫೪ | ೨೩,೩೯೮ | ೨೩,೫೬೧ | ೨೫,೨೨೩ | ೨೬,೩೫೯ | ೨೭,೬೨೫ |
| ಕೈಗಾರಿಕೆ | ೫,೧೬೭ | ೫,೧೯೪ | ೫,೨೦೫ | ೫,೨೬೯ | ೫,೧೭೬ | ೫,೦೮೬ | ೪,೪೩೨ | ೪,೨೨೮ | ೩,೮೯೯ |
| ಕುಡಿಯುವ ನೀರು ಸರಬರಾಜು | ೫೨೦ | ೫೨೫ | ೫೩೧ | ೫೪೭ | ೭೩೧ | ೯೭೯ | ೧,೦೩೪ | ೧,೦೪೯ | ೧,೧೩೯ |
| ನೀರಾವರಿ ಪಂಪ್ ಸೆಟ್ | ೩೯,೨೭೧ | ೩೯,೬೭೪ | ೩೯,೮೫೪ | ೪೩,೮೮೪ | ೪೧,೮೩೯ | ೪೨,೨೪೮ | ೪೨,೦೬೦ | ೪೨,೨೭೩ | ೪೩,೮೦೨ |
| ಬೀದಿ ದೀಪ | ೯೭ | ೧೦೧ | ೧೦೫ | ೧೨೩ | ೪೦೯ | ೪೪೫ | ೫೧೫ | ೫೨೭ | ೨೬೮ |
| ಭಾಗ್ಯ ಜ್ಯೋತಿ/ ಕುಟೀರ ಜ್ಯೋತಿ | ೯,೫೨೩ | ೧೦,೦೩೬ | ೧೧,೮೯೭ | ೧೨,೨೮೫ | ೧೨,೮೧೩ | ೧೦,೩೯೧ | ೫,೯೪೧ | ೫,೪೧೯ | ೫,೫೮೫ |
| ಹೆಚ್.ಟಿ. | ೬೮ | ೭೦ | ೭೩ | ೧೨೬ | ೧೪೩ | ೧೬೪ | ೧೬೬ | ೧೮೭ | ೨೦೭ |
| ಒಟ್ಟು (ಬೀದಿ ದೀಪ ಹೊರತುಪಡಿಸಿ) | ೨,೦೪,೭೨೯ | ೨,೦೮,೫೩೪ | ೨,೧೧,೭೧೦ | ೨,೪೩,೪೬೬ | ೨,೩೯,೧೩೮ | ೨,೪೮,೨೭೩ | ೨,೫೫,೯೪೮ | ೨,೬೪,೩೧೩ | ೨,೭೬,೪೭೫ |

*ಆಧಾರ: ಕಾರ್ಯನಿರ್ವಾಹಕ ಇಂಜನಿಯರ್ (ವಿ) ರವರ ಕಛೇರಿ, ಕಾರ್ಯ ಮತ್ತು ಪಾಲನಾ ವಿಭಾಗ, ಉಡುಪಿ.*

## ಕೋಷ್ಟಕ ೮.೨೭ : ಜಿಲ್ಲೆಯ ಮಾಸ್ಟರ್ ಯುನಿಟ್/ ಉಪಕೇಂದ್ರಗಳು ೩೧-೩-೨೦೦೬ರಲ್ಲಿದ್ದಂತೆ

| ಕ್ರ.ಸಂ. | ವಿತರಣಾ ಕೇಂದ್ರದ ಹೆಸರು | ಸಾಮರ್ಥ್ಯ | ಪವರ್ ಟ್ರಾನ್ಸ್‌ಫಾರ್ಮರ್ ಸಂಖ್ಯೆ | ಪವರ್ ಟ್ರಾನ್ಸ್‌ಫಾರ್ಮರ್ ಸಾಮರ್ಥ್ಯ(ಎಂ.ವಿ.ಎ) | ಒಟ್ಟು ಸಾಮರ್ಥ್ಯ (ಎಂ.ವಿ.ಎ) |
|---|---|---|---|---|---|
| | **ಉಡುಪಿ ತಾಲೂಕು** | | | | |
| ೧ | ಮಣಿಪಾಲ್ ೧೧೦/ ೩೩/ ೧೧ಕೆ.ವಿ. | ೧೧೦/೧೧<br>೧೧೦/೩೩ | ೨<br>೧<br>೧ | ೧೦<br>೨೦<br>೧೦ | ೨೦<br>೨೦<br>೧೦ |
| ೨ | ಹಿರಿಯಡ್ಕ ೧೧೦/ ೩೩/ ೧೧ ಕೆ.ವಿ. | ೧೧೦/೧೧<br>೧೧೦/೩೩ | ೧<br>೨ | ೧೦<br>೧೦ | ೧೦<br>೨೦ |
| ೩ | ನಿಟ್ಟೂರು ೧೧೦/ ೧೧ ಕೆ.ವಿ. | ೧೧೦/೧೧ | ೨ | ೧೦ | ೨೦ |
| ೪ | ಮಧುವನ ೧೧೦/ ೧೧ ಕೆ.ವಿ. | ೧೧೦/೧೧ | ೧ | ೨೦ | ೨೦ |
| ೫ | ಕುಂಜಿಬೆಟ್ಟು ೩೩/ ೧೧ ಕೆ.ವಿ. | ೩೩/೧೧ | ೨ | ೫ | ೧೦ |
| ೬ | ಶಿರ್ವ ೩೩/ ೧೧ ಕೆ.ವಿ. | ೩೩/೧೧ | ೨ | ೫ | ೧೦ |
| ೭ | ಬ್ರಹ್ಮಾವರ ೩೩/ ೧೧ ಕೆ.ವಿ. | ೩೩/೧೧ | ೨ | ೫ | ೧೦ |
| | **ಕಾರ್ಕಳ ತಾಲೂಕು** | | | | |
| ೧ | ಕೇಮಾರ್ ೨೨೦/ ೧೧೦/ ೧೧ ಕೆ.ವಿ. | ೨೨೦/೧೧೦<br>೧೧೦/೧೧ | ೧<br>೨ | ೧೦೦<br>೧೦ | ೧೦೦<br>೨೦ |
| ೨ | ಕಾರ್ಕಳ ೩೩/ ೧೧ ಕೆ.ವಿ. | ೩೩/೧೧ | ೨ | ೫ | ೧೦ |
| ೩ | ಹೆಬ್ರಿ ೩೩/ ೧೧ ಕೆ.ವಿ. | ೩೩/೧೧ | ೧ | ೫ | ೫ |
| | **ಕುಂದಾಪುರ ತಾಲೂಕು** | | | | |
| ೧ | ಕುಂದಾಪುರ ೧೧೦/ ೩೩/ ೧೧ಕೆ.ವಿ. | ೧೧೦/೩೩<br>೧೧೦/೧೧ | ೧<br>೧ | ೧೦<br>೧೦ | ೧೦<br>೧೦ |
| ೨ | ಹಾಲಾಡಿ ೧೧೦/ ೧೧ ಕೆ.ವಿ. | ೧೧೦/೧೧ | ೧ | ೧೦ | ೧೦ |
| ೩ | ಬೈಂದೂರು ೩೩/ ೧೧ ಕೆ.ವಿ. | ೩೩/೧೧ | ೧ | ೫ | ೫ |
| ೪ | ತಲ್ಲೂರು ೩೩/ ೧೧ ಕೆ.ವಿ. | ೩೩/೧೧ | ೧ | ೫ | ೫ |

*ಆಧಾರ: ಕಾರ್ಯನಿರ್ವಾಹಕ ಇಂಜನಿಯರ್ (ವಿ) ರವರ ಕಛೇರಿ, ಕಾರ್ಯ ಮತ್ತು ಪಾಲನಾ ವಿಭಾಗ, ಉಡುಪಿ.*

**ಕೋಷ್ಟಕ ೮.೨೮ : ಜಿಲ್ಲೆಯಲ್ಲಿದ್ದ ವಿದ್ಯುತ್ ಮಾರ್ಗ ಮತ್ತು ವಿವಿಧ ಸಾಮರ್ಥ್ಯದ ಪರಿವರ್ತಕಗಳು ೩೧-೩-೨೦೦೬ ರಲ್ಲಿದ್ದಂತೆ**

| ಕ್ರ. ಸಂ. | ತಾಲೂಕು | ಉಪವಿಭಾಗ | ಹೆಚ್.ಟಿ.ಲೈನ್ (ರೂಟ್ ಕಿ.ಮೀ) | ಎಲ್.ಟಿ.ಲೈನ್ (ರೂಟ್ ಕಿ.ಮೀ) | ಪರಿವರ್ತಕಗಳ (ಸಂಖ್ಯೆ) |
|---|---|---|---|---|---|
| ೧. | **ಉಡುಪಿ** | ಉಡುಪಿ | ೫೩೨.೬೯ | ೨೧೭೪.೮೨ | ೯೯೧ |
| | | ಬ್ರಹ್ಮಾವರ | ೪೪೪.೫೯೨ | ೨೨೦೯.೨೫೧ | ೪೯೧ |
| | | ಕಾಪು | ೨೮೮.೯೩೮ | ೧೯೬೨.೮೪೯ | ೩೭೫ |
| | | **ಒಟ್ಟು** | **೧೨೬೬.೨೨** | **೬೩೪೬.೯೨** | **೧೮೫೭** |
| ೨. | **ಕಾರ್ಕಳ** | ಕಾರ್ಕಳ | ೯೭೬.೧೫೭ | ೩೫೭೮.೯೪೧ | ೭೮೩ |
| | | **ಒಟ್ಟು** | **೧೭೬.೧೫೭** | **೩೫೭೮.೯೪೧** | **೭೮೩** |
| ೩. | **ಕುಂದಾಪುರ** | ಕುಂದಾಪುರ | ೭೦೦.೧೦೯ | ೨೧೨೪.೩೦೯ | ೫೬೫ |
| | | ಬೈಂದೂರು | ೪೪೨.೬೫೪ | ೨೪೭೦.೦೬ | ೩೮೭ |
| | | **ಒಟ್ಟು** | **೧೧೪೨.೭೬೩** | **೪೫೯೪.೩೬೯** | **೯೫೨** |
| | | **ಒಟ್ಟು** | **೩೩೮೫.೧೪** | **೧೪೫೨೦.೨೩** | **೫೯೨** |

*ಆಧಾರ: ಕಾರ್ಯನಿರ್ವಾಹಕ ಇಂಜನಿಯರ್ (ವಿ) ರವರ ಕಛೇರಿ, ಕಾರ್ಯ ಮತ್ತು ಪಾಲನಾ ವಿಭಾಗ, ಉಡುಪಿ.*

**ಕೋಷ್ಟಕ ೮.೨೯ : ಜಿಲ್ಲೆಯ ತಾಲೂಕುವಾರು ವಿದ್ಯುಚ್ಛಕ್ತಿ ಪಡೆದ ಗ್ರಾಮ ಹಾಗೂ ಉಪಗ್ರಾಮಗಳು ೩೧-೩-೨೦೦೬ರಲ್ಲಿದ್ದಂತೆ**

| ತಾಲೂಕು | ೨೦೦೧ರ ಜನಗಣತಿಯಂತೆ ಜನವಸತಿ ಇರುವ ಗ್ರಾಮಗಳು | ೨೦೦೫ರ ಮಾರ್ಚ್ ಅಂತ್ಯಕ್ಕೆ ವಿದ್ಯುತ್ ಸಂಪರ್ಕ ಪಡೆದ ಗ್ರಾಮಗಳ ಸಂಖ್ಯೆ | ೨೦೦೧ರ ಜನಗಣತಿಯಂತೆ ಇರುವ ಉಪಗ್ರಾಮಗಳು (ಹ್ಯಾಮ್‌ಲೆಟ್) | ೨೦೦೫ರ ಮಾರ್ಚ್ ಅಂತ್ಯಕ್ಕೆ ವಿದ್ಯುತ್ ಸಂಪರ್ಕ ಪಡೆದ ಉಪಗ್ರಾಮಗಳ ಸಂಖ್ಯೆ |
|---|---|---|---|---|
| **ಉಡುಪಿ** | ೯೯ | ೯೯ | ೧೧೮೮ | ೧೧೩೩ |
| **ಕಾರ್ಕಳ** | ೫೦ | ೫೦ | ೧೦೮೫ | ೬೫೪ |
| **ಕುಂದಾಪುರ** | ೯೯ | ೯೯ | ೧೨೦೩ | ೭೫೪ |
| **ಒಟ್ಟು** | ೨೪೮ | ೨೪೮ | ೩೪೭೬ | ೨೫೪೧ |

*ಆಧಾರ: ಕಾರ್ಯನಿರ್ವಾಹಕ ಇಂಜನಿಯರ್ (ವಿ) ರವರ ಕಛೇರಿ, ಕಾರ್ಯ ಮತ್ತು ಪಾಲನಾ ವಿಭಾಗ, ಉಡುಪಿ.*

ಅಸ್ತಿತ್ವಕ್ಕೆ ಬಂದ ನಂತರ ೨೦೦೬ರ ಮಾರ್ಚ್ ಅಂತ್ಯದವರೆಗೆ ವಿದ್ಯುತ್ ಬಳಕೆದಾರರ ವಿವರವನ್ನು ಕೋಷ್ಟಕ ೮.೨೬ರಲ್ಲೂ, ಮಾಸ್ಟರ್ ಯೂನಿಟ್ಸ್ ಉಪಕೇಂದ್ರಗಳ ವಿವರವನ್ನು ಕೋಷ್ಟಕ ೮.೨೭ರಲ್ಲೂ, ಜಿಲ್ಲೆಯಲ್ಲಿರುವ ವಿದ್ಯುತ್ ಮಾರ್ಗ ಹಾಗೂ ವಿವಿಧ ಸಾಮರ್ಥ್ಯದ ಪರಿವರ್ತಕಗಳ ವಿವರವನ್ನು ಕೋಷ್ಟಕ ೮.೨೮ರಲ್ಲೂ ಹಾಗೂ ತಾಲೂಕುವಾರು ವಿದ್ಯುತ್ ಪಡೆದ ಗ್ರಾಮ ಹಾಗೂ ಉಪಗ್ರಾಮಗಳ ವಿವರವನ್ನು ಕೋಷ್ಟಕ ೮.೨೯ರಲ್ಲಿ ನೀಡಲಾಗಿದೆ.

## ಮಾನವ ಸಂಪತ್ತು

ಜಿಲ್ಲೆಯ ಜನಸಂಖ್ಯೆ ೨೦೦೧ರಲ್ಲಿ ೧೧,೧೨,೨೪೩ ಇದ್ದು, ಇದರಲ್ಲಿ ೫,೨೨,೨೩೧ ಮಂದಿ ಪುರುಷರು, ೫,೯೦,೦೧೨ ಮಂದಿ ಸ್ತ್ರೀಯರು ಸೇರಿದ್ದರು. ಒಟ್ಟು ಜನಸಂಖ್ಯೆಯಲ್ಲಿ ೬೭,೬೮೯ (ಶೇ ೬.೧) ಮಂದಿ ಪರಿಶಿಷ್ಟ ಜಾತಿಗೂ ಮತ್ತು ೪೧,೯೩೬ (ಶೆ. ೩.೩) ಮಂದಿ ಪರಿಶಿಷ್ಟ ಪಂಗಡಕ್ಕೂ ಸೇರಿದವರಾಗಿದ್ದಾರೆ. ೧೯೮೧ ರಿಂದ ೨೦೦೧ರ ವರೆಗಿನ ಹತ್ತು ದಶಕಗಳಲ್ಲಾಗಿರುವ ಜನಸಂಖ್ಯೆಯ ಬೆಳವಣಿಗೆಯ ದರ, ಸ್ತ್ರೀ-ಪುರುಷರ ಪ್ರಮಾಣ (೧೦೦೦ ಪುರುಷರಿಗೆ ಲಭ್ಯವಿರುವ ಸ್ತ್ರೀಯರ ಸಂಖ್ಯೆ) ಹಾಗೂ ಜನಸಾಂದ್ರತೆಯನ್ನು ಕೋಷ್ಟಕ ೮.೩೦ ರಲ್ಲಿ ನೀಡಲಾಗಿದೆ.

**ಕೋಷ್ಟಕ ೮.೩೦ : ಜಿಲ್ಲೆಯ ದಶಕವಾರು ಜನಸಂಖ್ಯಾ ಬೆಳವಣಿಗೆ ಪ್ರಮಾಣ**

| ವರ್ಷಗಳು | ಜನಸಂಖ್ಯೆ | ದಶವಾರ್ಷಿಕ ವ್ಯತ್ಯಾಸ | ದಶವಾರ್ಷಿಕ ಶೇಕಡಾ ವ್ಯತ್ಯಾಸ | ಪುರುಷರು | ಮಹಿಳೆಯರು | ಸ್ತ್ರೀ–ಪುರುಷರ ಪ್ರಮಾಣ | ಜನಸಾಂದ್ರತೆ |
|---|---|---|---|---|---|---|---|
| ೧೯೦೧ | ೪೧೧೭೦೮ | – | – | ೧೯೩೭೮೪ | ೨೧೭೯೨೪ | ೧೧೨೮ | ೧೦೬ |
| ೧೯೧೧ | ೪೨೫೬೦೭ | ೧೩೮೯೯ | ೩.೫ | ೨೦೧೫೬೦ | ೨೨೪೦೪೭ | ೧೧೧೪ | ೧೧೦ |
| ೧೯೨೧ | ೪೩೭೯೦೮ | ೧೨೩೦೧ | ೨.೮ | ೨೦೮೬೨೦ | ೨೨೯೨೮೮ | ೧೦೯೯ | ೧೧೩ |
| ೧೯೩೧ | ೪೬೬೭೫೬ | ೨೮೮೪೮ | ೨.೮ | ೨೨೦೧೭೦ | ೨೪೬೫೮೬ | ೧೧೨೧ | ೧೨೧ |
| ೧೯೪೧ | ೫೦೭೩೧೬ | ೪೦೫೬೦ | ೬.೯ | ೨೩೮೯೨೫ | ೨೬೮೩೯೧ | ೧೧೨೪ | ೧೩೨ |
| ೧೯೫೧ | ೫೭೫೮೧೭ | ೬೮೫೦೧ | ೮.೮ | ೨೬೭೮೪೧ | ೩೦೭೯೭೬ | ೧೧೫೦ | ೧೫೦ |
| ೧೯೬೧ | ೬೪೮೭೯೮ | ೭೨೯೮೧ | ೧೩.೬ | ೨೯೯೭೦೧ | ೩೪೯೦೯೭ | ೧೧೬೫ | ೧೬೭ |
| ೧೯೭೧ | ೭೭೫೬೪೭ | ೧೨೬೮೪೯ | ೧೧.೭ | ೩೬೨೩೮೫ | ೪೧೩೨೬೨ | ೧೧೪೦ | ೨೦೦ |
| ೧೯೮೧ | ೯೪೮೭೯೬ | ೧೭೩೦೪೯ | ೨೨.೩ | ೪೪೫೪೧೨ | ೫೦೩೨೮೪ | ೧೧೩೦ | ೨೪೫ |
| ೧೯೯೧ | ೧೦೩೮೦೯೯ | ೮೯೪೦೩ | ೯.೪ | ೪೮೬೪೦೯ | ೫೫೧೬೯೦ | ೧೦೨೬ | ೨೬೮ |
| ೨೦೦೧ | ೧೧೧೨೨೪೩ | ೭೪೧೪೪ | ೭.೧ | ೫೨೨೨೩೧ | ೫೯೦೦೧೨ | ೧೧೩೦ | ೨೮೭ |

*ಆಧಾರ : ಜನಗಣತಿ ಇಲಾಖೆ, ಬೆಂಗಳೂರು*

## ಮಾನವ ಶಕ್ತಿ ಯೋಜನೆ

ವಿವಿಧ ವಲಯ ಮತ್ತು ಕಸುಬುಗಳ ಶ್ರಮದ ಬೇಡಿಕೆ ಮತ್ತು ಪೂರೈಕೆಯನ್ನು ಸರಿದೂಗಿಸಿ ಶ್ರಮವನ್ನು ದಕ್ಷವಾಗಿ ಬಳಸಿಕೊಳ್ಳುವುದೇ ಮಾನವಶಕ್ತಿ ಯೋಜನೆಯಾಗಿದೆ. ಬಡತನ ಮತ್ತು ನಿರುದ್ಯೋಗ ಸಮಸ್ಯೆಗಳಿಗೆ ಈ ಯೋಜನೆ ಸೂಕ್ತ ಪರಿಹಾರವಾಗಬಲ್ಲುದು. ಉಡುಪಿ ಜಿಲ್ಲೆಯಲ್ಲಿ ಕೃಷಿಯನ್ನು ಅವಲಂಬಿಸಿರುವವರ ಸಂಖ್ಯೆ ೧,೮೫,೦೧೯ ಆಗಿದ್ದು, ಇದರಲ್ಲಿ ೯೭,೨೫೮ ಮಂದಿ ವ್ಯವಸಾಯಗಾರರು ಹಾಗೂ ೮೭,೭೬೧ ಮಂದಿ ಕೃಷಿ ಕಾರ್ಮಿಕರು ಸೇರಿದ್ದರು. ತೋಟಗಾರಿಕೆ ಬೆಳೆಗಳು, ಖಾದ್ಯತೈಲ, ಹಣ್ಣುಗಳು, ತೆಂಗು, ಗಾಂಜಾ, ಸಿಂಕೋನಾ, ಅಫೀಮು, ಔಷಧಿ ಸಸ್ಯಗಳು, ವಿಳ್ಯದೆಲೆ, ಹೂ ತರಕಾರಿ ಮುಂತಾದವುಗಳನ್ನು ವ್ಯವಸಾಯದಿಂದ ಹೊರತುಪಡಿಸಿರುವುದು, ದ್ವಿತೀಯ ಹಾಗೂ ತೃತೀಯ ವಲಯಗಳಲ್ಲಿ ಉದ್ಯೋಗಾವಕಾಶಗಳು ಹೆಚ್ಚಾಗಿರುವುದು ವ್ಯವಸಾಯ ಕ್ಷೇತ್ರದಲ್ಲಿ ಪಾಲ್ಗೊಳ್ಳುವಿಕೆ ಕಡಿಮೆಯಾಗಿರುವುದಕ್ಕೆ ಕಾರಣವಾಗಿದೆ. ಮಾನವ ಶಕ್ತಿ ಯೋಜನೆ ಫಲಕಾರಿಯಾಗಲು, ಜನ ಸಾಕ್ಷರತೆ ಹೊಂದುವುದು ಅವಶ್ಯಕ. ಜಿಲ್ಲೆಯಲ್ಲಿ ಸಾಕ್ಷರತೆಯ ಪ್ರಮಾಣ ೧೯೯೧ರಲ್ಲಿ ಶೇ. ೭೪.೪೭ರಷ್ಟಿತ್ತು. ಇದು ೨೦೦೧ರಲ್ಲಿ ಶೇ. ೭೯.೮೭ಕ್ಕೆ ಹೆಚ್ಚಳಗೊಂಡಿದೆ.

೨೦೦೧ರ ಜನಗಣತಿಯಂತೆ ಉಡುಪಿ ಜಿಲ್ಲೆಯಲ್ಲಿ ೪,೮೮,೧೭೩ ಕೆಲಸಗಾರರಿದ್ದರೆ, ೬,೨೪,೦೭೦ ಕೆಲಸಗಾರರಲ್ಲದವರಿದ್ದರು. ಒಟ್ಟು ಕೆಲಸಗಾರರಲ್ಲಿ ೪,೧೭,೨೮೭ ಮಂದಿ ಮುಖ್ಯ ಕೆಲಸಗಾರರು, ೭೦,೮೮೬ ಮಂದಿ ಮಾರ್ಜಿನಲ್ (ಸೀಮಾಂತ) ಕೆಲಸಗಾರರಿದ್ದರು. ೪,೧೭,೨೮೭ ಮಂದಿ ಮುಖ್ಯ ಕೆಲಸಗಾರರಲ್ಲಿ ೮೩,೩೦೫ ಮಂದಿ ವ್ಯವಸಾಯಗಾರರು, ೫೭,೮೯೩ ಮಂದಿ ಕೃಷಿ ಕಾರ್ಮಿಕರು, ೫೪,೭೮೧ ಮಂದಿ ಗೃಹ ಕೈಗಾರಿಕಾ ಕೆಲಸಗಾರರು ಹಾಗೂ ೨,೨೧,೩೦೮ ಮಂದಿ ಇತರೆ ಕೆಲಸಗಾರರಿದ್ದರು. ೭೦,೮೮೬ ಮಂದಿ ಮಾರ್ಜಿನಲ್ ಕೆಲಸಗಾರರಲ್ಲಿ ೧೩,೯೫೩ ಮಂದಿ ವ್ಯವಸಾಯಗಾರರು, ೨೯,೮೬೮ ಮಂದಿ ಕೃಷಿಕಾರ್ಮಿಕರು, ೭೦೪೦ ಮಂದಿ ಗೃಹ ಕೈಗಾರಿಕಾ ಕೆಲಸಗಾರರು ಹಾಗೂ ೨೦,೦೨೫ ಮಂದಿ ಇತರೆ ಕೆಲಸಗಾರರಿದ್ದರು.

## ಯೋಜನೆಗಳು

ಜಿಲ್ಲಾ ಯೋಜನೆ ಆಯಾ ಪ್ರದೇಶದ ಜನರ ಅಗತ್ಯಗಳನ್ನು ಸ್ಥಳೀಯವಾಗಿ ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿಕೊಂಡು ತುರ್ತಾಗಿ ಬಗೆಹರಿಸಿಕೊಳ್ಳಲು ಸಾಧ್ಯವಾಗುತ್ತದೆ. ಅಲ್ಲದೆ ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರಗಳಾದ ಕೃಷಿ, ಕೈಗಾರಿಕೆ, ಪಶುಸಂಗೋಪನೆ, ಸಹಕಾರ, ಅರಣ್ಯ, ಶಿಕ್ಷಣ, ಪಂಚಾಯತ್‌ರಾಜ್, ಸಮಾಜ ಕಲ್ಯಾಣ, ಕಾರ್ಮಿಕ ಕಲ್ಯಾಣ ಮುಂತಾದ ಹತ್ತು ಹಲವು ಕ್ಷೇತ್ರಗಳಲ್ಲಿ ಪ್ರಗತಿಯನ್ನು ಸಾಧಿಸುವುದೇ ಪಂಚವಾರ್ಷಿಕ ಯೋಜನೆಗಳ ಪ್ರಧಾನ ಉದ್ದೇಶಗಳಾಗಿವೆ. ದೇಶದಲ್ಲಿ ಪಂಚವಾರ್ಷಿಕ ಯೋಜನೆಗಳು ಪ್ರಾರಂಭವಾಗುವುದಕ್ಕೆ ಮೊದಲೇ ಕರ್ನಾಟಕವು ಇಂತಹ ಯೋಜನೆಯ ಅವಶ್ಯಕತೆಯನ್ನು ಮನಗಂಡಿತ್ತು. ಹಿಂದಿನ ಮೈಸೂರು ಸಂಸ್ಥಾನದಲ್ಲಿ ಯೋಜಿತ ಆರ್ಥಿಕಾಭಿವೃದ್ಧಿ ೧೯೧೦ರಲ್ಲೇ ಪ್ರಾರಂಭವಾಗಿತ್ತು. ಈ ಯೋಜನೆಗಳ ಮಹತ್ವದ ಉದ್ದೇಶ ಬಡತನ ನಿರ್ಮೂಲನೆ ಹಾಗೂ ಆರ್ಥಿಕ ಸ್ವಾವಲಂಬನೆಗಳನ್ನು ಸಾಧಿಸುವುದೇ ಆಗಿತ್ತು.

ಸ್ಥಳೀಯ ಅಭಿವೃದ್ಧಿ ಯೋಜನೆಯನ್ನು ಮೊದಲ ಬಾರಿಗೆ ಮೈಸೂರು ರಾಜ್ಯದಲ್ಲಿ ಪ್ಲಾನಿಂಗ್ ಕಮೀಷನ್ ೧೯೫೩-೫೪ರಲ್ಲಿ ಆರಂಭಿಸಿತು. ಇದರ ಉದ್ದೇಶ ಯೋಜನಾ ಆಯೋಗದ ಅನುದಾನ, ರಾಜ್ಯ ಸರ್ಕಾರದ ಭಾಗ, ಸ್ಥಳೀಯ ಸಂಸ್ಥೆಗಳ ಭಾಗ ಮತ್ತು ಸಾರ್ವಜನಿಕ ಕೊಡುಗೆಯನ್ನು ಬಳಸಿಕೊಂಡು ಗ್ರಾಮೀಣ ಪ್ರದೇಶವನ್ನು ಶೀಘ್ರ ಅಭಿವೃದ್ಧಿಗೊಳಿಸುವುದೇ ಆಗಿತ್ತು. ಒಟ್ಟು ಯೋಜನಾ ವೆಚ್ಚದ ಶೇ.೫೦ರಷ್ಟನ್ನು ಯೋಜನಾ ಆಯೋಗ ನೀಡಿದರೆ, ಉಳಿದ ಶೇ. ೫೦ರಷ್ಟನ್ನು ಸ್ಥಳೀಯವಾಗಿ ಶೇಖರಿಸಿದ ಬಂಡವಾಳದಿಂದ ನೀಡಬೇಕಾಗಿತ್ತು. ಈ ಯೋಜನೆಯು ಸಂಪೂರ್ಣವಾಗಿ ಸಾರ್ವಜನಿಕರ ಸಹಕಾರದಿಂದ ಯಶಸ್ವಿಯಾಗಬೇಕಾಗಿತ್ತು. ಹೀಗಾಗಿ ವಿವಿಧ ಪಂಚವಾರ್ಷಿಕ ಯೋಜನೆಗಳಡಿ ಜಿಲ್ಲೆಯಲ್ಲಿ ಆದ ಅಭಿವೃದ್ಧಿಯ ಸಂಕ್ಷಿಪ್ತ ಪರಿಚಯ ಇಲ್ಲಿದೆ.

ಮೊದಲ ಪಂಚವಾರ್ಷಿಕ ಯೋಜನೆ (೧೯೫೧-೫೬)ಯಲ್ಲಿ ಕೃಷಿ, ನೀರಾವರಿ, ವಿದ್ಯುಚ್ಛಕ್ತಿ, ಸಾರಿಗೆ-ಸಂಪರ್ಕ, ಸಾಮಾಜಿಕ ಸೇವಾ ಕಾರ್ಯಗಳ ಅಭಿವೃದ್ಧಿ, ತಲಾ ಆದಾಯದಲ್ಲಿ ಗಣನೀಯ ಹೆಚ್ಚಳ ಹಾಗೂ ಜೀವನ ಮಟ್ಟದಲ್ಲಿ ಸುಧಾರಣೆ ಮುಂತಾದವು ಈ ಯೋಜನೆಯ ಉದ್ದೇಶಗಳಾಗಿದ್ದವು. ಅದರಂತೆ ಆಹಾರೋತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸುವ ಸಲುವಾಗಿ ಸುಧಾರಿತ ಬಿತ್ತನೆ ಬೀಜಗಳ ವಿತರಣೆ ರಸಗೊಬ್ಬರ ಹಾಗೂ ಭತ್ತದ ಬೆಳೆಯಲ್ಲಿ ಜಪಾನೀ ಮಾದರಿಯ ಅನುಕರಣೆ ಹಾಗೂ ತಾಂತ್ರಿಕ ವ್ಯವಸಾಯೋಪಕರಣಗಳ ಬಳಕೆಯಿಂದಾಗಿ ಒಂದನೇ ಪಂಚವಾರ್ಷಿಕ ಯೋಜನೆಯ ಅಂತ್ಯಕ್ಕೆ ಆಹಾರ ಪದಾರ್ಥಗಳ ಉತ್ಪಾದನೆ ಹೆಚ್ಚಳಗೊಂಡಿತು. ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ (ಉಡುಪಿ ಜಿಲ್ಲೆಯು ಸೇರಿದಂತೆ) ತಲಾ ವರಮಾನ ೧೯೫೫-೬೬ರಲ್ಲಿ ಕೇವಲ ರೂ. ೨೦೭ ಆಗಿದ್ದರೆ, ೧೯೬೦-೬೧ರಲ್ಲಿ ರೂ. ೩೪೧ಕ್ಕೆ ಹೆಚ್ಚಳಗೊಂಡಿತು. ಎರಡನೇ ಪಂಚವಾರ್ಷಿಕ ಯೋಜನೆ (೧೯೫೬-೬೧) ಯಲ್ಲಿ ಕೈಗಾರಿಕಾ ಕ್ಷೇತ್ರಕ್ಕೆ ಪ್ರಥಮಾದ್ಯತೆ ನೀಡಿದರೂ, ಕೃಷಿ ಕ್ಷೇತ್ರದ ಉತ್ಪಾದನೆ ಕಡಿಮೆಯಾಗದಂತೆ ನೋಡಿಕೊಳ್ಳಲಾಯಿತು. ಮೂರನೇಯ ಪಂಚವಾರ್ಷಿಕ ಯೋಜನೆ (೧೯೬೧-೬೬) ಒಂದು ವ್ಯಾಪಕ ಯೋಜನೆಯಾಗಿದ್ದು, ಕೃಷಿ ಉತ್ಪನ್ನಗಳ ಅಧಿಕ ಉತ್ಪಾದನೆ, ಗ್ರಾಮೀಣ ಕೈಗಾರಿಕೆಗಳ ಅಭಿವೃದ್ಧಿ, ಸಹಕಾರಿ ಕ್ಷೇತ್ರಗಳ ಅಭಿವೃದ್ಧಿ, ಮಾನವಶಕ್ತಿ ಹಾಗೂ ಇತರೆ ಸಂಪತ್ತುಗಳ ಪೂರ್ಣ ಬಳಕೆ, ಶಿಕ್ಷಣ ಮತ್ತು ವಯಸ್ಕರ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡುವುದೇ ಈ ಯೋಜನೆಯ ಉದ್ದೇಶಗಳಾಗಿತ್ತು. ಈ ಯೋಜನೆಯಲ್ಲಿ ದೀರ್ಘಕಾಲಿಕ ಕಾರ್ಯಕ್ರಮಗಳಿಗೆ ಹಾಗೂ ಅಪೂರ್ಣವಾಗಿರುವ ಕಾಮಗಾರಿಯನ್ನು ಪೂರ್ಣಗೊಳಿಸುವುದಕ್ಕೆ ಹೆಚ್ಚಿನ ಆದ್ಯತೆ ನೀಡಲಾಯಿತು. ಈ ಯೋಜನೆಯಲ್ಲಿ ೧೯೬೪-೬೫ರಲ್ಲಿ ಆಹಾರ ಬೆಳೆಗಳ ಉತ್ಪಾದನೆಗಾಗಿ ಒತ್ತು ನೀಡುವ 'ಆಹಾರ ಬೆಳೆ ಕೇಂದ್ರಿಕೃತ ಬೇಸಾಯ ಯೋಜನೆ' ಅಡಿಯಲ್ಲಿ ಜಿಲ್ಲೆಯಲ್ಲಿ ಭತ್ತದ ಬೇಸಾಯ ಕಾರ್ಯಕ್ರಮವನ್ನು ಜಾರಿಗೆ ತರಲಾಯಿತು. ಮಂಗಳೂರಿನಿಂದ ಕುಂದಾಪುರದವರೆಗೆ ಒಳನಾಡು ಜಲ ಸಾರಿಗೆಗೆ ಅನುಕೂಲವಾಗುವಂತೆ ಕಾಲುವೆ ನಿರ್ಮಿಸುವ ಯೋಜನೆಯನ್ನು ಕೈಗೊಂಡಿತ್ತು. ಈ ಕಾಲುವೆ

ದಂಡೆಯ ಉದ್ದಕ್ಕೂ ಕೈಗಾರಿಕೆಗಳನ್ನು ಸ್ಥಾಪಿಸಲು ಅವಕಾಶವಿತ್ತು. ೧೯೬೫–೬೬ರಲ್ಲಿ ಮಂಗಳೂರಿನಲ್ಲಿ ಪ್ರವಾಸಿಗರಿಗಾಗಿ ವಿಶ್ರಾಂತಿ ಗೃಹವನ್ನು ನಿರ್ಮಿಸಲು, ರಾಜ್ಯದ ಪಾಲು ರೂ.೪೦,೦೦೦ಗಳನ್ನು ವೆಚ್ಚ ಮಾಡಲಾಯಿತು.

## ಅಭಿವೃದ್ಧಿ ಸೂಚ್ಯಾಂಕ

ಎರಡನೇ ಪಂಚವಾರ್ಷಿಕ ಯೋಜನೆಯಿಂದ ಆರನೇ ಪಂಚವಾರ್ಷಿಕ ಯೋಜನೆಯ ಪ್ರಾರಂಭದ (೧೯೬೦–೬೧ ರಿಂದ ೧೯೭೯–೮೦) ವರೆಗೂ ಜಿಲ್ಲೆಯ ಅಭಿವೃದ್ಧಿಯ ವಿಶ್ಲೇಷಣೆ ಮಾಡಿದಾಗ ಅದರ ಸ್ಥಾನ ಹಾಗೂ ಅಭಿವೃದ್ಧಿಯ ಸೂಚ್ಯಂಕ ಸ್ಪಷ್ಟವಾಗುತ್ತದೆ. ಜಿಲ್ಲೆಯ ಆಯ್ದ ಕೆಲವು ಅಂಶಗಳನ್ನು ಆಧಾರವಾಗಿಟ್ಟುಕೊಂಡು ಕೆಳಗೆ ತೋರಿಸಿರುವ ವರ್ಷಗಳಲ್ಲಿ ಆಗಿರುವ ಅದರ ಅಭಿವೃದ್ಧಿ ಸೂಚ್ಯಂಕವನ್ನು ನಿರ್ಧರಿಸಬಹುದಾಗಿದೆ. ೧೯೬೦–೬೧ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ (ಉಡುಪಿ ಜಿಲ್ಲೆಯನ್ನೊಳಗೊಂಡಂತೆ) ಅಭಿವೃದ್ಧಿ ಸೂಚ್ಯಂಕ ೨೩೦.೨೧ ಅಂಶಗಳನ್ನು ಪಡೆದು ಮೊದಲ ಸ್ಥಾನದಲ್ಲಿತ್ತು. ಕ್ರಮವಾಗಿ ಬೆಂಗಳೂರು ನಗರ ೨೧೮.೦(೦೨) ಹಾಗೂ ಶಿವಮೊಗ್ಗ ೧೮೦.೧೫(೦೩) ಅಂಶಗಳನ್ನು ಪಡೆದು ನಂತರದ ಎರಡು ಸ್ಥಾನ ಪಡೆದುಕೊಂಡಿದ್ದವು. ಆದರೆ ೧೯೭೧–೭೨ರಲ್ಲಿ ಜಿಲ್ಲೆಯು ೧೮೭.೦೪ ಅಂಶಗಳನ್ನು ಪಡೆದು ಎರಡನೇ ಸ್ಥಾನಕ್ಕೆ ಕುಸಿಯಿತು. ಶಿವಮೊಗ್ಗ ೧೪೧.೦೭ ಅಂಶಗಳನ್ನು ಪಡೆದು ಮೂರನೇ ಸ್ಥಾನದಲ್ಲಿಯೇ ಮುಂದುವರಿದಿತ್ತಾದರೂ ಬೆಂಗಳೂರು ೨೦೬.೨೬ ಅಂಶಗಳನ್ನು ಪಡೆದು ಒಂದನೇ ಸ್ಥಾನಕ್ಕೆ ಬಡ್ತಿ ಪಡೆದಿದೆ. ೧೯೭೬–೭೭ರಲ್ಲಿ ಜಿಲ್ಲೆಯು ೧೭೨.೮೬ ಅಂಶಗಳನ್ನು ಪಡೆದು ಎರಡನೇ ಸ್ಥಾನದಲ್ಲಿ ಮುಂದುವರಿದಿದೆ. ಈ ಅವಧಿಯಲ್ಲೂ ಸಹ ಕ್ರಮವಾಗಿ ಬೆಂಗಳೂರು ೨೦೬.೪೨ (೦೧), ಶಿವಮೊಗ್ಗ ೧೧೮.೦೫ (೦೩), ಮಂಡ್ಯ ೧೧೨.೯೪ (೦೪) ಹಾಗೂ ಮೈಸೂರು ೧೧೨.೯೯ (೦೫) ಅಂಶಗಳನ್ನು ಪಡೆದು ಮೊದಲ ಐದು ಸ್ಥಾನಗಳನ್ನು ಪಡೆದುಕೊಂಡಿವೆ. ಹಾಗೆಯೇ ೧೯೭೯–೮೦ರಲ್ಲಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯು ೧೭೬.೯೯ ಅಂಶಗಳನ್ನು ಪಡೆದು ೨ನೇ ಸ್ಥಾನವನ್ನು ಉಳಿಸಿಕೊಂಡಿರುವುದು ಉಲ್ಲೇಖಾರ್ಹವಾಗಿದೆ. ಆದರೆ ಈ ಅವಧಿಯಲ್ಲಿ ಬೆಂಗಳೂರು ೧೯೮.೫೭ ಕಡಿಮೆ ಅಂಶಗಳನ್ನು ಪಡೆದಿದ್ದರೂ ಮೊದಲ ಸ್ಥಾನ ಉಳಿಸಿಕೊಂಡಿದೆ. ಮೈಸೂರು ೧೨೪.೪೫ ಅಂಶಗಳನ್ನು ಪಡೆದು ಮೂರನೇ ಸ್ಥಾನಕ್ಕೆ ಬಡ್ತಿ ಪಡೆದಿದ್ದರೆ. ಶಿವಮೊಗ್ಗ ೧೨೦.೪೪ ಅಂಶಗಳನ್ನು ಪಡೆದಿದ್ದರೂ ನಾಲ್ಕನೇ ಸ್ಥಾನಕ್ಕೆ ಕುಸಿದಿದೆ. ಮಂಡ್ಯ ೧೧೮.೮೭ ಅಂಶಗಳನ್ನು ಪಡೆದು ಐದನೇ ಸ್ಥಾನಕ್ಕೆ ಕುಸಿದಿದೆ. ಆವರಣದಲ್ಲಿ ನೀಡಿರುವ ಅಂಕಿಅಂಶಗಳು ಜಿಲ್ಲೆಯ ಸ್ಥಾನವನ್ನು ಪ್ರತಿಬಿಂಬಿಸುತ್ತವೆ. ಮೇಲಿನ ಅಂಕಿಅಂಶಗಳು ಜಿಲ್ಲೆಯ ಅಭಿವೃದ್ಧಿ ಸೂಚ್ಯಂಕವು ಸ್ಥಿರವಾಗಿರುವುದನ್ನು ಸ್ಪಷ್ಟಪಡಿಸುತ್ತಿದ್ದು ಗಮನಾರ್ಹವಾಗಿದೆ.

೧೯೬೬–೬೯ರ ವರೆಗಿನ ಮೂರು ವಾರ್ಷಿಕ ಯೋಜನೆಗಳು, ನಾಲ್ಕು (೧೯೬೯–೭೪) ಹಾಗೂ ಐದನೇಯ ಪಂಚವಾರ್ಷಿಕ ಯೋಜನೆ (೧೯೭೪–೭೯)ಗಳ ಕಾಲಾವಧಿಗಳಲ್ಲಿಯೂ ಸಹ ಜಿಲ್ಲೆಯು ಸಾಕಷ್ಟು ಅಭಿವೃದ್ಧಿ ಹೊಂದಿರುವುದು ಅಂಕಿ ಅಂಶಗಳಿಂದ ತಿಳಿದುಬರುತ್ತದೆ. ೧೯೭೦–೭೧ರಲ್ಲಿ ಜಿಲ್ಲೆಯ ತಲಾ ವರಮಾನ ಕೇವಲ ೭೮೬ ರೂ.ಗಳಿದ್ದದ್ದು, ೧೯೮೦–೮೧ರಲ್ಲಿ ೧೭೦೧ ರೂ.ಗಳಿಗೆ ಹೆಚ್ಚಳಗೊಂಡಿರುವುದು ಜಿಲ್ಲೆಯ ಅಭಿವೃದ್ಧಿಯ ಪ್ರತೀಕವಾಗಿದೆ.

**ಆರನೆಯ ಪಂಚವಾರ್ಷಿಕ ಯೋಜನೆ (೧೯೮೦–೮೫)** ಈ ಯೋಜನೆಯಲ್ಲಿ ಲಾಭದಾಯಕ ಉದ್ಯೋಗಾವಕಾಶಗಳ ನಿರ್ಮಾಣ, ಆದಾಯದ ಅಸಮಾನತೆಯನ್ನು ಕಡಿಮೆ ಮಾಡುವುದು, ಕೃಷಿ ಉತ್ಪಾದನೆಯನ್ನು ಹೆಚ್ಚಿಸುವುದು, ದ್ವಿದಳ ಧಾನ್ಯಗಳ ಉತ್ಪಾದನೆಯಲ್ಲಿ ಸ್ವಯಂ–ಪೂರ್ಣತೆಯನ್ನು ಸಾಧಿಸುವುದು, ಎಲ್ಲಾ ಹಳ್ಳಿಗಳಿಗೂ ವಿದ್ಯುತ್ ಒದಗಿಸುವುದು, ಆರೋಗ್ಯ, ಶಿಕ್ಷಣ, ಕುಡಿಯುವ ನೀರು ಸರಬರಾಜು, ಶಾಲಾ ಮಕ್ಕಳಿಗೆ ಪೌಷ್ಟಿಕ ಆಹಾರ ಹಾಗೂ ವಯಸ್ಕರ ಶಿಕ್ಷಣ ಮುಂತಾದ ಸಾಮಾಜಿಕ ಸೌಲಭ್ಯಗಳ ಗುಣಮಟ್ಟವನ್ನು ಹೆಚ್ಚಿಸುವ ಉದ್ದೇಶಗಳನ್ನು ಹೊಂದಲಾಗಿತ್ತು. ಈ ಯೋಜನೆಯ ಪ್ರಾರಂಭದಲ್ಲಿ (೧೯೮೦–೮೧)ರಲ್ಲಿ ತಲಾದಾಯ ರೂ.೧,೭೦೧ಗಳಿದ್ದದ್ದು, ಯೋಜನೆಯ ಕೊನೆಯ ವೇಳೆಗೆ

(೧೯೮೪-೮೫ರಲ್ಲಿ) ೨೫೮೭.೯೩ ರೂ.ಗಳಿಗೆ ಹೆಚ್ಚಳಗೊಂಡಿದೆ. ೧೯೭೯-೮೦ರಲ್ಲಿ ಜಿಲ್ಲೆಯ ಅಭಿವೃದ್ಧಿ ಸೂಚ್ಯಂಕ ೧೭೬.೬೯ ಅಂಶಗಳನ್ನು ಪಡೆದು ರಾಜ್ಯದ ೨೦ ಜಿಲ್ಲೆಗಳಲ್ಲಿ ಎರಡನೇ ಸ್ಥಾನ ಪಡೆದುಕೊಂಡಿರುವುದು ಜಿಲ್ಲೆಯ ಪ್ರಗತಿಯನ್ನು ಬಿಂಬಿಸುತ್ತದೆ.

**ಏಳನೆಯ ಪಂಚವಾರ್ಷಿಕ ಯೋಜನೆ (೧೯೮೫-೯೦)** ಏಳನೆಯ ಪಂಚವಾರ್ಷಿಕ ಯೋಜನೆಯಲ್ಲಿ ಬಡತನವನ್ನು ಕನಿಷ್ಠತಮಗೊಳಿಸುವದು, ಕನಿಷ್ಠ ಅಗತ್ಯಗಳ ಕಾರ್ಯಕ್ರಮದ ವಿಸ್ತರಣೆಯ ಮೂಲಕ ಸಾಧಿಸಲಾಗುವ ಸಾಮಾಜಿಕ ಒಳಿತು ಮತ್ತು ಸೇವೆಗಳಿಗೆ ಅವಕಾಶ ಕಲ್ಪನೆ, ಗ್ರಾಮೀಣ ಪ್ರದೇಶಗಳಲ್ಲಿ ಉದ್ಯಮಗಳನ್ನು ಬಲಗೊಳಿಸಿ ಉದ್ಯೋಗಾವಕಾಶಗಳನ್ನು ಹೆಚ್ಚಿಸುವುದು, ಸಾರಿಗೆ-ಸಂಪರ್ಕ ಹಾಗೂ ಇತರೆ ಸೇವಾ ಕ್ಷೇತ್ರಗಳನ್ನು ಅಭಿವೃದ್ಧಿಪಡಿಸುವುದು ಹಾಗೂ ಸಮಾಜದಲ್ಲಿನ ಆರ್ಥಿಕ ಅಸಮಾನತೆಗಳನ್ನು ಕಡಿಮೆ ಮಾಡುವುದು ಮುಂತಾದವುಗಳಿಗೆ ಒತ್ತು ನೀಡಲಾಯಿತು. ಈ ಯೋಜನೆಯ ಕೊನೆಯ ಮೂರು ವರ್ಷಗಳಲ್ಲಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಅಭಿವೃದ್ಧಿಗಾಗಿ ೧೯೮೭-೮೮ರಲ್ಲಿ ೫,೨೯.೬೪ ಲಕ್ಷ ರೂ.ಗಳನ್ನು ವೆಚ್ಚ ಮಾಡಿದ್ದರೆ, ೧೯೮೮-೮೯ರಲ್ಲಿ ೬,೪೧೧.೬೩ ಲಕ್ಷ ರೂ.ಗಳು ಹಾಗೂ ೧೯೮೯-೯೦ರಲ್ಲಿ ೭,೨೨೧.೫೧ ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗಿತ್ತು. ಈ ಯೋಜನೆಯ ಪ್ರಾರಂಭದಲ್ಲಿ ತಲಾ ಆದಾಯ ೨೫೮೭.೯೩ ರೂ.ಗಳಿಂದ ಯೋಜನೆಯ ಅಂತ್ಯಕ್ಕೆ (೧೯೯೦-೯೧) ೫,೩೫೦ ರೂ.ಗಳಿಗೆ ಹೆಚ್ಚಳಗೊಂಡಿರುವುದು ಗಮನಾರ್ಹವಾಗಿದೆ.

**ಎಂಟನೆಯ ಪಂಚವಾರ್ಷಿಕ ಯೋಜನೆ** (೧೯೯೨-೯೭) ಈ ಯೋಜನೆಯು ಬಡತನ ನಿರ್ಮೂಲನೆ, ಉದ್ಯೋಗ ಸೃಷ್ಟಿ, ಜನರ ಮೂಲಭೂತ ಅವಶ್ಯಕತೆಗಳ ಪೂರೈಕೆ, ಸಮರ್ಪಕ ಆರ್ಥಿಕ ಬೆಳವಣಿಗೆ, ಅದರಲ್ಲೂ ಪ್ರಮುಖವಾಗಿ ನೀರಾವರಿ ವಿದ್ಯುತ್, ಕೃಷಿ ಹಾಗೂ ಕೈಗಾರಿಕೆಗಳಂತಹ ಮುಖ್ಯ ಘಟಕಗಳ ಅಭಿವೃದ್ಧಿ ಮುಂತಾದ ಉದ್ದೇಶಗಳನ್ನು ಹೊಂದಿತ್ತು. ಈ ಯೋಜನೆಯ ಅಂತ್ಯಕ್ಕೆ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ತಲಾವರಮಾನ ೨೦,೧೬೭ ರೂ.ಗಳಾಗಿತ್ತು.

**ಒಂಬತ್ತನೆಯ ಪಂಚವಾರ್ಷಿಕ ಯೋಜನೆ (೧೯೯೭-೨೦೦೨)** : ಈ ಯೋಜನೆಯು ಆರಂಭವಾಗುವ ಹೊತ್ತಿಗೆ ಉಡುಪಿ ಜಿಲ್ಲೆಯು ದಕ್ಷಿಣ ಕನ್ನಡ ಜಿಲ್ಲೆಯಿಂದ ಪ್ರತ್ಯೇಕಗೊಂಡಿತು. ಈ ಯೋಜನಾವಧಿಯಲ್ಲಿ ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿಗಾಗಿ ಕೊನೆಯ ನಾಲ್ಕು ವರ್ಷಗಳಲ್ಲಿ ಆದ ವೆಚ್ಚವನ್ನು ಕೋಷ್ಟಕ ೮.೩೧ರಲ್ಲಿ ನೀಡಿದೆ.

ಈ ಯೋಜನೆಯ ಪ್ರಾರಂಭದಲ್ಲಿ ಜಿಲ್ಲಾದಾಯ ೫,೫೬,೩೨೭ ಲಕ್ಷ ರೂ.ಗಳಿಸಿ, ರಾಜ್ಯದಲ್ಲಿ ಮೂರನೇ ಸ್ಥಾನ ಪಡೆದಿತ್ತು. ಹಾಗೆಯೇ ತಲಾದಾಯ ೨೯,೯೬೨ ಲಕ್ಷ ರೂ.ಗಳಿಸಿ ಮೊದಲ ಸ್ಥಾನ ಪಡೆದಿತ್ತು. ಈ ಯೋಜನಾವಧಿಯ ೨೦೦೦-೦೧ರಲ್ಲಿ ವೈದ್ಯಕೀಯ ಹಾಗೂ ಕುಟುಂಬ ಕಲ್ಯಾಣಕ್ಕಾಗಿ ಕ್ರಮವಾಗಿ ೬೨೬.೦೪ ಲಕ್ಷ ರೂ. ಹಾಗೂ ೧೭೩.೮೨ ಲಕ್ಷ ರೂ.ಗಳನ್ನು ವೆಚ್ಚ ಮಾಡಿ, ೩,೭೫,೩೧೧ ಹಳೇ ರೋಗಿಗಳಿಗೆ ಹಾಗೂ ೪,೪೦,೨೨೭ ಹೊಸ ರೋಗಿಗಳಿಗೆ ವಿವಿಧ ಕಾಯಿಲೆಗಳಿಗಾಗಿ ಔಷಧೋಪಚಾರವನ್ನು ನೀಡಲಾಗಿದೆ. ರಾಷ್ಟ್ರೀಯ ಕುಷ್ಠರೋಗ ನಿಯಂತ್ರಣ ಯೋಜನೆಯಡಿಯಲ್ಲಿ ೩೬೫ ರೋಗಿಗಳಿಗೆ ಎಂ.ಡಿ.ಟಿ. ಚಿಕಿತ್ಸೆಯನ್ನು ನೀಡಲಾಗಿದೆ. ರಾಷ್ಟ್ರೀಯ ಮಲೇರಿಯ ನಿರ್ಮೂಲನಾ ಕಾರ್ಯಕ್ರಮದಡಿಯಲ್ಲಿ ೧೧೮೬ ಮಲೇರಿಯಾ ರೋಗಿಗಳನ್ನು ಪತ್ತೆಮಾಡಿ ಇವರಲ್ಲಿ ೯೪ ಪಿ.ಎಫ್. ಪ್ರಕರಣಗಳೆಂದು ಗುರುತಿಸಿದೆ. ರಸ್ತೆ ಮತ್ತು ಸೇತುವೆಗಳ ನಿರ್ಮಾಣ, ರಸ್ತೆಗಳ ಡಾಂಬರೀಕರಣ, ವಿಶೇಷ ಘಟಕ ಯೋಜನೆ, ಗ್ರಾಮ ಸಂಪರ್ಕ, ಗಿರಿಜನ ಉಪಯೋಜನೆಯಡಿಯಲ್ಲಿ ರಸ್ತೆ ಮತ್ತು ಸೇತುವೆಗಳ ನಿರ್ಮಾಣ, ಮತ್ತಿತರ ಯೋಜನೆಗಳಿಗೆ ೮೭.೯೨ ಲಕ್ಷ ರೂ. ವೆಚ್ಚ ಮಾಡಿ ೪೬ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಕುಡಿಯುವ ನೀರು ಮತ್ತು ನೈರ್ಮಲ್ಯಕ್ಕಾಗಿ ಕೊಳವೆ ನೀರು ಸರಬರಾಜು ಯೋಜನೆ (ರಾಜ್ಯ), ಕೊಳವೆ ನೀರು ಸರಬರಾಜು ಯೋಜನೆ (ಕೇಂದ್ರ), ಕಿರು ನೀರು ಸರಬರಾಜು

## ಕೋಷ್ಟಕ ೮.೩೧ : ಒಂಬತ್ತನೇ ಪಂಚವಾರ್ಷಿಕ ಯೋಜನೆಯಡಿ ಜಿಲ್ಲೆಯಲ್ಲಾಗಿದ್ದ ಅಭಿವೃದ್ಧಿ ವೆಚ್ಚ

| ಕ್ರ. ಸಂ. | ಇಲಾಖೆಗಳು | ೧೯೯೮-೯೯ | | ೧೯೯೯-೨೦೦೦ | | ೨೦೦೦-೨೦೦೧ | | ೨೦೦೧-೨೦೦೨ | |
|---|---|---|---|---|---|---|---|---|---|
| | | ಅನುದಾನ | ವೆಚ್ಚ | ಅನುದಾನ | ವೆಚ್ಚ | ಅನುದಾನ | ವೆಚ್ಚ | ಅನುದಾನ | ವೆಚ್ಚ |
| ೧. | ಲೋಕೋಪಯೋಗಿ | ೯೨.೫೨ | ೨೧೬.೬೩ | ೧೦೪.೨೦ | ೧೦೫.೧೮ | ೧೦೬.೧೪ | ೧೬೧.೫೫ | ೧೧೨.೦೯ | ೯೫.೯೦ |
| ೨. | ಶಿಕ್ಷಣ | ೫೪೦೦.೩೭ | ೪೯೫೬.೩೦ | ೬೨೪೦.೮೦ | ೩೪೩೩.೪೪ | ೫೯೯೯.೬೬ | ೫೯೫೫.೧೫ | ೬೧೧೦.೨೮ | ೬೦೮೭.೩೪ |
| ೩. | ಕ್ರೀಡೆ ಮತ್ತು ಯುವಜನಸೇವೆ | ೧೭.೮೭ | ೧೭.೫೩ | ೨೨.೧೩ | ೨೦.೯೭ | ೦ | ೧೮.೧೩ | ೦ | ೧೬.೦೪ |
| ೪. | ವೈದ್ಯಕೀಯ | ೭೧೯.೬೫ | ೬೩೫.೫೩ | ೬೬೯.೬೬ | ೬೬೮.೭೭ | ೬೯೨.೧೭ | ೬೨೬.೦೪ | ೬೧೭.೭೧ | ೬೭೫.೧೨ |
| ೫. | ಕುಟುಂಬ ಕಲ್ಯಾಣ | ೨೩೯.೬೪ | ೧೫೦.೮೯ | ೧೮೮.೫೯ | ೧೭೪.೦೪ | ೨೬೯.೪೬ | ೧೭೩.೮೨ | ೩೨೭.೩೭ | ೨೨೩.೮೫ |
| ೬. | ನೀರು ಪೂರೈಕೆ | ೫೩೫.೦೩ | ೪೩೩.೧೮ | ೫೮೪.೦೬ | ೫೭೩.೧೬ | ೫೩೯.೮೪ | ೫೧೩.೪೦ | ೬೨೩.೧೨ | ೬೭೬.೮೯ |
| ೭. | ಗೃಹ | ೧೧೫.೨ | ೨೩೧.೦೪ | ೩೬೭.೬೪ | ೨೭೭.೮೬ | ೪೪೩.೨೦ | ೪೬೬.೮೯ | ೫೪೬.೩೮ | ೫೫೭.೨೦ |
| ೮. | ಅನುಸೂಚಿತ ಜಾತಿ, ಪಂ. ಹಿಂದುಳಿದ ವರ್ಗ | ೫೮೨.೭೮ | ೪೮೧.೭೯ | ೭೦೦.೦೦ | ೪೩೭.೮೧ | ೧೧೧೩.೨೧ | ೭೫೬.೪೮ | ೧೧೬೦.೩೦ | ೬೭೬.೦೪ |
| ೯. | ಸಾಮೂಹಿಕ ಭದ್ರತೆ | ೧೦೨.೧೫ | ೨೧೨.೭೫ | ೧೯೨.೯೨ | ೧೦೫.೫೪ | ೦ | ೨೨೨.೨೮ | ೦ | ೩೦೭.೪೩ |
| ೧೦. | ಪೌಷ್ಠಿಕ ಆಹಾರ | ೧೯೪.೮೨ | ೧೩೬.೩೦ | ೨೦೩.೭೧ | ೩೧.೨೪ | ೦ | ೨೪೨.೬೨ | ೦ | ೨೨೬.೪೭ |
| ೧೧. | ಸಸ್ಯ ಸಂಗೋಪನೆ | ೧೬೭.೫೦ | ೧೭೪.೭೭ | ೧೮೩.೩೬ | ೧೪೩.೬೭ | ೧೯೪.೫೮ | ೧೭೭.೮೧ | ೧೪೩.೬೮ | ೧೬೦.೫೨ |
| ೧೨. | ಭೂಸಾರ ಸಂರಕ್ಷಣೆ | ೪.೨೨ | ೨.೪೫ | ೪.೯೬ | ೦೯೫ | ೩.೫೧ | ೪.೬೩ | ೩೩.೫೪ | ೩೨.೯೯ |
| ೧೩. | ಪಶು ಸಂಗೋಪನೆ | ೧೩೬.೩೮ | ೧೩೦.೩೨ | ೧೩೭.೪೯ | ೧೧೨.೨೬ | ೧೬೪.೯೧ | ೧೬೧.೫೩ | ೧೫೮.೩೪ | ೧೬೫.೩೩ |
| ೧೪. | ಮೀನುಗಾರಿಕೆ | ೩೧.೬೭ | ೩೦.೩೩ | ೨೮.೨೨ | ೨೮.೬೦ | ೨೯.೫೫ | ೨೮.೧೮ | ೨೭.೨೦ | ೨೭.೭೭ |
| ೧೫. | ಅರಣ್ಯ | ೧೧.೪೬ | ೧೨.೭೭ | ೧೨.೯೪ | ೧೬.೨೮ | ೨೧.೯೫ | ೧೮.೨೭ | ೪೬.೯೫ | ೪೩.೫೧ |
| ೧೬. | ಸಹಕಾರ | ೩.೯೪೧ | ೨.೭೪ | ೫.೩೨ | ೦.೭೦ | ೫.೦೭ | ೪.೩೦ | ೪.೦೮ | ೩.೬೬ |
| ೧೭. | ಗ್ರಾಮೀಣ ಅಭಿವೃದ್ಧಿ ವಿಶೇಷ ಕಾರ್ಯಕ್ರಮ | ೧೩೧.೮೫ | ೩೦೯.೮೬ | ೧೩೯.೯೩ | ೧೫೨.೬೪ | ೦ | ೧೬೯.೬೧ | ೦ | ೨೦೮.೯೭ |
| ೧೮. | ಗ್ರಾಮೀಣ ಉದ್ಯೋಗ | ೮೪.೨೯ | ೭೧೯.೬೬ | ೧೩೯.೯೩ | ೧೫೨.೬೪ | ೦ | ೧೬೯.೬೧ | ೦ | ೨೦೮.೯೭ |
| ೧೯. | ಇತರೆ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ | ೪೬೪.೬೮ | ೪೭೫.೯೫ | ೨೦೭.೨೦ | ೨೭೮.೭೨ | ೦ | ೩೨೬.೧೩ | ೦ | ೩೦೯.೬೮ |
| ೨೦. | ಗುಡ್ಡಗಾಡು ಪ್ರದೇಶ | ೧೦೩.೮ | ೯೬.೫೦ | ೧೦೮.೧೭ | ೧೦೫ | ೧೨೩.೭೩ | ೧೧೨.೪೯ | ೯೪.೬೧ | ೧೧೬.೩೭ |
| ೨೧. | ಸಣ್ಣ ನೀರಾವರಿ | ೪೪.೯೬ | ೪೩.೮೧ | ೪೪.೧೩ | ೨೮.೮೨ | ೨೭.೯೩ | ೧೩೦.೯೫ | ೭೨.೪೭ | ೫೬.೬೯ |
| ೨೨. | ರೂಢಿಯಲ್ಲಿಲ್ಲದ ಇಂಧನಗಳು | ೧೩.೭೩ | ೧೩.೭೩ | ೧೮.೬೧ | ೭.೬೯ | ೨.೬೭ | ೬.೮೩ | ೪.೩೬ | ೭.೨೮ |
| ೨೩. | ಗ್ರಾಮೋದ್ಯೋಗ ಸಣ್ಣ ಕೈಗಾರಿಕೆ | ೨೬.೦೯ | ೧೯.೨೮ | ೨೯.೭೭ | ೧೯.೭೮ | ೩೨.೮೯ | ೨೭.೭೧ | ೩೬.೧೦ | ೩೨.೨೬ |
| ೨೪. | ಉದ್ಯಮ | ೭.೪೪ | ೬.೩೨ | ೦ | ೨.೩೩ | ೦ | ೦ | ೦ | ೦ |
| ೨೫. | ರಸ್ತೆ ಮತ್ತು ಸೇತುವೆ | ೧೪೪.೫೯ | ೧೩೬.೫೦ | ೨೭೦.೫೯ | ೧೪೩.೧೫ | ೧೫೨.೫೪ | ೨೮೮.೩೮ | ೬೩೦.೦೫ | ೩೨೮.೬೨ |
| ೨೬. | ಸಚಿವಾಲಯ ಆರ್ಥಿಕ ಸೇವೆ | ೧.೮೩ | ೨.೭೧ | ೫.೫೦ | ೬.೬೧ | ೭.೩೫ | ೭.೦೩ | ೯.೯೦ | ೯.೧೫ |
| ೨೭. | ಪ್ರವಾಸೋದ್ಯಮ | ೨.೨೦ | ೦.೨೬ | ೨.೦೦ | ೧.೯೯ | ೦ | ೦ | ೦ | ೦ |
| ೨೮. | ನಾಗರೀಕ ಸರಬರಾಜು | ೦ | ೦.೦೪ | ೦.೫೭ | ೦ | ೦ | ೦ | ೦ | ೦ |
| | ಒಟ್ಟು | **೯,೩೭೦.೬೬** | **೯೬೪೯.೯೯** | **೧೧೧೩೮.೬೫** | **೭೧೧೦.೫೭** | **೧೧೦೩೬.೬೨** | **೧೧೩೫೦.೨೧** | **೧೨೧೨೦.೪೦** | **೧೧೮೬೪.೭೪** |

*ಆಧಾರ: ಜಿಲ್ಲಾ ಪಂಚಾಯಿತಿ, ಉಡುಪಿ.*

ಯೋಜನೆ (ರಾಜ್ಯ), ಕಿರು ನೀರು ಸರಬರಾಜು ಯೋಜನೆ (ಕೇಂದ್ರ) ಮತ್ತಿತರ ೧೩೯ ಕಾಮಗಾರಿಗಳನ್ನು ಪೂರ್ಣಗೊಳಿಸಿ, ೧೮೪ ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗಿದೆ. ಸಣ್ಣ ನೀರಾವರಿ ಯೋಜನೆಯಡಿಯಲ್ಲಿ, ಅಣೆಕಟ್ಟು ಮತ್ತು ಪಿಕಪ್‌ಗಳು, ಗಂಗಾಕಲ್ಯಾಣ ಯೋಜನೆ, ಬಾವಿ ಮತ್ತು ಕೆರೆಗಳ ಉಳೆತ್ತುವುದು, ವಿಶೇಷ ಘಟಕ ಯೋಜನೆ ಮತ್ತಿತರ ಕಾಮಗಾರಿಗಳನ್ನು ಪೂರ್ಣಗೊಳಿಸಿ, ೧೨೦ ಲಕ್ಷ ರೂ.ಗಳನ್ನು ಇದಕ್ಕಾಗಿ ಸಮಾಜ ಕಲ್ಯಾಣ ಇಲಾಖೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ಶೈಕ್ಷಣಿಕ ಸಾರ್ವಜನಿಕ, ಆರ್ಥಿಕ, ಧಾರ್ಮಿಕ ಶ್ರೇಯೋಭಿವೃದ್ಧಿಗಾಗಿ ಹಲವು ಯೋಜನೆಗಳನ್ನು ಹಮ್ಮಿಕೊಂಡಿದೆ. ಜಿಲ್ಲೆಯಲ್ಲಿ ೧೭ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಿದ್ದು, ೭೯೦ ವಿದ್ಯಾರ್ಥಿ, ವಿದ್ಯಾರ್ಥಿನಿಯರು ನಿಲಯದ ಸೌಲಭ್ಯ ಪಡೆದಿದ್ದರು. ಒಂದು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯವಿದ್ದು, ೧೫ ವಿದ್ಯಾರ್ಥಿಗಳಿಗೆ ೧.೧೧ ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗಿತ್ತು. ಐದು ಮಹಿಳಾ ಮತ್ತು ಮಕ್ಕಳ ಶ್ರೇಯೋಭಿವೃದ್ಧಿ ಕೇಂದ್ರಗಳಿದ್ದು, ಪರಿಶಿಷ್ಟ ಜಾತಿಯ ೮೭ ವಿದ್ಯಾರ್ಥಿಗಳು ಸೌಲಭ್ಯ ಪಡೆದಿದ್ದರು. ಇದಕ್ಕಾಗಿ ೮.೧೪ ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗಿದೆ. ೨೦೦೦-೦೧ರಲ್ಲಿ ಬ್ರಹ್ಮಾವರದಲ್ಲಿ ಹೊಸದಾಗಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯನ್ನು ಆರಂಭಿಸಲಾಗಿದ್ದು, ಇಲ್ಲಿ ೫೦ ವಿದ್ಯಾರ್ಥಿಗಳಿಗೆ ಪ್ರವೇಶವಾಗಿ ೫ ರಿಂದ ೧೦ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ವಿದ್ಯಾಭ್ಯಾಸದ ಜೊತೆಗೆ ಉಚಿತ ಊಟ, ವಸತಿ, ಸಮವಸ್ತ್ರಗಳನ್ನು ನೀಡಲಾಗುತ್ತಿದೆ. ಇದಕ್ಕಾಗಿ ೪.೨೪ ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗಿದೆ.

ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತ ವರ್ಗದವರ ಶೈಕ್ಷಣಿಕ ಅಭಿವೃದ್ಧಿಗಾಗಿ ಹಲವು ಯೋಜನೆಗಳನ್ನು ಹಮ್ಮಿಕೊಂಡಿದೆ. ಆರು ಮೆಟ್ರಿಕ್ ನಂತರದ ವಸತಿನಿಲಯಗಳು, ೧೯ ಮೆಟ್ರಿಕ್ ಪೂರ್ವ ವಸತಿನಿಲಯಗಳು, ಒಂದು ಮಹಿಳಾ ಹೊಲಿಗೆ ತರಬೇತಿ ಕೇಂದ್ರ, ಮೂರು ಅನುದಾನಿತ ಖಾಸಗಿ ವಸತಿ ನಿಲಯಗಳು, ನಾಲ್ಕು ಅನಾಥಾಲಯಗಳು, ಬೆಳ್ಳಿ ಬೆಳಕು, ಮಾಂಗಲ್ಯ ಭಾಗ್ಯ ಮತ್ತಿತರ ಜನಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ೨೦೦೦-೦೧ರ ಅಂತ್ಯಕ್ಕೆ ಆರು ಮೆಟ್ರಿಕ್ ನಂತರದ ವಸತಿ ನಿಲಯಗಳಿದ್ದು, ೨೮೩ ವಿದ್ಯಾರ್ಥಿಗಳಿದ್ದು, ೨೫.೭೩ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗಿತ್ತು. ೧೯ ಮೆಟ್ರಿಕ್ ಪೂರ್ವ ವಸತಿನಿಲಯಗಳಿದ್ದು, ೫ ರಿಂದ ೧೦ನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ೮೨೩ ವಿದ್ಯಾರ್ಥಿಗಳಿಗೆ ೭೪.೧೯ ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗಿದೆ. ಜಿಲ್ಲೆಯಲ್ಲಿ ೨೦ ಸಂಖ್ಯಾಬಲದ ಒಂದು ಹೊಲಿಗೆ ತರಬೇತಿ ಕೇಂದ್ರವಿದ್ದು, ಪ್ರತಿ ಅಭ್ಯರ್ಥಿಗೆ ೩೦೦ ರೂ.ಗಳ ಶಿಷ್ಯ ವೇತನ ಹಾಗೂ ಮುಂದಿನ ಮಾರ್ಗೋಪಾಯಕ್ಕಾಗಿ ಹೊಲಿಗೆ ಯಂತ್ರವನ್ನು ಉಚಿತವಾಗಿ ನೀಡುತ್ತಿದೆ. ಇದಕ್ಕಾಗಿ ೨.೪೫ ಲಕ್ಷ ವೆಚ್ಚ ಮಾಡಲಾಗಿದೆ. ಜಿಲ್ಲಾ ವಲಯ ಯೋಜನೆಯಲ್ಲಿ ೧.೫೦ ಲಕ್ಷ ಮೀನುಮರಿ ಉತ್ಪಾದನೆ ಹಾಗೂ ಹಂಚಿಕೆಯ ಭೌತಿಕ ಗುರಿ ಹೊಂದಲಾಗಿದ್ದು, ೧.೬೦ ಲಕ್ಷ ಮೀನು ಮರಿ ಉತ್ಪಾದಿಸಿ, ಹಂಚಿಕೆ ಮಾಡಲಾಗಿದೆ. ಇದಕ್ಕಾಗಿ ೪೧.೦ ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗಿತ್ತು. ನಾಲ್ಕು ಮೀನು ಮಾರುಕಟ್ಟೆ ನಿರ್ಮಾಣಕ್ಕೆ ಒಂದು ಲಕ್ಷ ರೂ.ಗಳ ಸಹಾಯಧನ ನೀಡಲಾಗಿದೆ. ತೊಟ್ಟಂ ಕೋಡಿಬೆಂಗ್ರೆ ಮೀನುಗಾರಿಕೆ ರಸ್ತೆ ಅಭಿವೃದ್ಧಿಗಾಗಿ ೮.೬೫ ಲಕ್ಷ ರೂ. ವೆಚ್ಚ ಮಾಡಲಾಗಿತ್ತು. ಕುಂಭಾಶಿಯಿಂದ ಕರಾವಳಿ ಕರ್ಕಿಕಡು ಕಿನಾರೆ ರಸ್ತೆಗಾಗಿ ೧೨.೯೫ ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗಿತ್ತು. ಜಿಲ್ಲೆಯಲ್ಲಿ ೨.೫೦ ಲಕ್ಷ ರೂ.ಗಳನ್ನು ಭೂಸಾರ ಸಂರಕ್ಷಣೆಗಾಗಿ, ೧.೭೭ ಲಕ್ಷ ರೂ.ಗಳನ್ನು ಅರಣ್ಯ ಮತ್ತು ಪರಿಸರ ಯೋಜನೆಗಾಗಿ, ೨೧.೫೭ ಲಕ್ಷ ರೂ.ಗಳನ್ನು ಪಶ್ಚಿಮ ಘಟ್ಟ ಅಭಿವೃದ್ಧಿಗಾಗಿ ವೆಚ್ಚ ಮಾಡಲಾಗಿತ್ತು. ಈ ಯೋಜನೆಯ ಆರಂಭದಲ್ಲಿ (೧೯೯೮-೯೯) ೧,೬೬,೯೬೫ ಲಕ್ಷ ರೂ.ಗಳ ಜಿಲ್ಲಾದಾಯವಿದ್ದದ್ದು, ಯೋಜನೆಯ ಅಂತ್ಯಕ್ಕೆ ೨,೩೬,೫೦೭ ಲಕ್ಷ ರೂ.ಗಳಿಗೆ ಹೆಚ್ಚಳಗೊಂಡಿರುವುದು ಗಮನಾರ್ಹವಾಗಿದೆ. ಹಾಗೆಯೇ ತಲಾದಾಯ ೧೩,೮೩೧ ರೂ.ಗಳಿಂದ ೨೧,೦೮೭ ರೂ.ಗಳಿಗೆ ಹೆಚ್ಚಳಗೊಂಡಿರುವುದು ಜಿಲ್ಲೆಯ ಅಭಿವೃದ್ಧಿಯ ಸಂಕೇತವಾಗಿದೆ.

**ಹತ್ತನೆಯ ಪಂಚವಾರ್ಷಿಕ ಯೋಜನೆ** (೨೦೦೨-೨೦೦೭): ಈ ಯೋಜನೆಯಲ್ಲಿ೨೦೦೨-೦೩ ರಲ್ಲಿ ಜಿಲ್ಲೆಯ ಅಭಿವೃದ್ಧಿಗಾಗಿ ಒಟ್ಟು ೧೧,೫೧೯.೮೭ ಲಕ್ಷ ರೂ.ಗಳನ್ನು, ೨೦೦೩-೦೪ರಲ್ಲಿ ೧೧,೨೮೪.೩೦ ಲಕ್ಷ

## ಕೋಷ್ಟಕ : ೮.೩೨

## ೧೦ನೇ ಪಂಚವಾರ್ಷಿಕ ಯೋಜನಾವಧಿಯಲ್ಲಿ ಜಿಲ್ಲೆಯ ಅಭಿವೃದ್ಧಿಗಾಗಿ ಮಾಡಿದ ವೆಚ್ಚ ವಿವರ

(ಲಕ್ಷ ರೂ.ಗಳಲ್ಲಿ)

| ಕ್ರ. ಸಂ. | ಇಲಾಖೆಗಳು | ೨೦೦೨-೨೦೦೩ | | ೨೦೦೩-೨೦೦೪ | | ೨೦೦೪-೨೦೦೫ | | ೨೦೦೫-೨೦೦೬ | |
|---|---|---|---|---|---|---|---|---|---|
| | | ಅನುದಾನ | ವೆಚ್ಚ | ಅನುದಾನ | ವೆಚ್ಚ | ಅನುದಾನ | ವೆಚ್ಚ | ಅನುದಾನ | ವೆಚ್ಚ |
| ೧ | ಲೋಕೋಪಯೋಗಿ | ೧೧೩.೬೦ | ೫.೧೦ | ೧೧೧.೦೨ | ೧೨೪.೦೩ | ೧೨೭.೯೪ | ೧೨೩.೦೫ | ೧೩೭.೫೧ | ೧೩೧.೯೭ |
| ೨ | ಶಿಕ್ಷಣ | ೫೯೬೧.೮೫ | ೬೦೨೩.೯೬ | ೬೩೧೮.೯೮ | ೬೩೫೨.೭೯ | ೬೪೩೭.೭೯ | ೬೫೮೪.೫೩ | ೨೧೧೬.೭೩ | ೧೯೭೬.೫೧ |
| ೩ | ಕ್ರೀಡೆ ಮತ್ತು ಯುವಜನಸೇವೆ | ೦ | ೧೩.೬೩ | ೦ | ೧೦.೯೪ | ೦ | ೧೧.೦೩ | ೧೦.೮೪ | ೧೧.೩೪ |
| ೪ | ಕಲೆ ಮತ್ತು ಸಂಸ್ಕೃತಿ | ೦ | ೦ | ೦ | ೦ | ೬೪೧.೯೩ | ೦ | ೬.೯೩ | ೬.೯೩ |
| ೫ | ವೈದ್ಯಕೀಯ | ೬೨೭.೬೨ | ೬೩೪.೫೪ | ೬೧೭.೨೧ | ೬೮೩.೫೩ | ೩೦೭.೭೨ | ೭೧೧.೯೫ | ೮೪೪.೯೪ | ೭೬೩.೨೫ |
| ೬ | ಕುಟುಂಬ ಕಲ್ಯಾಣ | ೩೧೫.೬೨ | ೨೩೫.೯೧ | ೩೨೧.೬೦ | ೩೩೦.೮೯ | ೫೪೯.೧೬ | ೨೩೧.೫೬ | ೨೯೨.೬೦ | ೨೧೯.೭೫ |
| ೭ | ನೀರು ಪೂರೈಕೆ | ೫೯೯.೯೧ | ೬೭೬.೦೦ | ೯೧೭.೧೦ | ೫೫೫.೫೯ | ೨೪೨.೦೭ | ೫೨೬.೭೪ | ೪೪೯.೧೫ | ೩೭೯.೪೭ |
| ೮ | ಗೃಹ | ೧೫೮.೫೫ | ೨೧೭.೬೨ | ೨೦೨.೭೩ | ೨೦೨.೧೭ | ೧೨೫೧.೧೩ | ೨೦೭.೩೨ | ೧೪೬.೨೮ | ೨೦೯.೧೦ |
| ೯ | ಅನುಸೂಚಿತ ಜಾತಿ, ಪಂ. ಹಿಂದುಳಿದ ವರ್ಗ | ೧೧೮೨.೦೮ | ೬೭೯.೯ | ೧೦೧೨.೫೪ | ೪೬೯.೭೮ | ೦ | ೫೯೭.೨೩ | ೪೭೪.೧೪ | ೪೧೨.೭೬ |
| ೧೦ | ಸಾಮೂಹಿಕ ಭದ್ರತೆ | ೦ | ೬೨೯.೯ | ೦ | ೩೪೨.೭೨ | ೦ | ೪೨೧.೭೨ | ೧೧೦.೮೪ | ೮೫.೩೪ |
| ೧೧ | ಪೌಷ್ಠಿಕ ಆಹಾರ | ೦ | ೨೧೦.೯೩ | ೦ | ೨೮೮.೪೯ | ೦ | ೨೮೧.೦೦ | ೩೫.೦೦ | ೦ |
| ೧೨ | ಸಸ್ಯ ಸಂಗೋಪನೆ | ೧೨೮.೩೪ | ೧೩೬.೭೭ | ೧೪೫.೩೪ | ೧೪೪.೬೯ | ೧೬೮.೩೭ | ೧೫೭.೭೩ | ೨೪೬.೨೮ | ೨೪೩.೨೫ |
| ೧೩ | ಭೂಸಾರ ಸಂರಕ್ಷಣೆ | ೫೦.೩೨ | ೫೪.೧೬ | ೬೦.೬೭ | ೫೯.೨೨ | ೨೧.೯೧ | ೭೮.೧೧ | ೪೬.೨೦ | ೫೯.೪೫ |
| ೧೪ | ಪಶು ಸಂಗೋಪನೆ | ೨೦೩.೧೯ | ೧೭೯.೯೨ | ೧೬೫.೯೫ | ೧೬೪.೯೩ | ೧೮೯.೧೫ | ೧೯೨.೯೨ | ೧೦೯.೮೬ | ೧೦೦.೪೮ |
| ೧೫ | ಮೀನುಗಾರಿಕೆ | ೨೪.೬೯ | ೨೭.೦೧ | ೨೯.೦೬ | ೩೦.೫೧ | ೨೬.೨೮ | ೨೫.೬೯ | ೫೦.೩೨ | ೫೫.೨೦ |
| ೧೬ | ಅರಣ್ಯ | ೧೭.೪೦ | ೨೦.೨೩ | ೫೦.೯೪ | ೪.೫೭ | ೩೩.೪೪ | ೪೧.೨೦ | ೨೯.೦೦ | ೨೫.೬೨ |
| ೧೭ | ಸಹಕಾರ | ೨.೪೯ | ೨.೧೬ | ೨.೫೧ | ೨.೪೨ | ೨.೫೨ | ೧.೭೪ | ೧.೯೫ | ೧.೩೮ |
| ೧೮ | ಗ್ರಾಮೀಣ ಅಭಿವೃದ್ಧಿ ವಿಶೇಷ ಕಾರ್ಯಕ್ರಮ | ೦ | ೧೨೮.೧೩ | ೦ | ೧೩೪.೩೭ | ೦ | ೧೩೩.೪೫ | ೧೬೨.೧೧ | ೯೧.೩೮ |
| ೧೯ | ಗ್ರಾಮೀಣ ಉದ್ಯೋಗ | ೦ | | ೦ | ೩೭೬.೪೮ | ೦ | ೪೫೨.೯೮ | ೪೧೪.೩೦ | ೪೭.೭೫ |
| ೨೦ | ಇತರೆ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ | | ೯೯೮.೨೭ | ೧೦೦೯.೪೫ | ೪೭೫೯.೯ | ೧೧೨೦.೬೮ | ೪೫೮.೭೮ | ೩೮೩.೧೮ | ೨೮೦.೭೯ |
| ೨೧ | ಗುಡ್ಡಗಾಡು ಪ್ರದೇಶ | ೯೯.೫೮ | ೯೭.೬೭ | ೧೧೩.೧೧ | ೧೧೪.೨೭ | ೧೧೨.೨೪ | ೧೧೨.೯೫ | ೧೦೦.೫೬ | ೯೯.೫೩ |
| ೨೨ | ಸಣ್ಣ ನೀರಾವರಿ | ೨೫.೫೯ | ೨೮.೮೭ | ೨೪.೨೭ | ೩೬.೬೮ | ೬೬.೦೮ | ೫೬.೦೪ | ೧೭.೫೮ | ೧೦.೭೩ |
| ೨೩ | ರೂಢಿಯಲ್ಲಿಲ್ಲದ ಇಂಧನಗಳು | ೨.೦೨ | ೪.೭೫ | | ೫.೧೬ | ೪.೮೦ | ೪.೮೦ | ೦ | ೦ |
| ೨೪ | ಗ್ರಾಮೋದ್ಯೋಗ ಸಣ್ಣ ಕೈಗಾರಿಕೆ | ೩೭.೧೦ | ೨೯.೭೧ | ೨೫.೮೪ | ೨೬.೧೩ | ೨೭.೧೬ | ೨೭.೧೭ | ೩೪.೮೯ | ೩೬.೭೯ |
| ೨೫ | ಉದ್ಯಮ | ೦ | ೦ | ೦ | ೦ | ೦ | ೦ | ೧.೪೦ | ೫.೩೦ |
| ೨೬ | ರಸ್ತೆ ಮತ್ತು ಸೇತುವೆ | ೨೧೭.೨೮ | ೩೩೮.೭೧ | ೧೭೬.೫೬ | ೨೯೧.೦೦ | ೨೦೮.೧೫ | ೧೪೮.೯೫ | ೯೩.೮೧ | ೧೪೨.೮೬ |
| ೨೭ | ಸಚಿವಾಲಯ ಆರ್ಥಿಕ ಸೇವೆ | ೧೧.೩೦ | ೧೨.೧೫ | ೧೩.೩೪ | ೧೭.೨೬ | ೧೭.೦೨ | ೧೩.೫೨ | ೧೮.೨೧ | ೧೩.೨೪ |
| | ಒಟ್ಟು | ೧೧೩೩೦.೧೫ | ೧೧೫೧೯.೮೭ | ೧೧೦೨೩.೭೫ | ೧೧೨೮೪.೩೧ | ೧೧೫೪೫.೫೪ | ೧೧೫೭೨.೧೭ | ೬೩೩೬.೮೧ | ೫೮೪೨.೧೬ |

*ಆಧಾರ: ಜಿಲ್ಲಾ ಪಂಚಾಯಿತಿ, ಉಡುಪಿ.*

ರೂ.ಗಳನ್ನು, ೨೦೦೪–೦೫ರಲ್ಲಿ ೧೧,೫೭೨.೧೭ ಲಕ್ಷ ರೂ.ಗಳನ್ನು ಹಾಗೂ ೨೦೦೫–೦೬ರಲ್ಲಿ ೫,೮೪೨.೧೬ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗಿದೆ. ಈ ಯೋಜನೆಯ ಮೊದಲ ನಾಲ್ಕು ವರ್ಷಗಳ ಅವಧಿಯಲ್ಲಿ ವಲಯವಾರು ಮಂಜೂರು ಮಾಡಿದ ಅನುದಾನ ಹಾಗೂ ವೆಚ್ಚವನ್ನು ಕೋಷ್ಟಕ ೮.೩೨ರಲ್ಲಿ ನೀಡಲಾಗಿದೆ.

## ಬಡತನ ನಿವಾರಣೆ

ಬಡತನ ಒಂದು ಸಾಪೇಕ್ಷ ಅಂಶವಾಗಿದ್ದು, ಇದನ್ನು ಭೌತಿಕ ಅಂಶಗಳ ಆಧಾರದ ಮೇಲೆ ವ್ಯಕ್ತಪಡಿಸಲಾಗುತ್ತದೆ. ವಿಶ್ವ ಆಹಾರ ಮತ್ತು ಕೃಷಿ ಸಂಘಟನೆಯ ಮೊದಲ ಮಹಾ ನಿರ್ದೇಶಕರಾಗಿದ್ದ ಲಾರ್ಡ್ ಬಾಯಿಡಾರ್ ಅವರು ೧೯೪೫ರಲ್ಲಿ ಮೊದಲ ಬಾರಿಗೆ ಬಡತನದ ರೇಖೆಯನ್ನು ವ್ಯಾಖ್ಯಾನಿಸುತ್ತಾ, 'ಒಬ್ಬ ವ್ಯಕ್ತಿ ಒಂದು ದಿನಕ್ಕೆ ೨೩೦೦ಕ್ಕಿಂತಲೂ ಕಡಿಮೆ ಕ್ಯಾಲರಿ ಆಹಾರವನ್ನು ಸೇವಿಸುತ್ತಿದ್ದರೆ ಆತ ಬಡತನದ ರೇಖೆಗಿಂತಲೂ ಕೆಳಗಿದ್ದಾನೆಂದು ಪರಿಣಿಸಬೇಕಾಗುತ್ತದೆ' ಎಂದು ತಿಳಿಸಿರುವರು. ಭಾರತದ ಯೋಜನಾ ಆಯೋಗದ ಮೇರೆಗೆ ದಿನವೊಂದಕ್ಕೆ ಗ್ರಾಮೀಣ ಪ್ರದೇಶಗಳಲ್ಲಿ ಕನಿಷ್ಟ ೨,೪೦೦ ಕ್ಯಾಲರಿ ಹಾಗೂ ಪಟ್ಟಣ ಪ್ರದೇಶಗಳಲ್ಲಿ ೨,೧೦೦ ಕ್ಯಾಲರಿಗಿಂತಲೂ ಕಡಿಮೆ ಆಹಾರ ಸೇವಿಸುತ್ತಿರುವವರನ್ನು ಬಡತನ ರೇಖೆಗಿಂತಲೂ ಕೆಳಗಿರುವವರೆಂದು ಪರಿಗಣಿಸಲಾಗುತ್ತದೆ. ಮಿತಿ ಮೀರಿ ಬೆಳೆಯುತ್ತಿರುವ ಜನಸಂಖ್ಯೆ, ಆದಾಯ ಅಸಮಾನತೆ, ಕಡಿಮೆ ತಲಾದಾಯ, ನಿರುದ್ಯೋಗ, ಕನಿಷ್ಠ ಅನುಭೋಗ, ಪ್ರಾದೇಶಿಕ ಅಸಮತೋಲನ, ಹಿಂದುಳಿದ ತಂತಜ್ಞಾನ ಮತ್ತು ಬಂಡವಾಳದ ಕೊರತೆ ಮುಂತಾದ ಸಾಮಾಜಿಕ, ರಾಜಕೀಯ ಅಂಶಗಳು ಬಡತನಕ್ಕೆ ಕಾರಣಗಳಾಗಿವೆ. ಹಾಗಾಗಿ ಐದನೇ ಪಂಚವಾರ್ಷಿಕ ಯೋಜನೆಯಿಂದೀಚೆಗೆ ಬಡತನ ನಿರ್ಮೂಲನೆಯನ್ನು ಆರ್ಥಿಕ ಯೋಜನೆಯ ಒಂದು ಪ್ರಮುಖ ಧ್ಯೇಯವಾಗಿ ಅಳವಡಿಸಿಕೊಳ್ಳಲಾಗಿದೆ.

ಇಪ್ಪತ್ತನೇ ಶತಮಾನದ ಉತ್ತರಾರ್ಧದಲ್ಲಿ ಬಡಜನರ ಅನುಕೂಲಕ್ಕಾಗಿ ಅನೇಕ ವಿಶೇಷ ಯೋಜನೆಗಳನ್ನು ಜಾರಿಗೆ ತರಲಾಯಿತು. ಆದರೆ ಅವು ಅಷ್ಟೊಂದು ಪರಿಣಾಮಕಾರಿಯಾಗಿರಲಿಲ್ಲ. ಅಲ್ಲದೆ ವ್ಯಾಪಕವಾಗಿಯೂ ಇರಲಿಲ್ಲ. ಈ ಹಿನ್ನೆಲೆಯಲ್ಲಿ ಬಡತನದ ಮೇಲೆ ನೇರ ಆಕ್ರಮಣ ಮಾಡುವಂತಹ ವ್ಯಾಪಕ ಕಾರ್ಯಕ್ರಮಗಳಾದ ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ, ಸಂಪೂರ್ಣ ಗ್ರಾಮೀಣ ರೋಜ್‌ಗಾರ್ ಯೋಜನೆ, ಇಂದಿರಾ ಆವಾಸ್ ಯೋಜನೆ, ಅಂಬೇಡ್ಕರ್ ವಸತಿ ಯೋಜನೆ, ನವಗ್ರಾಮ ಯೋಜನೆ, ಪಶ್ಚಿಮಘಟ್ಟ ಅಭಿವೃದ್ಧಿ ಯೋಜನೆ, ಜವಾಹರ್ ಗ್ರಾಮ ಸಮೃದ್ಧಿ ಯೋಜನೆ, ಉದ್ಯೋಗ ಭರವಸೆ ಯೋಜನೆ, ನಿರ್ಮಲ ಗ್ರಾಮ ಯೋಜನೆ, ಸ್ವಚ್ಛಗ್ರಾಮ ಯೋಜನೆ, ರಾಷ್ಟ್ರೀಯ ಸುಧಾರಿತ ಒಲೆ ಕಾರ್ಯಕ್ರಮ, ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆ, ಮತ್ತಿತರ ಯೋಜನೆಗಳನ್ನು ಜಾರಿಗೆ ತರಲಾಯಿತು. ಉಡುಪಿ ಜಿಲ್ಲೆಯಲ್ಲಿ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಇಲಾಖೆಯು ಜಾರಿಗೆ ತಂದಿರುವ ಪ್ರದೇಶಾಭಿವೃದ್ಧಿ ಯೋಜನೆಯ (ಎ.ಡಿ.ಪಿ.) ಕಾರ್ಯಕ್ರಮಗಳ ಸಂಕ್ಷಿಪ್ತ ವಿವರವನ್ನು ಮುಂದೆ ನೀಡಲಾಗಿದೆ.

### ಅ) ಜವಾಹರ್ ಗ್ರಾಮ ಸಮೃದ್ಧಿ ಯೋಜನೆ (ಜೆ.ಜಿ.ಎಸ್.ವೈ)

ಜವಾಹರ್ ಗ್ರಾಮ ಸಮೃದ್ಧಿ ಯೋಜನೆಯು ೧೯೯೯ರ ಏಪ್ರಿಲ್‌ನಿಂದ ಜಾರಿಗೆ ಬಂದಿದೆ. ಗ್ರಾಮೀಣ ಪ್ರದೇಶಗಳಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕೂಲಿ ಕಾರ್ಮಿಕರಿಗೆ ಉದ್ಯೋಗವನ್ನು ಒದಗಿಸುವುದು, ಗ್ರಾಮೀಣ ಪ್ರದೇಶಗಳಲ್ಲಿ ಸ್ಥಳೀಯ ಬೇಡಿಕೆಗೆ ಅನುಗುಣವಾಗಿ ಮೂಲಭೂತ ಸೌಕರ್ಯ ಮತ್ತು ಆಸ್ತಿಗಳನ್ನು ನಿರ್ಮಾಣ ಮಾಡುವುದು ಈ ಯೋಜನೆಯ ಪ್ರಧಾನ ಉದ್ದೇಶಗಳಾಗಿವೆ. ಈ ಯೋಜನೆಯನ್ನು ಸಂಪೂರ್ಣವಾಗಿ ಗ್ರಾಮಪಂಚಾಯ್ತಿ ಮಟ್ಟದಲ್ಲಿ ಜಾರಿಗೊಳಿಸಲಾಗಿದೆ. ಗ್ರಾಮೀಣ ಜನತೆಗೆ ಅವಶ್ಯಕವಾಗಿ ಬೇಕಾಗುವ ಮೂಲಭೂತ ಸೌಕರ್ಯಗಳು, ಹರಿಜನ–ಗಿರಿಜನರಿಗೆ ಮನೆಗಳ ನಿರ್ಮಾಣ, ರಸ್ತೆ ಸಂಪರ್ಕ, ಸೇತುವೆ ನಿರ್ಮಾಣ ಮುಂತಾದ ಕಾಮಗಾರಿಗಳನ್ನು ಅನುಷ್ಠಾನಗೊಳಿಸುತ್ತಿದೆ. ಈ ಯೋಜನೆಗೆ ೭೫:೨೫ರ ಅನುಪಾತದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕ್ರಮವಾಗಿ ಅನುದಾನ ನೀಡುತ್ತವೆ. ಈ ಯೋಜನೆಯಲ್ಲಿ ೧೯೯೯–೨೦೦೦ದಲ್ಲಿ ೧೫೮.೧೦ ಲಕ್ಷ ರೂ.ಗಳನ್ನು ವೆಚ್ಚ ಮಾಡಿ,

೨.೨೯ಲಕ್ಷ ಮಾನವ ದಿನಗಳನ್ನು ಸೃಷ್ಟಿಸಲಾಯಿತು. ಹಾಗೆಯೇ ೨೦೦೧–೦೨ರಲ್ಲಿ ೧೦೧.೧೧ ಲಕ್ಷ ರೂ.ಗಳನ್ನು ವೆಚ್ಚ ಮಾಡಿ, ೨.೪೫ ಲಕ್ಷ ಮಾನವ ದಿನಗಳನ್ನು ಸೃಷ್ಟಿಸಲಾಯಿತು.

**ಕೋಷ್ಟಕ ೮.೩೩ : ಉದ್ಯೋಗ ಭರವಸೆ ಯೋಜನಾ ಪ್ರಗತಿ**

| ವರ್ಷಗಳು | ಭೌತಿಕ (ಲಕ್ಷ ಮಾನವ ದಿನಗಳು) | | ಆರ್ಥಿಕ (ಲಕ್ಷ ರೂ.ಗಳಲ್ಲಿ) | |
|---|---|---|---|---|
| | ಗುರಿ | ಸಾಧನೆ | ಗುರಿ | ಸಾಧನೆ |
| ೧೯೯೮–೧೯೯೯ | – | ೫.೦೦ | ೩೦೦.೦೦ | ೨೧೬.೬೨ |
| ೧೯೯೯–೨೦೦೦ | ೬.೦೦ | ೪.೩೬ | ೩೦೦.೦೦ | ೨೪೨.೦೦ |
| ೨೦೦೦–೨೦೦೧ | ೨.೦೦ | ೧.೯೭ | ೧೫೦.೦೦ | ೧೪೦.೩೬ |
| ೨೦೦೧–೨೦೦೨ | ೩.೫೦ | ೩.೨೭ | ೧೭೮.೧೦ | ೧೪೮.೫೭ |

## ಆ) ಉದ್ಯೋಗ ಭರವಸೆ ಯೋಜನೆ (ಇ.ಎ.ಎಸ್.)

ಕೃಷಿ ಕೆಲಸಗಳು ಕಡಿಮೆ ಇರುವ ಕಾಲದಲ್ಲಿ ಉದ್ಯೋಗ ಒದಗಿಸುವ, ಸಮುದಾಯ ಆಸ್ತಿಗಳನ್ನು ಸೃಜಿಸುವ ಮುಖ್ಯ ಉದ್ದೇಶಗಳೊಂದಿಗೆ ೧೯೯೬–೯೭ರಲ್ಲಿ ಈ ಯೋಜನೆಯನ್ನು ಜಾರಿಗೆ ತರಲಾಯಿತು. ಈ ಯೋಜನೆಯಂತೆ ಕನಿಷ್ಠ ೧೮ ವರ್ಷಕ್ಕೆ ಮೇಲ್ಪಟ್ಟು ೬೦ ವರ್ಷಕ್ಕಿಂತ ಕಡಿಮೆ ವಯಸ್ಸಿನ ಸ್ತ್ರೀ–ಪುರುಷರಿಗೆ ೧೦೦ ಮಾನವ ದಿನಗಳ ಕೆಲಸವನ್ನು ಕನಿಷ್ಟ ವೇತನಕ್ಕೆ ಅನುಗುಣವಾಗಿ ನೀಡಲಾಗುವುದು. ಈ ಯೋಜನೆಯ ವೆಚ್ಚವನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ೮೦:೨೦ರ ಅನುಪಾತದಲ್ಲಿ ಭರಿಸುತ್ತವೆ. ಜಿಲ್ಲಾ ಹಾಗೂ ತಾಲೂಕುಮಟ್ಟದಲ್ಲಿ ಕ್ರಮವಾಗಿ ಶೇಕಡಾ ೨೦ ಮತ್ತು ಶೇಕಡಾ ೭೦ರಂತೆ ಅನುದಾನ ಹಂಚಿಕೆ ಮಾಡಲಾಗಿದೆ. ಈ ಯೋಜನೆಯಲ್ಲಿ ಆದ ಪ್ರಗತಿಯನ್ನು ಕೋಷ್ಟಕ ೮.೩೩ದಲ್ಲಿ ನೀಡಲಾಗಿದೆ.

## ಇ) ಸಂಪೂರ್ಣ ಗ್ರಾಮೀಣ ರೋಜ್‌ಗಾರ್ ಯೋಜನೆ (ಎಸ್.ಜಿ.ಆರ್.ವೈ)

ಈ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿ ೨೫ನೇ ಸೆಪ್ಟೆಂಬರ್ ೨೦೦೧ರಂದು ಜಾರಿಗೆ ಬಂದಿದೆ. ಎಲ್ಲಾ ಉದ್ಯೋಗ ಸೃಷ್ಟಿಸುವ ಯೋಜನೆಗಳು ಎಸ್.ಜಿ.ಆರ್.ವೈ ಯೋಜನೆಯ ಭಾಗವಾಗಿ ಮುಂದುವರೆದು ಎಲ್ಲಾ ಹಂತಗಳಲ್ಲಿ ಪಂಚಾಯತ್‌ರಾಜ್ ಸಂಸ್ಥೆ (ಪಿ.ಆರ್.ಐ)ಗಳ ಮೂಲಕ ಅನುಷ್ಠಾನ ಗೊಳ್ಳುತ್ತವೆ. ಗ್ರಾಮ ಸಮುದಾಯದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಮೂಲ ರಚನಾ ಸೌಕರ್ಯ ಗಳನ್ನು ಸ್ಥಾಪಿಸುತ್ತಾ ಗ್ರಾಮೀಣ ಪ್ರದೇಶಗಳಲ್ಲಿ ವೇತನ ಸಿಗುವ ಉದ್ಯೋಗಾವಕಾಶಗಳನ್ನು ಹಾಗೂ ಆಹಾರ ಭದ್ರತೆಯನ್ನು ಸ್ಥಾಪಿಸುವುದೇ ಈ ಕಾರ್ಯಕ್ರಮದ ಉದ್ದೇಶವಾಗಿದೆ. ಈ ಯೋಜನೆಯಡಿ ಮಹಿಳೆಯರಿಗೆ, ಪರಿಶಿಷ್ಟ ಜಾತಿ, ಬುಡಕಟ್ಟು ಜನಾಂಗ ಹಾಗೂ ಅಪಾಯಕಾರಿ ಉದ್ಯಮಗಳಲ್ಲಿ ಕೆಲಸ ಮಾಡುತ್ತಿರುವ ಮಕ್ಕಳನ್ನು ಅಂತಹ ಕೆಲಸಗಳಿಂದ ಹಿಂತೆಗೆಸಿಕೊಂಡ ತಂದೆ–ತಾಯಿಯರಿಗೆ ವೇತನ ಸಿಗುವ ಉದ್ಯೋಗಾವಕಾಶ ಒದಗಿಸುವಲ್ಲಿ ಹೆಚ್ಚಿನ ಆದ್ಯತೆ ನೀಡಲಾಗುವುದು. ಈ ಕಾರ್ಯಕ್ರಮಗಳನ್ನು ಪಂಚಾಯತ್ ರಾಜ್ ಸಂಸ್ಥೆಗಳ ಮೂಲಕ ಜಿಲ್ಲಾ ಮಟ್ಟದಲ್ಲಿ, ಮಧ್ಯಂತರ ಮಟ್ಟದಲ್ಲಿ ಮತ್ತು ಗ್ರಾಮ ಮಟ್ಟದಲ್ಲಿ ಅನುಷ್ಠಾನಗೊಳಿಸಲಾಗುವುದು. ಇದಕ್ಕಾಗಿ ಬೇಕಾಗುವ ಸಂಪನ್ಮೂಲಗಳನ್ನು ಈ ಮೂರು ಹಂತಗಳಲ್ಲಿ ಕ್ರಮವಾಗಿ ೨೦:೩೦:೫೦ ರಂತೆ ಹಂಚಿಕೆ ಮಾಡಲಾಗುವುದು. ಈ ಯೋಜನೆಗೆ ಸರ್ಕಾರದಿಂದ ನಗದು ಅನುದಾನ ಮತ್ತು ಆಹಾರ ಧಾನ್ಯ ಬಿಡುಗಡೆಯಾಗಿದ್ದು, ಕೂಲಿಕಾರರಿಗೆ ಆಹಾರ ಧಾನ್ಯ ಮತ್ತು ನಗದು ಮೊತ್ತದೊಂದಿಗೆ ಸರ್ಕಾರದ ಅನುಮೋದಿತ ಕೂಲಿ ದರದಲ್ಲಿ ಕೂಲಿ ಮೊತ್ತವನ್ನು ಪಾವತಿಸಲಾಗುತ್ತದೆ. ಜಿಲ್ಲಾ ಪಂಚಾಯತ್ ಹಾಗೂ ತಾಲೂಕು

**ಕೋಷ್ಟಕ ೮.೩೪ : ಸಂಪೂರ್ಣ ಗ್ರಾಮೀಣ ರೋಜ್‌ಗಾರ್ ಯೋಜನಾ ವಿವರ**

| ವರ್ಷಗಳು | ಬಿಡುಗಡೆಯಾದ ಅನುದಾನ (ಲಕ್ಷ ರೂ.ಗಳಲ್ಲಿ) | ಖರ್ಚು (ಲಕ್ಷ ರೂ.ಗಳಲ್ಲಿ) | ಸೃಷ್ಟಿಸಿದ ಮಾನವ ದಿನಗಳು (ಲಕ್ಷಗಳಲ್ಲಿ) |
|---|---|---|---|
| ೨೦೦೨–೦೩ | ೪೪೫.೫೪ | ೪೩೦.೩೭೦ | ೩.೯೪೦ |
| ೨೦೦೩–೦೪ | ೪೦೨.೪೭೦ | ೩೬೫.೫೬ | ೬.೫೮೦ |
| ೨೦೦೪–೦೫ | ೪೨೩.೦೪ | ೪೨೪.೧೯೦ | ೮.೫೪ |
| ೨೦೦೫–೦೬ | ೪೯೧.೫೯೩ | ೪೭೬.೬೪ | ೬.೦೨ |

ಪಂಚಾಯತ್ ಕಾರ್ಯಕ್ರಮದಲ್ಲಿ ಶೇ. ೨೨.೫ ರಷ್ಟು ಅನುದಾನವನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ವೈಯಕ್ತಿಕ ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳಿಗೂ, ಶೇ. ೪೦ರಷ್ಟನ್ನು ನೆಲ ಜಲ ಸಂರಕ್ಷಣಾ ಕಾಮಗಾರಿಗಳಿಗೆ ಹಂಚಿಕೆ ಮಾಡಿ ಕ್ರಿಯಾಯೋಜನೆಯನ್ನು ತಯಾರಿಸಿ ಅನುಮೋದನೆ ಪಡೆಯಲಾಗುವುದು. ಗ್ರಾಮ ಪಂಚಾಯತ್ ಕಾರ್ಯಕ್ರಮದಲ್ಲಿ ಶೇ. ೫೦ರಷ್ಟು ಅನುದಾವನ್ನು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದವರ ಸಮುದಾಯಾಧಾರಿತ ಕಾಮಗಾರಿಗಳಿಗೆ ಹಾಗೂ ಶೇಕಡಾ ೪೦ ರಷ್ಟನ್ನು ನೆಲ–ಜಲ ಸಂರಕ್ಷಣಾ ಕಾಮಗಾರಿಗಳಿಗೆ ಹಂಚಿಕೆ ಮಾಡಿ ಕ್ರಿಯಾಯೋಜನೆಯನ್ನು ತಯಾರಿಸಿ ಗ್ರಾಮ ಸಭೆಯ ಅನುಮೋದನೆಯೊಂದಿಗೆ ಅನುಷ್ಠಾನಗೊಳಿಸಲಾಗುವುದು. ಈ ಯೋಜನೆಯಡಿ ಮಾಡಿದ ಖರ್ಚು, ಸೃಷ್ಟಿಸಿದ ಮಾನವ ದಿನಗಳನ್ನು ಕೋಷ್ಟಕ ೮.೩೪ರಲ್ಲಿ ನೀಡಿದೆ.

## ಈ) ಇಂದಿರಾ ಆವಾಸ್ ಯೋಜನೆ (ಐ.ಎ.ವೈ.)

ಈ ಯೋಜನೆಯಡಿ ಗ್ರಾಮೀಣ ಪ್ರದೇಶಗಳಲ್ಲಿ ಬಡತನ ರೇಖೆಗಿಂತ ಕೆಳಗಿರುವ ಶೇ. ೬೦ ರಷ್ಟು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಾಗೂ ಶೇ. ೪೦ರಷ್ಟು ಇತರೆ ವರ್ಗದ ಫಲಾನುಭವಿಗಳಿಗೆ ಮನೆಗಳನ್ನು ಕಟ್ಟಿಕೊಳ್ಳಲು ಆರ್ಥಿಕ ನೆರವು ಒದಗಿಸಲಾಗುತ್ತದೆ. ಫಲಾನುಭವಿಗಳನ್ನು ಗ್ರಾಮಸಭೆಗಳ ಮೂಲಕ ಆಯ್ಕೆ ಮಾಡಲಾಗುತ್ತದೆ. ಈ ಯೋಜನೆಗೆ ೭೫:೨೫ರ ಅನುಪಾತದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು

**ಕೋಷ್ಟಕ ೮.೩೫ : ಇಂದಿರಾ ಆವಾಸ್ ಯೋಜನಾ ವಿವರ**

| ವರ್ಷಗಳು | ಭೌತಿಕ (ಸಂಖ್ಯೆಗಳಲ್ಲಿ) | | ಆರ್ಥಿಕ (ಲಕ್ಷ ರೂ.ಗಳಲ್ಲಿ) | |
|---|---|---|---|---|
| | ಗುರಿ | ಸಾಧನೆ | ಗುರಿ | ಸಾಧನೆ |
| ೧೯೯೮–೧೯೯೯ | ೫೨೪ | ೫೨೪ | ೭೦.೮೦ | ೭೦.೮೦ |
| ೧೯೯೯–೨೦೦೦ | ೩೪೨ | ೩೪೨ | ೭೦.೮೦ | ೭೦.೮೦ |
| ೨೦೦೦–೨೦೦೧ | ೪೦೩ | ೪೦೩ | ೭೬.೮೦ | ೭೬.೮೦ |
| ೨೦೦೧–೨೦೦೨ | ೪೮೫ | ೪೮೫ | ೯೦.೦೦ | ೯೦.೦೦ |
| ೨೦೦೨–೨೦೦೩ | ೬೭೪ | ೬೭೪ | ೯೨.೨೦ | ೯೨.೨೦ |
| ೨೦೦೩–೨೦೦೪ | ೧೦೦೮ | ೧೦೦೮ | ೧೩೭.೮೦ | ೧೩೭.೮೦ |
| ೨೦೦೪–೨೦೦೫ | ೮೮೬ | ೮೮೬ | ೧೮೩.೨೫ | ೧೮೩.೨೫ |
| ೨೦೦೫–೨೦೦೬ | ೭೫೩ | ೫೧೭ | ೧೧೮.೫೪ | ೧೧೬.೨೩ |

ಕ್ರಮವಾಗಿ ಅನುದಾನವನ್ನು ನೀಡುತ್ತವೆ. ಗ್ರಾಮ ಸಭೆಯಲ್ಲಿ ಆಯ್ಕೆಯಾದ ಅರ್ಹ ಫಲಾನುಭವಿಗಳಿಗೆ ವಾಸದ ಹೊಸ ಮನೆಗಳ ನಿರ್ಮಾಣಕ್ಕಾಗಿ ಪ್ರಸ್ತುತ ಗರಿಷ್ಟ ೨೫,೦೦೦ ರೂ.ಗಳನ್ನು, ಮನೆಗಳ ನವೀಕರಣಕ್ಕಾಗಿ ಗರಿಷ್ಟ ೧೨,೫೦೦ ರೂ.ಗಳ ಅನುದಾನವನ್ನು ಒದಗಿಸಲಾಗುತ್ತಿದೆ. ನಿಗದಿಪಡಿಸಿದ ಒಟ್ಟು ಭೌತಿಕ ಗುರಿಯಲ್ಲಿ ಕನಿಷ್ಟ ಶೇ.೬೦ರಷ್ಟನ್ನು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಹಂಚಿಕೆ ಮಾಡಬೇಕಾಗಿರುತ್ತದೆ. ಹಾಗೆಯೇ ಒಟ್ಟು ಅನುದಾನದಲ್ಲಿ ಶೇ. ೧೦ರಷ್ಟನ್ನು ನವೀಕರಣ ಕಾಮಗಾರಿಗೆ ಬಳಸಿಕೊಳ್ಳಲು ಅವಕಾಶವಿರುತ್ತದೆ. ಆಯ್ಕೆಯಾದ ಫಲಾನುಭವಿಯು ಕನಿಷ್ಟ ೨೦ ಚದರ ಮೀಟರ್ ವಿಸ್ತೀರ್ಣದ ಮನೆಗಳನ್ನು ನಿರ್ಮಿಸುವುದು ಕಡ್ಡಾಯವಾಗಿದೆ. ಈ ಯೋಜನೆಯಡಿಯಲ್ಲಿ ೧೯೯೮–೯೯ ರಿಂದ ೨೦೦೫–೦೬ರ ವರೆಗೆ ಆದ ಭೌತಿಕ ಮತ್ತು ಆರ್ಥಿಕ ಸಾಧನೆಯನ್ನು ಕೋಷ್ಟಕ–೮.೩೫ ರಲ್ಲಿ ನೀಡಲಾಗಿದೆ.

## ಉ) ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ (ಎಸ್.ಜಿ.ಎಸ್.ವೈ.)

ಸ್ವ–ಉದ್ಯೋಗ ಕಾರ್ಯಕ್ರಮದಡಿಯಲ್ಲಿ ಈ ಯೋಜನೆಯಲ್ಲಿ ಸಮಗ್ರ ಗ್ರಾಮೀಣಾಭಿವೃದ್ಧಿ ಯೋಜನೆ (ಐ.ಆರ್.ಡಿ.ಪಿ.), ಗ್ರಾಮೀಣ ಯುವಕ/ಯುವತಿಯರಿಗೆ ಸ್ವಯಂ ಉದ್ಯೋಗಕ್ಕಾಗಿ ತರಬೇತಿ (ಟ್ರೈಸಂ), ಗ್ರಾಮೀಣ ಪ್ರದೇಶಗಳಲ್ಲಿ ಮಹಿಳೆಯರ ಹಾಗೂ ಮಕ್ಕಳ ಅಭಿವೃದ್ಧಿ ಯೋಜನೆ (ಡ್ವಾಕ್ರಾ), ಗ್ರಾಮೀಣ ಕುಶಲಕರ್ಮಿಗಳಿಗೆ ಸುಧಾರಿತ ಉಪಕರಣಗಳ ಸರಬರಾಜು (ಸಿಟ್ರಾ), ಗಂಗಾ ಕಲ್ಯಾಣ ಯೋಜನೆ (ಜೆ.ಕೆ.ವೈ) ದಶಲಕ್ಷ ಬಾವಿ ಯೋಜನೆ (ಎಂ.ಡಬ್ಲ್ಯೂ.ಎಸ್.) ಮುಂತಾದ ಉದ್ಯೋಗ ಯೋಜನೆಗಳನ್ನು

ವಿಲೀನಗೊಳಿಸಿ ೧೯೯೯–೨೦೦೦ ದಿಂದ ಜಾರಿಗೆ ತರಲಾಯಿತು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕ್ರಮವಾಗಿ ಶೇ. ೭೫:೨೫ರ ಅನುಪಾತದಲ್ಲಿ ಅನುದಾನವನ್ನು ಭರಿಸುತ್ತವೆ.

ಗ್ರಾಮೀಣ ಬಡಜನರನ್ನು (ಬಡತನ ರೇಖೆಗಿಂತ ಕೆಳಗಿರುವ ಕುಟುಂಬದವರನ್ನು) ಸ್ವ ಸಹಾಯ ಗುಂಪುಗಳಾಗಿ ರೂಪಿಸಿ, ಅವರಿಗೆ ತರಬೇತಿ, ಸಾಲ, ತಂತ್ರಜ್ಞಾನ, ಮೂಲಭೂತ ಸೌಕರ್ಯ ಹಾಗೂ ಮಾರುಕಟ್ಟೆಯಂತಹ ಸೌಲಭ್ಯಗಳನ್ನು ಒದಗಿಸುವುದು ಈ ಯೋಜನೆಯ ಉದ್ದೇಶವಾಗಿದೆ. ಈ ಯೋಜನೆಯಡಿ

**ಕೋಷ್ಟಕ ೮.೩೬ : ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನಾ ವಿವರ**

| ವರ್ಷಗಳು | ಬಿಡುಗಡೆಯಾದ ಅನುದಾನ | ಖರ್ಚು (ಲಕ್ಷ ರೂ.ಗಳಲ್ಲಿ) | ಫಲಾನುಭವಿಗಳು (ಸಂಖ್ಯೆಯಲ್ಲಿ) |
|---|---|---|---|
| ೧೯೯೯–೦೦ | ೮೯.೫೩ | ೮೦.೦೩ | ೭೭೦ |
| ೨೦೦೦–೦೧ | ೯೭.೦೨ | ೧೧೩.೦೮ | ೧೧೧೭ |
| ೨೦೦೧–೦೨ | ೮೮.೩೩ | ೧೦೦.೧೨ | ೮೭೮ |
| ೨೦೦೨–೦೩ | ೧೦೭.೬೧ | ೧೦೯.೪೫ | ೯೬೩ |
| ೨೦೦೩–೦೪ | ೧೦೬.೭೯ | ೧೧೧.೯೫ | ೧೦೫೫ |
| ೨೦೦೪–೦೫ | ೧೧೮.೧೪೯ | ೧೧೦.೩೩೬ | ೮೭೧ |
| ೨೦೦೫–೦೬ | ೯೪.೫೨ | ೯೯.೬೦ | ೮೧೯ |

ಗ್ರಾಮೀಣ ಪ್ರದೇಶದಲ್ಲಿ ಲಭ್ಯವಿರುವ ಮೂಲಭೂತ ಸೌಕರ್ಯಗಳನ್ನು ಗಮನದಲ್ಲಿರಿಸಿಕೊಂಡು ಆಯಾ ಪ್ರದೇಶದಲ್ಲಿ ಮುಖ್ಯ ಕಾರ್ಯ ಚಟುವಟಿಕೆಗಳನ್ನು ಗುರುತಿಸಿ, ಅಂತಹ ಚಟುವಟಿಕೆಗಳನ್ನು ಕೈಗೊಳ್ಳುವ ಸಲುವಾಗಿ ಫಲಾನುಭವಿಗಳನ್ನು ಆಯ್ಕೆ ಮಾಡಿ, ಆಯ್ಕೆಯಾದ ಫಲಾನುಭವಿಗಳಿಗೆ ಬ್ಯಾಂಕ್‌ಗಳ ಮೂಲಕ ಸಾಲ ಹಾಗೂ ಸರಕಾರದ ಸಹಾಯಧನ ಸೌಲಭ್ಯ ಒದಗಿಸುವ ಕಾರ್ಯಕ್ರಮವಾಗಿರುತ್ತದೆ. ಎಸ್.ಜಿ.ಎಸ್.ವೈ. ಯೋಜನೆಯಡಿ ನಿಗದಿಪಡಿಸಿದ ಒಟ್ಟು ಗುರಿಯಲ್ಲಿ ಶೇ. ೭೫ ಗುಂಪು ಚಟುವಟಿಕೆಗಳಿಗೆ ಹಾಗೂ ಉಳಿದ ಶೇ. ೨೫ ವೈಯಕ್ತಿಕ ಫಲಾನುಭವಿಗಳಿಗೂ ನಿಗದಿಪಡಿಸಿ ಕಾರ್ಯಕ್ರಮವನ್ನು ಅನುಷ್ಠಾನ ಮಾಡಲಾಗಿದೆ. ಒಟ್ಟು ಗುರಿಯಲ್ಲಿ ಶೇ.೪೦ ರಷ್ಟನ್ನು ಮಹಿಳೆಯರಿಗೆ ನಿಗದಿಪಡಿಸಬೇಕಾಗಿದ್ದು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಂಗವಿಕಲರು ಹಾಗೂ ಅಲ್ಪಸಂಖ್ಯಾತರಿಗೆ ಶೇಕಡಾವಾರು ಗುರಿ ನಿಗದಿಪಡಿಸಿ ಕ್ರಿಯಾ ಯೋಜನೆಯನ್ನು ತಯಾರಿಸಲಾಗಿದೆ. ಈ ಯೋಜನೆಯಲ್ಲಿ ೧೯೯೯–೨೦೦೦ ದಿಂದ ೨೦೦೫–೦೬ರ ವರೆಗೆ ಆದ ಖರ್ಚು ಮತ್ತು ಫಲಾನುಭವಿಗಳ ವಿವರಗಳನ್ನು ಕೋಷ್ಟಕ ೮.೩೬ದಲ್ಲಿ ನೀಡಲಾಗಿದೆ.

**ಕೋಷ್ಟಕ ೮.೩೭ : ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಕಾರ್ಯಕ್ರಮ ವಿವರ**

| ವರ್ಷಗಳು | ಭೌತಿಕ (ಸಂಖ್ಯೆಗಳಲ್ಲಿ) | | ಆರ್ಥಿಕ (ಲಕ್ಷ ರೂ.ಗಳಲ್ಲಿ) | |
|---|---|---|---|---|
| | ಗುರಿ | ಸಾಧನೆ | ಗುರಿ | ಸಾಧನೆ |
| ೨೦೦೦–೦೧ | ೧೨೫ | ೮೦ | ೮.೭೫ | ೫.೫೮ |
| ೨೦೦೧–೦೨ | ೫೦೦ | ೮೭ | ೩೫.೦೦ | ೫.೨೨ |
| ೨೦೦೨–೦೩ | ೧೦೦ | ೯೧ | ೫.೭೪ | ೫.೬೧ |
| ೨೦೦೩–೦೪ | ೪೦೦ | ೧೩೨ | ೧೨.೪೦ | ೭.೨೨ |
| ೨೦೦೪–೦೫ | ೨೦೦ | ೮೬ | ೯.೬೧ | ೬.೪೯ |
| ೨೦೦೫–೦೬ | ೨೦೦ | – | ೭.೦೦ | – |

### ಊ) ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಕಾರ್ಯಕ್ರಮ (ಎನ್.ಪಿ.ಬಿ.ಡಿ)

ಗ್ರಾಮೀಣ ಇಂಧನ ಕಾರ್ಯಕ್ರಮಗಳಲ್ಲಿ ಈ ಯೋಜನೆ ಮಹತ್ವ ಪಡೆದಿದ್ದು, ಅಸಂಪ್ರದಾಯಕ ಇಂಧನ ಮೂಲಗಳ ಉಪಯೋಗವನ್ನು ಜನಪ್ರಿಯಗೊಳಿಸಲು, ಅಡಿಗೆಗಾಗಿ ಉಪಯೋಗಿಸಲಾಗುತ್ತಿರುವ ಸೌದೆ ಬಳಕೆಯ ನಿಯಂತ್ರಣ ಹಾಗೂ ಅರಣ್ಯ ನಾಶವನ್ನು ತಡೆಗಟ್ಟುವ ಉದ್ದೇಶದೊಂದಿಗೆ ಈ ಯೋಜನೆಯನ್ನು ೧೯೮೨–೮೩ ರಿಂದ ಜಾರಿಗೆ ತರಲಾಗಿದೆ. ವಿವಿಧ ಅಳತೆಗಳ ಸ್ಥಾವರಗಳಿಗೆ ಬೇರೆ ಬೇರೆ ಸಹಾಯಧನದ ಮೊತ್ತವನ್ನು ನಿಗದಿಪಡಿಸಲಾಗಿದೆ. ಉಡುಪಿ ಜಿಲ್ಲೆಯಲ್ಲಿ ಹೆಚ್ಚಿನ ಫಲಾನುಭವಿಗಳು ಸಣ್ಣ ಹಾಗೂ ಅತೀ ಸಣ್ಣ ರೈತರಾಗಿದ್ದು, ಮೂರು ಮತ್ತು ನಾಲ್ಕು ಘನ ಮೀಟರ್ ಅಳತೆಯ ಸ್ಥಾವರಗಳನ್ನು ನಿರ್ಮಿಸಿದ್ದು, ಈ ಸಲುವಾಗಿ ಕೇಂದ್ರದ ಪಾಲಿನ ೩,೫೦೦ ರೂ. ಮತ್ತು ರಾಜ್ಯದ ಪಾಲಿನ ೩,೫೦೦ ರೂ. ಸಹಾಯಧನವನ್ನು ಒದಗಿಸಲಾಗುತ್ತದೆ. ಈ ಯೋಜನೆಯಲ್ಲಿ ೨೦೦೦–೦೧ ರಿಂದ ೨೦೦೫–೦೬ರವರೆಗೆ ಆದ ಸಾಧನೆಯ ವಿವರಗಳನ್ನು ಕೋಷ್ಟಕ ೮.೩೭ರಲ್ಲಿ ನೀಡಲಾಗಿದೆ.

### ಋ) ರಾಷ್ಟ್ರೀಯ ಸುಧಾರಿತ ಒಲೆಗಳ ಕಾರ್ಯಕ್ರಮ (ಎನ್.ಸಿ.ಐ.ಸಿ.)

ಗ್ರಾಮೀಣ ಪ್ರದೇಶದ ಗೃಹಿಣಿಯರ ಆರೋಗ್ಯ ಕಾಪಾಡಲು, ಇಂಧನ ವೆಚ್ಚ ಕಡಿಮೆ ಮಾಡಲು ಹೊಗೆರಹಿತ ಒಲೆಗಳನ್ನು ಒದಗಿಸುವ ಉದ್ದೇಶದೊಂದಿಗೆ ಈ ಯೋಜನೆಯನ್ನು ೧೯೮೬–೮೭ ರಿಂದ ಜಾರಿಗೆ ತರಲಾಯಿತು. ಈ ಯೋಜನೆಯು ರಾಷ್ಟ್ರೀಯ ಕಾರ್ಯಕ್ರಮವಾಗಿದ್ದು, ಇಂಧನ ಉಳಿಸಲು ವಿನ್ಯಾಸಗೊಳಿಸಿರುವ ಸುಧಾರಿತ ಒಲೆಗಳನ್ನು ಎಲ್ಲಾ ವರ್ಗದ ಜನರು ಬಳಸಬಹುದಾಗಿದೆ. ಸುಧಾರಿತ ಒಲೆಗಳಿಂದಾಗಿ ಕಟ್ಟಿಗೆಯ ಉಳಿತಾಯ, ಅತಿಶೀಘ್ರವಾಗಿ ಹೊಗೆರಹಿತ ಅಡುಗೆಯನ್ನು ಮಾಡಬಹುದು. ಈ ಒಲೆಗಳಲ್ಲಿ ಸ್ಥಿರ ಮತ್ತು ಚರ ಒಲೆಗಳೆಂದು ಎರಡು ಬಗೆಗಳಿದ್ದು, ಚರ ಒಲೆಗಳನ್ನು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಕೊಂಡ್ಯೊಯ್ಯಬಹುದು. ಜಿಲ್ಲೆಯಲ್ಲಿ ಈ ಯೋಜನೆಯಡಿಯಲ್ಲಿ ೨೦೦೦–೦೧ರಲ್ಲಿ

**ಕೋಷ್ಟಕ ೮.೩೮ : ಸಮಗ್ರ ಗ್ರಾಮೀಣ ಇಂಧನ ಶಕ್ತಿ ಕಾರ್ಯಕ್ರಮ ವಿವರ**

| ವರ್ಷಗಳು | ಭೌತಿಕ (ಸಂಖ್ಯೆಗಳಲ್ಲಿ) | | ಆರ್ಥಿಕ (ಲಕ್ಷ ರೂ.ಗಳಲ್ಲಿ) | |
|---|---|---|---|---|
| | ಗುರಿ | ಸಾಧನೆ | ಗುರಿ | ಸಾಧನೆ |
| ೨೦೦೦–೦೧ | ೧೬೭ | ೧೬೭ | ೧೦.೦೦ | ೭.೬೫ |
| ೨೦೦೧–೦೨ | ೧೮೭ | ೧೮೪ | ೧೦.೦೦ | ೭.೨೦ |
| ೨೦೦೨–೦೩ | ೮೧ | ೬೪ | ೭.೪೩ | ೫.೧೪ |
| ೨೦೦೩–೦೪ | ೭೭ | – | ೭.೪೨ | ೧.೩೪ |
| ೨೦೦೪–೦೫ | – | – | ೪.೦೦ | ೩.೬೫ |
| ೨೦೦೫–೦೬ | – | – | ೨೦.೦೦ | ೧೦.೩೪ |

೨,೪೦೦ ಸುಧಾರಿತ ಒಲೆಗಳನ್ನು ಸ್ಥಾಪಿಸಲಾಗಿದ್ದು, ಇದಕ್ಕಾಗಿ ೨.೫೦ಲಕ್ಷ ರೂ.ಗಳನ್ನು ಖರ್ಚು ಮಾಡಲಾಯಿತು.

### ಎ) ಸಮಗ್ರ ಗ್ರಾಮೀಣ ಇಂಧನ ಶಕ್ತಿ ಕಾರ್ಯಕ್ರಮ (ಐ.ಆರ್.ಇ.ಪಿ)

ಸಾಂಪ್ರದಾಯಕ ಇಂಧನ ಶಕ್ತಿ ಮೂಲಗಳಾದ ವಿದ್ಯುತ್, ಸೀಮೆಎಣ್ಣೆ ಮತ್ತು ಸೌದೆ ಇವುಗಳ ಬಳಕೆಯಲ್ಲಿ ಮಿತವ್ಯಯ ಸಾಧಿಸುವ ಉಪಕರಣಗಳನ್ನು ಬಳಸುವುದು ಹಾಗೂ ಅಸಂಪ್ರದಾಯಕ, ಇಂಧನ ಶಕ್ತಿ ಮೂಲಗಳಾದ ಸೌರಶಕ್ತಿ, ಪವನಶಕ್ತಿ ಹಾಗೂ ಜೈವಾನಿಲ ಶಕ್ತಿಯನ್ನು ಹೆಚ್ಚು ಹೆಚ್ಚು ಬಳಸುವುದರ ಮೂಲಕ ಇಂಧನ ಶಕ್ತಿಯ ಕೊರತೆಯನ್ನು ನೀಗಿಸಲು ಐ.ಆರ್.ಇ.ಪಿ ಯೋಜನೆಯನ್ನು ೧೯೯೪–೯೫ರಲ್ಲಿ ಜಾರಿಗೆ ತರಲಾಯಿತು. ಒಟ್ಟು ಅನುದಾನದಲ್ಲಿ ಪ್ರಾತ್ಯಕ್ಷಿತೆ ಕಾರ್ಯಕ್ರಮ ಮತ್ತು ಸಿಬ್ಬಂದಿಗಳ

ವೇತನವೂ ಸೇರಿರುತ್ತದೆ. ೨೦೦೪-೦೫ನೇ ಸಾಲಿನಿಂದ ಈ ಯೋಜನೆಯನ್ನು ಆಯ್ದ ಗುಂಪು ಗ್ರಾಮಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು, ಅದರಂತೆ ೨೦೦೫-೦೬ನೇ ಸಾಲಿನಲ್ಲಿ ಉಡುಪಿ ತಾಲೂಕಿನ ವಡ್ಡರ್ಸೆ

**ಕೋಷ್ಟಕ : ೮.೩೯ : ಆಶ್ರಯ ಗ್ರಾಮೀಣ ಯೋಜನಾ ವಿವರ**

| ವರ್ಷಗಳು | ಭೌತಿಕ (ಸಂಖ್ಯೆಗಳಲ್ಲಿ) | | ಆರ್ಥಿಕ (ಲಕ್ಷ ರೂ.ಗಳಲ್ಲಿ) | |
|---|---|---|---|---|
| | ಗುರಿ | ಸಾಧನೆ | ಗುರಿ | ಸಾಧನೆ |
| ೧೯೯೮-೯೯ | ೧,೯೬೫ | ೧,೯೬೫ | ೩೯೩.೦೦ | ೩೯೩.೦೦ |
| ೧೯೯೯-೨೦೦೦ | – | – | – | – |
| ೨೦೦೦-೦೧ | ೩,೫೪೬ | ೩,೫೨೭ | ೭೦೯.೨೦ | ೭೦೪.೧೫ |
| ೨೦೦೧-೦೨ | ೨,೮೬೯ | ೨,೭೮೭ | ೫೭೩.೮೦ | ೫೬೫.೦೧ |
| ೨೦೦೨-೦೩ | ೧,೬೧೦ | ೧,೫೨೩ | ೩೨೨.೦೦ | ೩೧೬.೭೦ |
| ೨೦೦೩-೦೪ | ೧,೭೯೧ | ೧,೩೬೦ | ೩೫೮.೨೦ | ೩೨೧.೪೫ |

(ಪಂಚಾಯತ್‌ನ) ಗ್ರಾಮದಲ್ಲಿ ಯೋಜನೆ ಅನುಷ್ಠಾನಗೊಳ್ಳುತ್ತಿದೆ. ಈ ಯೋಜನೆಯಡಿಯಲ್ಲಿ ಆದ ವೆಚ್ಚದ ವಿವರಗಳನ್ನು ಕೋಷ್ಟಕ ೮.೩೮ರಲ್ಲಿ ನೀಡಲಾಗಿದೆ.

### ಏ) ಆಶ್ರಯ ಗ್ರಾಮೀಣ ಯೋಜನೆ

**ಕೋಷ್ಟಕ ೮.೪೦ : ಅಂಬೇಡ್ಕರ್ ಗ್ರಾಮೀಣ ಯೋಜನಾ ವಿವರ**

| ವರ್ಷಗಳು | ಭೌತಿಕ (ಸಂಖ್ಯೆಗಳಲ್ಲಿ) | | ಆರ್ಥಿಕ (ಲಕ್ಷ ರೂ.ಗಳಲ್ಲಿ) | |
|---|---|---|---|---|
| | ಗುರಿ | ಸಾಧನೆ | ಗುರಿ | ಸಾಧನೆ |
| ೧೯೯೮-೯೯ | ೨೨೯ | ೨೨೯ | ೪೫.೮೦ | ೪೫.೮೦ |
| ೧೯೯೯-೨೦೦೦ | ೨೪೩ | ೨೪೩ | ೪೮.೬೩ | ೪೮.೬೩ |
| ೨೦೦೦-೦೧ | ೨೫೦ | ೨೫೦ | ೫೦.೦೦ | ೪೯.೮೫ |
| ೨೦೦೧-೦೨ | ೨೩೩ | ೨೩೧ | ೪೬.೬೦ | ೪೬.೩೫ |
| ೨೦೦೨-೦೩ | ೨೯೦ | ೨೭೮ | ೫೮.೦೦ | ೫೭.೩೦ |
| ೨೦೦೩-೦೪ | ೧೪೬ | ೯೭ | ೨೯.೨೦ | ೨೪.೭೦ |

ಈ ಯೋಜನೆಯಡಿ ಶೇಕಡಾ ೪೦ರಷ್ಟು ಪರಿಶಿಷ್ಟ ಜಾತಿಗೂ, ಶೇಕಡಾ ೧೦ರಷ್ಟು ಪರಿಶಿಷ್ಟ ಪಂಗಡಕ್ಕೂ, ಶೇಕಡಾ ೫ರಷ್ಟು ಅಂಗವಿಕಲರು, ಮಾಜಿ ಸೈನಿಕರು, ಹಿರಿಯ ನಾಗರಿಕರಿಗೆ ಹಂಚಿಕೆ ಮಾಡಿ, ಫಲಾನುಭವಿಗಳನ್ನು ಗ್ರಾಮಸಭೆಗಳಲ್ಲಿ ಆಯ್ಕೆ ಮಾಡಲಾಗುವುದು. ಆಯ್ಕೆಯಾದ ಎಲ್ಲಾ ಫಲಾನುಭವಿಗಳು ಕಡ್ಡಾಯವಾಗಿ ಮಹಿಳೆಯರಾಗಿರಬೇಕು. ಪ್ರತಿ ಫಲಾನುಭವಿಗೆ ೨೦,೦೦೦ ರೂ.ಗಳನ್ನು ಮಂಜೂರು ಮಾಡಲಾಗಿದ್ದು, ಇದರಲ್ಲಿ ೧೦,೦೦೦ ರೂ.ಗಳು ಸಹಾಯಧನವಾಗಿದ್ದು, ಉಳಿದ ೧೦,೦೦೦ ರೂ.ಗಳನ್ನು ಬಡ್ಡಿ ಸೇರಿಸಿ, ತಿಂಗಳಿಗೆ ೧೧೫ ರೂ.ಗಳಂತೆ ೧೮೦ ಸಮ ಕಂತುಗಳಲ್ಲಿ ಪಾವತಿಸಬೇಕು. ಆದರೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ ಪೂರ್ಣ ಅನುದಾನವು ಸಹಾಯಧನವಾಗಿರುತ್ತದೆ. ಈ ಯೋಜನೆಯಲ್ಲಿ ೧೯೯೮-೯೯ ರಿಂದ ೨೦೦೩-೦೪ರವರೆಗೆ ಆದ ಗುರಿ ಮತ್ತು ಸಾಧನೆಯನ್ನು ಕೋಷ್ಟಕ ೮.೩೯ರಲ್ಲಿ ನೀಡಲಾಗಿದೆ.

### ಐ) ಅಂಬೇಡ್ಕರ್ ಗ್ರಾಮೀಣ ಯೋಜನೆ

ಈ ಯೋಜನೆಯಡಿಯಲ್ಲಿ ವಸತಿ ಸೌಲಭ್ಯ ಒದಗಿಸುವ ಉದ್ದೇಶ ಹೊಂದಲಾಗಿದ್ದು, ಈ ಸೌಲಭ್ಯಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮಾತ್ರ ಒದಗಿಸಲಾಗುವುದು. ಈ ಯೋಜನೆಯಡಿಯಲ್ಲಿ ಸಾಧಿಸಿದ ಪ್ರಗತಿಯ ವಿವರಗಳನ್ನು ಕೋಷ್ಟಕ ೮.೪೦ರಲ್ಲಿ ನೀಡಲಾಗಿದೆ.

### ಒ) ಸ್ವಚ್ಛ ಗ್ರಾಮ ಯೋಜನೆ

ಗ್ರಾಮಗಳ ಸಂಪೂರ್ಣ ನೈರ್ಮಲೀಕರಣಕ್ಕಾಗಿ ರಾಜ್ಯ ಸರ್ಕಾರ ಕೆಳಗಿನ ಉದ್ದೇಶಗಳೊಂದಿಗೆ ಈ ಯೋಜನೆಯನ್ನು ೨೦೦೦-೦೧ರಿಂದ ಜಾರಿಗೆ ತಂದಿದೆ.

೧) ಗ್ರಾಮದ ಒಳರಸ್ತೆ ಮತ್ತು ಬೀದಿಗಳ ಮೇಲ್ಮೈಯನ್ನು ಉತ್ತಮಪಡಿಸುವುದು.

೨) ಕೊಳೆ ಮತ್ತು ಮಳೆ ನೀರಿನ ವಿಲೇವಾರಿಗಾಗಿ ಪ್ರತೀ ಬೀದಿಯಲ್ಲಿ ಚರಂಡಿಗಳ ನಿರ್ಮಾಣ.

೩) ಸಾಮೂಹಿಕ ಮಿಶ್ರ ಗೊಬ್ಬರದ ಅಂಗಳ (ಕಮ್ಯೂನಿಟಿ ಕಾಂಪೋಸ್ಟ್)ಗಳನ್ನು ಒದಗಿಸಿ, ವಾಸಸ್ಥಳಗಳಿಂದ ತಿಪ್ಪೆಗುಂಡಿಗಳನ್ನು ಸ್ಥಳಾಂತರಿಸುವುದು.

೪) ಗ್ರಾಮದ ಎಲ್ಲಾ ಮನೆಗಳಲ್ಲಿಯೂ ಹೊಗೆ ರಹಿತ ಸುಧಾರಿತ ಅಸ್ತ್ರ ಒಲೆಗಳನ್ನು ಬಳಸುವಂತೆ ಒದಗಿಸುವುದು.

೫) ಗ್ರಾಮದ ಎಲ್ಲಾ ಜನರಿಗಾಗಿ ಕುಟುಂಬಗಳಿಗಾಗಿ ಸಾಮೂಹಿಕ ಶೌಚಾಲಯಗಳು, ಕೌಟುಂಬಿಕ ಶೌಚಾಲಯಗಳು, ಹಾಗೂ ಶಾಲೆಗಳಲ್ಲಿ ಶೌಚಾಲಯಗಳ ನಿರ್ಮಾಣ ಮಾಡುವುದು ಮುಂತಾದವು.

ಸ್ವಚ್ಛ ಗ್ರಾಮ ಯೋಜನೆಯ ಒಂದನೇ ಹಂತದಲ್ಲಿ ೨೦.೦೦ ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗಿದ್ದು, ಇದರಲ್ಲಿ ಶೇ. ೧೦ರಷ್ಟು ಸಾರ್ವಜನಿಕರ ವಂತಿಗೆಯೂ ಸೇರಿರುತ್ತದೆ. ಈ ಹಂತದಲ್ಲಿ ೩೮ ಕಾಮಗಾರಿಗಳ ಗುರಿ ಹೊಂದಲಾಗಿದ್ದು, ೨೦ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಇದಕ್ಕಾಗಿ ೭೧೨.೦೪ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗಿತ್ತು. ೨೦೦೪-೦೫ರಲ್ಲಿ ಎರಡನೇ ಹಂತದ ಸ್ವಚ್ಛ ಗ್ರಾಮ ಯೋಜನೆಯು ಜಿಲ್ಲೆಯಲ್ಲಿ ಮಂಜೂರಾಗಿದ್ದು, ಇದರ ಒಟ್ಟು ವೆಚ್ಚ ೧೦.೦೦ಲಕ್ಷ ರೂ.ಗಳಾಗಿರುತ್ತದೆ. ಈ ಯೋಜನೆಗೆ ತಗಲುವ ವೆಚ್ಚವನ್ನು ಸಂಪೂರ್ಣವಾಗಿ ರಾಜ್ಯ ಸರ್ಕಾರ ಒದಗಿಸುತ್ತದೆ. ಆದರೆ ಈ ಹಂತದಲ್ಲಿ ೧೪.೪೭ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗಿದೆ.

### ಓ) ರಾಜೀವ ಗಾಂಧಿ ಗ್ರಾಮೀಣ ಆಶ್ರಯ ಯೋಜನೆ

ಈ ಯೋಜನೆಯಲ್ಲಿ ೨೦೦೦-೦೧ರಲ್ಲಿ ೩,೫೪೬ ಮನೆಗಳ ನಿರ್ಮಾಣದ ಗುರಿ ಹೊಂದಲಾಗಿದ್ದು, ೨೦೦೫ರ ಮಾರ್ಚ್ ಅಂತ್ಯಕ್ಕೆ ೩,೫೨೩ ಮನೆಗಳನ್ನು ಪೂರ್ಣಗೊಳಿಸಲಾಗಿದ್ದು, ಇದಕ್ಕಾಗಿ ೭೦೩.೪೫ ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿತ್ತು. ಉಳಿದ ೨೩ ಮನೆಗಳು ವಿವಿಧ ಹಂತದ ಪ್ರಗತಿಯಲ್ಲಿದ್ದವು. ೨೦೦೩-೦೪ರಲ್ಲಿ ೨,೩೩೧ ಮನೆಗಳ ನಿರ್ಮಾಣದ ಗುರಿ ಹೊಂದಲಾಗಿದ್ದು, ೨೦೦೫ರ ಮಾರ್ಚ್ ಅಂತ್ಯಕ್ಕೆ ೭೩೩ ಮನೆಗಳು ಮಾತ್ರ ಪೂರ್ಣಗೊಂಡಿದ್ದವು. ಇದಕ್ಕಾಗಿ ೨೪೬.೯೦ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗಿದೆ. ಉಳಿದ ೧,೧೪೧ ಮನೆಗಳು ವಿವಿಧ ಹಂತದ ಪ್ರಗತಿಯಲ್ಲಿದ್ದು, ೪೫೭ ಮನೆಗಳು ಈ ಅವಧಿಯಲ್ಲಿ ಇನ್ನೂ ಪ್ರಾರಂಭಗೊಂಡಿರಲಿಲ್ಲ.

### ಔ) ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ

ಗ್ರಾಮೀಣ ಪ್ರದೇಶದ ಹಳ್ಳಿಗಳಿಗೆ ಜಿಲ್ಲಾ ಕೇಂದ್ರದೊಂದಿಗೆ ರಸ್ತೆ ಸಂಪರ್ಕ ಒದಗಿಸುವುದರ ಜೊತೆಗೆ ರಸ್ತೆಗಳನ್ನು ಡಾಂಬರೀಕರಣಗೊಳಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ೨೦೦೧-೦೨ರಲ್ಲಿ ಇಂಜಿನೀಯರ್ ವಿಭಾಗದಿಂದ ೭೭.೬೬ ಲಕ್ಷ ರೂ. ವೆಚ್ಚ ಮಾಡಿ ನಾಲ್ಕು ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿತ್ತು. ಕರ್ನಾಟಕ ಭೂಸೇನಾ ನಿಗಮವು ೮೫.೪೭ಲಕ್ಷ ರೂ. ವೆಚ್ಚ ಮಾಡಿ ಐದು ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಹೀಗೆ ಒಟ್ಟು ೧೬೩.೧೩ ಲಕ್ಷ ವಿನಿಯೋಗಿಸಿ, ಒಂಬತ್ತು ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ.

### ಅಂ) ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆ

ಈ ಯೋಜನೆಯನ್ನು ಜಿಲ್ಲೆಯ ಎಲ್ಲಾ ಮೂರು ತಾಲೂಕುಗಳಲ್ಲಿ ಜಾರಿಗೆ ತರಲಾಗಿದೆ. ಈ ಯೋಜನೆಯಡಿ ಕಿರು ಜಲಾನಯನಗಳನ್ನು ಗುರುತಿಸಿ ಜಲಾನಯನ ಸಮಿತಿಗಳ ಮುಖಾಂತರ ಕ್ರಿಯಾ

ಯೋಜನೆಯನ್ನು ತಯಾರಿಸಿ, ಜಿಲ್ಲಾ ಜಲಾನಯನ ಅಭಿವೃದ್ಧಿ ಇಲಾಖೆಯ ಉಸ್ತುವಾರಿಯಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತದೆ. ೨೦೦೦-೦೧ರಲ್ಲಿ ೧೦೨.೬೬ಲಕ್ಷ ರೂ.ಗಳನ್ನು ವೆಚ್ಚ ಮಾಡಿ, ಕಿಂಡಿ ಆಣೆಕಟ್ಟುಗಳು, ನಾಲಾಬದು, ಚೆಕ್ ಡ್ಯಾಮ್, ಹಣ್ಣಿನ ಸಸಿಗಳ ವಿತರಣೆ, ನೆಡುತೋಪು ಮತ್ತಿತರ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ೨೦೦೪-೦೫ರಲ್ಲಿ ಈ ಯೋಜನೆಯಡಿ ೧೧೪ ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಯಿತು.

### ಅಃ) ನಿರ್ಮಲ ಗ್ರಾಮ ಯೋಜನೆ

ಗ್ರಾಮೀಣ ಪ್ರದೇಶ (ಜನ ವಸತಿ)ಗಳಲ್ಲಿ ಪರಿಸರ ನೈರ್ಮಲ್ಯವನ್ನು ಸುಧಾರಿಸಲು, ವಿಶೇಷವಾಗಿ ಪ್ರತಿ ಗ್ರಾಮೀಣ ಕುಟುಂಬಕ್ಕೂ ಶೌಚಾಲಯ ಸೌಲಭ್ಯ ಒದಗಿಸುವುದೇ ಈ ಯೋಜನೆಯ ಉದ್ದೇಶವಾಗಿದೆ. ಈ ಯೋಜನೆಯಡಿಯಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಶೌಚಾಲಯ ನಿರ್ಮಿಸಿಕೊಡಲು ೨,೦೦೦ ರೂ.ಗಳನ್ನು ಸಹಾಯ ಧನವಾಗಿ ನೀಡಲಾಗುತ್ತದೆ ಹಾಗೂ ಬಡತನ ರೇಖೆಗಿಂತ ಮೇಲಿರುವವರಿಗೆ ೧,೨೦೦ ರೂ.ಗಳನ್ನು ಸಹಾಯಧನವಾಗಿ ನೀಡಲಾಗುವುದು.

೨೦೦೦-೦೧ರಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ೬೩.೭೫ಲಕ್ಷ ರೂ. ಖರ್ಚು ಮಾಡಿ, ೧,೨೯೬ ಶೌಚಾಲಯಗಳನ್ನು ನಿರ್ಮಿಸಲಾಗಿತ್ತು. ಹಾಗೆಯೇ ಬಡತನ ರೇಖೆಗಿಂತ ಮೇಲಿನವರಿಗೆ ೧೨೯ ಶೌಚಾಲಯಗಳನ್ನು ನಿರ್ಮಿಸಲಾಗಿತ್ತು. ೨೦೦೫ರ ಮಾರ್ಚ್ ಅಂತ್ಯಕ್ಕೆ ೧೦.೯೮ಲಕ್ಷ ರೂ.ಗಳನ್ನು ಖರ್ಚು ಮಾಡಿ ೬೧೧ ಶೌಚಾಲಯಗಳನ್ನು ನಿರ್ಮಿಸಲಾಯಿತು.

ಹೀಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬಡತನ ನಿರ್ಮೂಲನೆಗಾಗಿ ಹಲವು ಯೋಜನೆಗಳನ್ನು ಹಮ್ಮಿಕೊಂಡಿವೆ. ಅಲ್ಲದೆ ರಾಜ್ಯ ಸರ್ಕಾರ ಸ್ತ್ರೀ-ಶಕ್ತಿಯೋಜನೆ, ಅಕ್ಷರದಾಸೋಹ, ಯಶಸ್ವಿನಿ, ನಿರ್ಮಲ ಕರ್ನಾಟಕ ಮುಂತಾದ ಇನ್ನೂ ಹತ್ತು ಹಲವು ಯೋಜನೆಗಳನ್ನು ಕಾರ್ಯರೂಪಕ್ಕೆ ತಂದು ಜಾರಿಗೊಳಿಸುತ್ತಿದೆ.

## ಬರ ಮತ್ತು ಪ್ರವಾಹ

ನೂತನವಾಗಿ ರೂಪುಗೊಂಡಿರುವ ಉಡುಪಿ ಜಿಲ್ಲೆಯು ಮಳೆಯನ್ನು ಸಮೃದ್ಧವಾಗಿ ಪಡೆಯುತ್ತಿದೆ. ಕೆಲವೇ ವರ್ಷಗಳು ಮಾತ್ರ ಮಳೆಯಿಂದ ವಿಫಲವಾಗಿದೆ. ಇತರೆ ಜಿಲ್ಲೆಗಳಲ್ಲಿ ಆಹಾರ ಪದಾರ್ಥಗಳ ಕೊರತೆ ಉಂಟಾದಾಗ ಜಿಲ್ಲೆಯ ಬೆಲೆ ಪ್ರವೃತ್ತಿಯಲ್ಲಿ ಏರಿಕೆ ಉಂಟಾಗುತ್ತಿತ್ತು. ಜಿಲ್ಲೆಯಲ್ಲಿ ಮಳೆಯು ಜೂನ್ ತಿಂಗಳಿಂದ ಸೆಪ್ಟೆಂಬರ್ ತಿಂಗಳವರೆಗೆ ಹೇರಳವಾಗಿ ಬೀಳುತ್ತಿದ್ದು, ಅದನ್ನು ಕೆರೆಗಳಲ್ಲಿ ಸಂಗ್ರಹಿಸಿಕೊಂಡು ವ್ಯವಸಾಯವನ್ನು ಯಾವುದೇ ತೊಂದರೆಯಿಲ್ಲದೆ ಮಾಡಲಾಗುತ್ತಿತ್ತು. ಕ್ರಿ.ಶ. ೧೩೦೫ರಲ್ಲಿ ಎರಡನೇ ಬಂಕಿದೇವ ಅಲುಪೇಂದ್ರದೇವನ ಕಾಲದಲ್ಲಿ ಜಿಲ್ಲೆಯು ಭೀಕರ ಬರಗಾಲಕ್ಕೆ ತುತ್ತಾಗಿದ್ದುದ್ದು ಶಾಸನದಿಂದ ತಿಳಿದುಬರುತ್ತದೆ. ಇದರ ಪ್ರಕಾರ ಸು. ೨೫೦ ವರ್ಷಗಳಿಗೂ ಮುಂಚೆ ಸಂಭವಿಸಿದ ಈ ಬರಗಾಲ ಮಾರಣಾಂತಿಕ ಬರಗಾಲವಾಗಿತ್ತು. ಸೆವರಿನ್‌ಸಿಲ್ವ ವಿರಚಿತ "ಹಿಸ್ಟರಿ ಆಫ್ ಕ್ರಿಶ್ಚಿಯಾನಿಟಿ ಇನ್ ಕೆನರಾ" (ಸಂಪುಟ-೧ ಪುಟ ೭೪ರಲ್ಲಿ) ಗ್ರಂಥವು ಬೆಂದೂರಿನ ನಾಯಕರ ಸಾಮ್ರಾಜ್ಯದ ಬಗ್ಗೆ ತಿಳಿಸುತ್ತದೆ. ಈ ಸಾಮ್ರಾಜ್ಯವು ಸಮೃದ್ಧಿಯಿಂದ ಕೂಡಿತ್ತೆಂದು ತಿಳಿಸುತ್ತದೆ. ಕ್ರಿ.ಶ. ೧೭೨೭ರಲ್ಲಿ ಮುಂಗಾರು ವಿಫಲತೆಯಿಂದಾಗಿ ಭಯಂಕರ ಬರಗಾಲ ಸಂಭವಿಸಿತು. ಇಂಥ ಭೀಕರ ಬರಗಾಲ ಹಿಂದೆಂದೂ ಸಂಭವಿಸಿರಲಿಲ್ಲ. ಪೋಷಕರು ತಮ್ಮ ಜೀವನ ನಿರ್ವಹಣೆಗಾಗಿ ತಮ್ಮ ಮಕ್ಕಳನ್ನೇ ಮಾರಿಕೊಳ್ಳುವಷ್ಟು ಈ ಬರಗಾಲದ ತೀವ್ರತೆ ಹೆಚ್ಚಾಗಿತ್ತು. ೧೮೭೨ರಲ್ಲಿ ನಿರ್ದಿಷ್ಟ ಪ್ರಮಾಣದಲ್ಲಿ ಬರಗಾಲ ಸಂಭವಿಸದಿದ್ದರೂ, ಪರಿಹಾರ ಕಾರ್ಯಗಳನ್ನು ಕೈಗೊಳ್ಳಲಾಯಿತು. ಆದರೆ, ಅಸಹಜ ಆಹಾರ ಧಾನ್ಯಗಳ ಆಮದಿನಿಂದಾಗಿ ತೊಂದರೆಯುಂಟಾಯಿತು. ಇದರಿಂದಾಗಿ ಸ್ಥಳೀಯವಾಗಿ ಬೆಲೆಗಳು ಅಪಾರವಾಗಿ ಹೆಚ್ಚಳಗೊಂಡವು. ಇದೇ ಸಂದರ್ಭಗಳಲ್ಲಿ ಇತರೆ ಜಿಲ್ಲೆಗಳಲ್ಲಿ ಹಲವಾರು ಭಾರಿ ಬರಗಾಲ ಕಾಣಿಸಿಕೊಂಡಿತು. ಇದರ ಪರಿಣಾಮ ಜಿಲ್ಲೆಯ ಮೇಲೂ ಉಂಟಾಗಿ ಆಹಾರ ಪದಾರ್ಥಗಳ ಬೆಲೆ ಹೆಚ್ಚಳಗೊಂಡಿತು.

ದಕ್ಷಿಣ ಕನ್ನಡ ಜಿಲ್ಲೆಯು ೧೯೨೩ರಲ್ಲಿ ನದಿಗಳಲ್ಲಿ ಅತೀ ಪ್ರವಾಹ ಬಂದಿದ್ದರಿಂದ ಪ್ರಾಕೃತಿಕ ವಿಕೋಪಗಳಿಗೆ ತುತ್ತಾಯಿತು. ಜುಲೈಯಿಂದ ಆಗಸ್ಟ್ ೧೯೨೩ರವರೆಗೆ ಸತತ ಹಾಗೂ ಭಾರೀ ಮಳೆ ಜಿಲ್ಲೆಯಾದ್ಯಂತ ಆಯಿತು. ಎಲ್ಲಾ ನದಿಗಳು ಉಕ್ಕಿಹರಿದವು. ಉಪ್ಪಿನಂಗಡಿ, ಬಂಟ್ವಾಳ, ಪಾಣೆ, ಮಂಗಳೂರು ಮುಂತಾದವು ಪ್ರವಾಹಕ್ಕೆ ತುತ್ತಾಗಿದ್ದ ಸ್ಥಳಗಳು. ಕುಂದಾಪುರದ ಹತ್ತಿರ ಗಂಗೊಳ್ಳಿ ನದಿಯ ಮುಖಜ ಭೂಮಿ ಪ್ರವಾಹದಿಂದಾಗಿ ಸಮುದ್ರದ ಕಡೆಗೆ ವಿಸ್ತಾರಗೊಂಡಿತು. ಅದರಲ್ಲೂ ಆಗಸ್ಟ್ ೧೯೨೩ರಲ್ಲಿ ಪ್ರವಾಹ ತುಂಬಾ ಹಾನಿಕಾರಕವಾಗಿದ್ದು ಆ ಹಳ್ಳಿಗಳು ಗಂಭೀರ ತೊಂದರೆಗೆ ಒಳಗಾದವು. ಬಂಟ್ವಾಳ ಹಾಗೂ ಉಪ್ಪಿನಂಗಡಿ ತಾಲೂಕುಗಳ ಹಲವಾರು ಹಳ್ಳಿಗಳು ಹಾನಿಗೊಳಗಾದವು. ಉಚ್ಚಮೊಗಾರ್ ಹಾಗೂ ವೇಣೂರಿನ ಸೇತುವೆಗಳು ಹಾಗೂ ಹಲವಾರು ಇತರೆ ಸೇತುವೆಗಳು ನಾಶ ಹೊಂದಿದವು. ಮಂಗಳೂರಿನಲ್ಲಿ ಹೆಚ್ಚಿನ ಹಾನಿ ಉಂಟಾಯಿತು. ಕುದ್ರೋಳಿ, ಸುಲ್ತಾನ್ ಬತ್ತೇರಿ, ಬೋಳಾರ ಮತ್ತು ಜಪ್ಪು ಪ್ರದೇಶಗಳಲ್ಲಿ ಹಲವಾರು ರೈಲ್ವೆ ಹಳಿ ಹಾಗೂ ಮನೆಗಳು ಹಾನಿಗೊಳಗಾದವು. ಸುಮಾರು ೨೦,೦೦೦ ರೂ.ಗಳ ಮೌಲ್ಯದ ಅಕ್ಕಿ ಹಾಗೂ ಕಾಳುಗಳು ಹಾಗೂ ಸಂಗ್ರಹಣಾ ಉಗ್ರಾಣ ನಾಶವಾಯಿತು. ೧೯೨೪ರಲ್ಲಿ ಮತ್ತೆ ಪ್ರವಾಹ ಉಂಟಾಗಿ ಕರಾವಳಿ ತೀರದ ಪ್ರದೇಶಗಳು ಹಾನಿಗೊಳಗಾದವು. ಇದರಿಂದಾಗಿ ಹಲವಾರು ರಸ್ತೆಗಳು ಹಾಳಾದವು. ಭೂಕಂದಾಯ ಮನ್ನಾ ಮಾಡಲಾಯಿತು. ಇದರ ಮೊತ್ತ ರೂ.೨೫,೦೦೦ಗಳಷ್ಟಾಗಿತ್ತು. ಅಲ್ಲದೆ ವ್ಯವಸಾಯಕ್ಕಾಗಿ ಸಾಲ, ಬಡವರ್ಗದ ಜನರಿಗಾಗಿ ಉಚಿತವಾಗಿ ಮನೆಕಟ್ಟಲು ಬೇಕಾಗುವ ಸಾಮಗ್ರಿಗಳನ್ನು ಒದಗಿಸುವುದಕ್ಕಾಗಿ ಸರ್ಕಾರ ಎರಡು ಲಕ್ಷ ರೂ.ಗಳನ್ನು ಅನುದಾನವಾಗಿ ನೀಡಿತು. ಸ್ಥಳೀಯ ಪರಿಹಾರ ಕಮಿಟಿಯು ನೂರಾರು ಜನರಿಗೆ ಹಲವಾರು ದಿನಗಳ ಕಾಲ ವಸತಿ, ಊಟ ಹಾಗೂ ಬಟ್ಟೆಯನ್ನು ನೀಡಿತು.

ಜಿಲ್ಲೆಯ ಎಲ್ಲಾ ನದಿಗಳು ನಾಲ್ಕನೇ ಜುಲೈ ೧೯೫೯ರಿಂದ ಎಂಟನೇ ಜುಲೈ ೧೯೫೯ರವರೆಗೂ, ಮತ್ತೆ ೨೨ನೇ ಜುಲೈ ೧೯೫೯ ರಿಂದ ೨೮ನೇ ಜುಲೈ ೧೯೫೯ ರವರೆಗೆ ಪ್ರವಾಹದಿಂದ ಕೂಡಿದ್ದವು. ಪರಿಣಾಮವಾಗಿ ಅಸಂಖ್ಯಾತ ಮನೆಗಳು ನಾಶ ಹೊಂದಿದವು. ಎಂಟು ಜನರು ಪ್ರಾಣ ಕಳೆದುಕೊಂಡರು ಹಾಗೂ ೨೪ ದನಕರುಗಳು ಸತ್ತವು. ೬೫೦ ಎಕರೆಯಲ್ಲಿ ಬೆಳೆದಿದ್ದ ಬೆಳೆ ಸಂಪೂರ್ಣವಾಗಿ ನಾಶಹೊಂದಿತ್ತು. ೧೦೦೦೦ ಎಕರೆಯಲ್ಲಿ ಬೆಳೆದಿದ್ದ ಬೆಳೆ ಭಾಗಶಃ ನಾಶ ಹೊಂದಿತ್ತು. ೧೬೨೫ ಮನೆಗಳು ಭಾಗಶಃ ಹಾನಿಗೊಳಗಾದವು. ಇದರಿಂದಾಗಿ ಮನೆಗಳು ಹಾನಿಗೊಂಡು ನಷ್ಟ ಹೊಂದಿದ ಅಂದಾಜು ಮೊತ್ತ ರೂ. ೧,೧೧,೭೯೦ಗಳಾಗಿತ್ತು. ಪ್ರವಾಹದಿಂದ ಹಾನಿಗೊಳಗಾದ ಸಾಮಗ್ರಿಗಳ ಒಟ್ಟು ಅಂದಾಜು ರೂ. ೨,೧೦,೬೦೦ ಗಳಾಗಿತ್ತು. ಮತ್ತೆ ೧೯೬೧ರಲ್ಲಿ ೯೫ ಗ್ರಾಮಗಳು ಪ್ರವಾಹಕ್ಕೆ ಒಳಗಾಗಿದ್ದು, ೨೧೯೭ ಎಕರೆಯಲ್ಲಿ ಬೆಳೆದ ಬೆಳೆ ಹಾನಿಗೊಳಗಾಯಿತು. ಒಂಭತ್ತು ದನಕರುಗಳು ಸತ್ತು, ಒಬ್ಬ ಮನುಷ್ಯ ಸಾವಿಗೀಡಾಗಿದ್ದನು. ಅಲ್ಲದೆ ೪೪೪೯ ಮಂದಿ ತೊಂದರೆಗೆ ಒಳಗಾದರು. ೯೧೯ ಮನೆಗಳು ಹಾನಿಗೊಂಡಿದ್ದು, ಹಾನಿಯ ಒಟ್ಟು ಮೊತ್ತ ರೂ. ೧,೧೨,೫೬೫ ಗಳಾಗಿತ್ತು. ಇತರೆ ಹಾನಿಗೊಳಗಾದ ಮೊತ್ತ ರೂ. ೩,೩೮,೪೫೦ಗಳಾಗಿತ್ತು. ಇದರ ಒಟ್ಟು ಮೊತ್ತ ೪,೫೧,೦೧೫ ರೂ.ಗಳಾಗಿತ್ತು.

ಜಿಲ್ಲೆಯಲ್ಲಿ ೧೯೬೭ರಲ್ಲಿ ಪ್ರವಾಹದಿಂದ ೨೧ ಹಳ್ಳಿಗಳು ತೊಂದರೆಗೆ ಒಳಗಾಗಿದ್ದು, ೪೮೧.೫೩ ಎಕರೆಯಲ್ಲಿ ಬೆಳೆ ನಾಶವಾಗಿ ಮೌಲ್ಯ ೧,೭೯,೫೭೦ ರೂ.ಗಳು ಆಗಿತ್ತು. ೭೩೭ ಮಂದಿ ತೊಂದರೆಗೊಳಗಾದರು. ೬೬ ಮನೆಗಳು ನಾಶ ಹೊಂದಿದ್ದವು. ಇದರ ಮೌಲ್ಯ ೪೪,೯೭೫ ರೂ.ಗಳಾಗಿತ್ತು. ಒಟ್ಟು ನಷ್ಟ ರೂ. ೨,೨೪,೫೪೫ ಆಗಿತ್ತು. ೧೯೬೮ರಲ್ಲಿ ೨೫೯ ಗ್ರಾಮಗಳ ೪,೨೧೭.೬೭ ಎಕರೆ ಪ್ರದೇಶ ಹಾಗೂ ೧೭,೦೬೫ ಮಂದಿ ಪ್ರವಾಹದ ತೊಂದರೆಗೆ ಒಳಗಾಗಿದ್ದರು. ೨,೬೭೨.೬೦ ಎಕರೆ ಪ್ರದೇಶದಲ್ಲಿ ಬೆಳೆದಿದ್ದ ಬೆಳೆನಾಶವಾಗಿ, ೬,೮೦,೯೩೬ ರೂ.ಗಳಷ್ಟು ಮೌಲ್ಯದ ಬೆಳೆ ನಾಶವಾಯಿತು. ಈ ಪ್ರವಾಹದಿಂದ ೯೯ ದನಕರುಗಳು ಹಾಗೂ ೧೦ ಜನರು ಪ್ರಾಣ ಕಳೆದುಕೊಂಡಿದ್ದರು. ೧೯೪೬ ಮನೆಗಳು ಹಾಗೂ ಸಾರ್ವಜನಿಕ ಆಸ್ತಿಪಾಸ್ತಿ ನಷ್ಟವಾಗಿತ್ತು. ಒಟ್ಟು ನಷ್ಟದ ಮೌಲ್ಯ ೯,೯೧,೭೪೧ ರೂ.ಗಳಾಗಿತ್ತು. ೧೯೭೦ರಲ್ಲಿ ಸಂಭವಿಸಿದ ಪ್ರವಾಹದಲ್ಲಿ ೫೮ ಹಳ್ಳಿಗಳ ೫೯೬ ಎಕರೆ ಪ್ರದೇಶ ಹಾಗೂ ೬೬೩ ಜನರು ತೊಂದರೆಗೆ

ಒಳಗಾಗಿದ್ದರು. ೫೯೬ ಎಕರೆ ಪ್ರದೇಶದಲ್ಲಿ ಬೆಳೆನಾಶವಾಗಿತ್ತು. ಬೆಳೆನಾಶದ ಒಟ್ಟು ಮೌಲ್ಯ ರೂ. ೭,೧೦೦ ಆಗಿತ್ತು. ಅಲ್ಲದೆ ನಾಲ್ಕು ದನಕರುಗಳು ಪ್ರಾಣ ಕಳೆದುಕೊಂಡಿದ್ದವು. ೧೭೧ ಮನೆಗಳೂ ಸೇರಿದಂತೆ ಕೆಲವು ಸಾರ್ವಜನಿಕ ಆಸ್ತಿಪಾಸ್ತಿಗಳು ನಷ್ಟಕ್ಕೀಡಾದವು. ಈ ಅವಧಿಯಲ್ಲಿ ಸಂಭವಿಸಿದ ಪ್ರವಾಹದಿಂದಾದ ಒಟ್ಟು ಅಂದಾಜು ನಷ್ಟ ರೂ. ೧,೩೭,೬೧೯ ಆಗಿತ್ತು. ೧೯೭೧ರಲ್ಲಿ ಸಂಭವಿಸಿದ ಪ್ರವಾಹದಿಂದ ೫೫ ಹಳ್ಳಿಗಳ ೧೧ ಚ.ಮೈಲಿ ಪ್ರದೇಶ ಹಾನಿಗೊಳಗಾಯಿತು. ೧೦೭೩ ಜನರು ತೊಂದರೆಗೊಳಗಾದರು. ೩೫೩ ಹಳ್ಳಿಗಳು ಹಾನಿಗೊಳಗಾದವು. ಒಟ್ಟು ಹಾನಿಯ ಮೊತ್ತ ೨,೦೯,೮೪೧ ರೂ.ಗಳಾಗಿತ್ತು.

೧೯೮೨ ರಿಂದ ೧೯೮೫ರ ವರೆಗಿನ ವರ್ಷಗಳಲ್ಲಿ ಮುಂಗಾರಿನ (ಜೂನ್‌ನಿಂದ ಸೆಪ್ಟೆಂಬರ್‌ವರೆಗೆ) ಅವಧಿಯಲ್ಲಿ ಅವಿಭಜಿತ ಜಿಲ್ಲೆಯಲ್ಲಿ ತೀವ್ರ ಬರಗಾಲಕ್ಕೆ ತುತ್ತಾದ ಯಾವುದೇ ತಾಲೂಕುಗಳಿರಲಿಲ್ಲ. ೧೯೮೫ರಲ್ಲಿ ಎರಡು ತಾಲೂಕುಗಳು ಸಾಧಾರಣ ಬರಗಾಲಕ್ಕೆ ತುತ್ತಾಗಿದ್ದವು. ೧೯೮೪ರಲ್ಲಿ ಮೂರು ತಾಲೂಕುಗಳು ಕಡಿಮೆ ಬರಗಾಲಕ್ಕೆ ತುತ್ತಾಗಿದ್ದರೆ, ೧೯೮೫ರಲ್ಲಿ ಆರು ತಾಲೂಕುಗಳು ತುತ್ತಾಗಿದ್ದವು. ೧೯೮೪ರಲ್ಲಿ ಮೂರು ತಾಲೂಕುಗಳು ಬರಪೀಡಣಕ್ಕೆ ಒಳಗಾಗಿದ್ದರೆ, ೧೯೮೫ ಜಿಲ್ಲೆಯ ಎಲ್ಲಾ ಎಂಟು ತಾಲೂಕುಗಳು ಬರಪೀಡಿತವಾಗಿದ್ದವು. ಜಿಲ್ಲೆಯಲ್ಲಿ ೧೯೮೨ರಿಂದ ೧೯೮೫ರವರೆಗಿನ ವರ್ಷಗಳಲ್ಲಿ ಹಿಂಗಾರಿನ (ಅಕ್ಟೋಬರ್‌ನಿಂದ ಡಿಸೆಂಬರ್‌ವರೆಗೆ) ಅವಧಿಯಲ್ಲಿ ತೀವ್ರ ಬರಗಾಲಕ್ಕೆ ತುತ್ತಾದ ತಾಲೂಕುಗಳು ೧೯೮೨ರಲ್ಲಿ ಮೂರು ಆಗಿದ್ದವು. ಸಾಧಾರಣ ಬರಗಾಲಕ್ಕೆ ಒಳಗಾದ ತಾಲೂಕುಗಳು ೧೯೮೨ರಲ್ಲಿ ಮೂರು, ೧೯೮೩ರಲ್ಲಿ ಒಂದು, ೧೯೮೪ರಲ್ಲಿ ಐದು ಹಾಗೂ ೧೯೮೫ರಲ್ಲಿ ಒಂದು ಆಗಿದ್ದರೆ, ಕಡಿಮೆ ಬರಗಾಲಕ್ಕೆ ತುತ್ತಾದ ತಾಲೂಕುಗಳು ೧೯೮೨ರಲ್ಲಿ ಒಂದು, ೧೯೮೩ರಲ್ಲಿ ಮೂರು, ೧೯೮೪ರಲ್ಲಿ ಎರಡು ಹಾಗೂ ೧೯೮೫ರಲ್ಲಿ ಒಂದು ಆಗಿದ್ದವು. ಒಟ್ಟು ಬರಗಾಲಕ್ಕೆ ತುತ್ತಾದ ತಾಲೂಕುಗಳು ೧೯೮೨ರಲ್ಲಿ ಏಳು ಆಗಿದ್ದರೆ, ೧೯೮೩ರಲ್ಲಿ ನಾಲ್ಕು, ೧೯೮೪ರಲ್ಲಿ ಏಳು ಹಾಗೂ ೧೯೮೫ರಲ್ಲಿ ಎರಡು ಆಗಿದ್ದವು. ೧೯೯೭–೯೮ರಲ್ಲಿ ಮಳೆಯಿಂದ ಮನೆ, ಹಾಗೂ ಬೆಳೆ ನಾಶಕ್ಕೊಳಗಾದ ಕುಟುಂಬಗಳು ೭೧ ಆಗಿದ್ದರೆ, ಜಾನುವಾರುಗಳನ್ನು ಕಳೆದುಕೊಂಡ ಕುಟುಂಬಗಳು ಐದು ಆಗಿದ್ದವು. ಈ ಕುಟುಂಬಗಳಿಗೆ ನೀಡಿದ ಪರಿಹಾರದ ಮೊತ್ತ ರೂ. ೬,೬೪,೫೪೫ ಆಗಿತ್ತು. ೭೫ ಕುಟುಂಬಗಳು ಬೆಂಕಿ ಅನಾಹುತಕ್ಕೊಳಗಾಗಿ ೩,೧೦,೬೦೦ ರೂ.ಗಳನ್ನು ಪರಿಹಾರವನ್ನು ಪಡೆದಿದ್ದವು. ಹೆಚ್ಚಿನ ವಿವರಗಳಿಗೆ ಕೋಷ್ಟಕ ೮.೪೧ರಲ್ಲಿ ನೀಡಲಾಗಿದೆ.

## ಅಭಿವೃದ್ಧಿ ಸಾಧ್ಯತೆಗಳು

ಜಿಲ್ಲೆಯಲ್ಲಿ ೨೦೦೩–೦೪ರಲ್ಲಿದ್ದಂತೆ, ಏಕದಳ ಹಾಗೂ ದ್ವಿದಳ ಧಾನ್ಯಗಳನ್ನು ಬೆಳೆಯುತ್ತಿದ್ದ ಪ್ರದೇಶದ ವಿಸ್ತೀರ್ಣ ೬೯,೮೬೦ ಹೆಕ್ಟೇರುಗಳಾಗಿದ್ದು, ಅದರಲ್ಲಿ ೬೨,೧೦೩ ಹೆಕ್ಟೇರು ಪ್ರದೇಶದಲ್ಲಿ ಭತ್ತ, ೫,೮೭೬ ಪ್ರದೇಶದಲ್ಲಿ ಉದ್ದು, ೧,೨೯೮ ಹೆಕ್ಟೇರು ಪ್ರದೇಶದಲ್ಲಿ ಹುರಳಿ, ೧೭೭ ಹೆಕ್ಟೇರು ಪ್ರದೇಶದಲ್ಲಿ ಹೆಸರು ಹಾಗೂ ೪೦೬ ಹೆಕ್ಟೇರು ಪ್ರದೇಶದಲ್ಲಿ ಅಲಸಂದೆಯನ್ನು ಬೆಳೆಯಲಾಗುತ್ತಿದೆ. ಅಲ್ಲದೆ, ೨,೧೦೩ ಹೆಕ್ಟೇರು ಪ್ರದೇಶದಲ್ಲಿ ಎಣ್ಣೆಕಾಳು, ೨೩,೬೬೩ ಹೆಕ್ಟೇರು ಪ್ರದೇಶದಲ್ಲಿ ಹಣ್ಣು, ೨,೨೦೬ ಹೆಕ್ಟೇರು ಪ್ರದೇಶದಲ್ಲಿ ತರಕಾರಿ, ೪,೯೫೪ ಹೆಕ್ಟೇರು ಪ್ರದೇಶದಲ್ಲಿ ಅಡಿಕೆ, ೧೪,೩೧೯ ಹೆಕ್ಟೇರು ಪ್ರದೇಶದಲ್ಲಿ ತೆಂಗು, ೧೮,೯೬೮ ಹೆಕ್ಟೇರು ಪ್ರದೇಶದಲ್ಲಿ ಗೇರು (ಗೋಡಂಬಿ), ೨,೨೮೮ ಹೆಕ್ಟೇರು ಪ್ರದೇಶದಲ್ಲಿ ರಬ್ಬರ್, ೭೯ ಹೆಕ್ಟೇರು ಪ್ರದೇಶದಲ್ಲಿ ಕೋಕೋ, ೧,೧೮೮ ಹೆಕ್ಟೇರು ಪ್ರದೇಶದಲ್ಲಿ ಬಾಳೆ, ೧,೬೮೬ ಹೆಕ್ಟೇರು ಪ್ರದೇಶದಲ್ಲಿ ಮಾವು, ೮೩೯ ಹೆಕ್ಟೇರು ಪ್ರದೇಶದಲ್ಲಿ ಹಲಸು, ೪೯೯ ಹೆಕ್ಟೇರು ಪ್ರದೇಶದಲ್ಲಿ ಸಿಹಿಗೆಣಸು, ೬೭ ಹೆಕ್ಟೇರು ಪ್ರದೇಶದಲ್ಲಿ ಮರಗೆಣಸು, ೧೪೧ ಹೆಕ್ಟೇರು ಪ್ರದೇಶದಲ್ಲಿ ಅನಾನಸ್, ೧೦೬ ಹೆಕ್ಟೇರು ಪ್ರದೇಶದಲ್ಲಿ ವೀಳ್ಯದೆಲೆ, ೨೬೦ ಹೆಕ್ಟೇರು ಪ್ರದೇಶದಲ್ಲಿ ಕರಿಮೆಣಸು ಹಾಗೂ ೩೩ ಹೆಕ್ಟೇರು ಪ್ರದೇಶದಲ್ಲಿ ಕಬ್ಬು ಮತ್ತಿತರ ತೋಟಗಾರಿಕಾ ಬೆಳೆಗಳನ್ನು ಬೆಳೆಯಲಾಗುತ್ತಿದೆ. ಜಿಲ್ಲೆಯಲ್ಲಿ ೨೦೦೧ರ ಜನಗಣತಿಯಂತೆ ೪,೮೮,೧೭೩ ಮಂದಿ ಒಟ್ಟು ಕೆಲಸಗಾರರು, ೬,೨೪,೦೭೦ ಮಂದಿ ಕೆಲಸಗಾರರಲ್ಲದವರಿದ್ದಾರೆ. ೪,೧೭,೨೮೭ ಮಂದಿ ಮುಖ್ಯ ಕೆಲಸಗಾರರಿದ್ದು, ಇವರಲ್ಲಿ ೮೩,೩೦೫ ಮಂದಿ ವ್ಯವಸಾಯಗಾರರು, ೫೭,೮೯೩ ಮಂದಿ ಕೃಷಿಕಾರ್ಮಿಕರು,

## ಕೋಷ್ಟಕ ೮.೪೧ : ಜಿಲ್ಲೆಯಲ್ಲಿ ೧೯೯೭–೯೮ ರಿಂದ ೨೦೦೫–೦೬ರವರೆಗೆ ಪ್ರಕೃತಿ ವಿಕೋಪದ ಹಾನಿ ಮತ್ತು ಪರಿಹಾರಗಳ ವಿವರ

| ತಾಲೂಕು | ಬೆಳೆ ನಾಶಕ್ಕೊಳಗಾದ ಕುಟುಂಬಗಳ ಸಂಖ್ಯೆ | ಜಾನುವಾರು ನಷ್ಟ ಹೊಂದಿದ ಕುಟುಂಬಗಳ ಸಂಖ್ಯೆ | ಮನೆ ಹಾಗೂ ಬೆಳೆ ನಾಶ ಹಾಗೂ ಜಾನುವಾರು ನಷ್ಟ ಹೊಂದಿದವರಿಗೆ ವಿತರಿಸಿದ ಪರಿಹಾರ (ರೂ.ಗಳಲ್ಲಿ) | ಬೆಂಕಿ ಅನಾಹುತದಿಂದ ನಷ್ಟ ಹೊಂದಿದ ಕುಟುಂಬಗಳ ಸಂಖ್ಯೆ | ಬೆಂಕಿ ಅನಾಹುತಕ್ಕೆ ನೀಡಲಾದ ಪರಿಹಾರ (ರೂ.ಗಳಲ್ಲಿ) | ಮೃತಪಟ್ಟವರ ಸಂಖ್ಯೆ | ಮೃತಪಟ್ಟವರಿಗೆ ವಿತರಿಸಿದ ಪರಿಹಾರ (ರೂ.ಗಳಲ್ಲಿ) |
|---|---|---|---|---|---|---|---|
| **೧೯೯೭–೯೮** | | | | | | | |
| ಕಾರ್ಕಳ | ೬೧ | ೦ | ೨,೧೭,೩೮೫ | ೫೫ | ೧,೪೧,೧೦೦ | ೦೧ | ೧,೦೦,೦೦೦ |
| ಉಡುಪಿ | – | ೦೧ | ೪,೦೫,೧೬೦ | ೧೧ | ೭೯,೫೦೦ | ೦೪ | ೨,೦೦,೦೦೦ |
| ಕುಂದಾಪುರ | ೧೦ | ೦೪ | ೪೨,೦೦೦ | ೦೯ | ೯೦,೦೦೦ | ೦೯ | ೯,೦೦,೦೦೦ |
| ಒಟ್ಟು | ೭೧ | ೦೫ | ೬,೬೪,೫೪೫ | ೭೫ | ೩,೧೦,೬೦೦ | ೧೪ | ೧೨,೦೦,೦೦೦ |
| **೧೯೯೮–೯೯** | | | | | | | |
| ಕಾರ್ಕಳ | ೬೭೭ | ೦೩ | ೫,೮೯,೨೫೦ | ೪೭ | ೧,೫೩,೭೫೦ | ೦೩ | ೩,೦೦,೦೦೦ |
| ಉಡುಪಿ | – | ೧೦ | ೪,೪೮,೨೦೦ | ೨೪ | ೧,೬೮,೦೫೦ | ೦೮ | ೪,೦೦,೦೦೦ |
| ಕುಂದಾಪುರ | ೨೭ | ೦೫ | ೭೦,೦೦೦ | ೦೬ | ೩೦,೦೦೦ | ೦೬, | ೬,೦೦,೦೦೦ |
| ಒಟ್ಟು | ೭೦೪ | ೧೮ | ೧೧,೦೭,೪೫೦ | ೭೭ | ೩,೫೧,೮೦೦ | ೧೭ | ೧೩,೦೦,೦೦೦ |
| **೧೯೯೯–೦೦** | | | | | | | |
| ಕಾರ್ಕಳ | ೦೮ | ೦೩ | ೧,೧೮,೨೦೦ | ೧೮ | ೩೮,೬೦೦ | ೦೪ | ೪,೦೦,೦೦೦ |
| ಉಡುಪಿ | – | ೦೪ | ೩,೨೧,೧೬೫ | ೦೮ | ೪೦,೦೦೦ | ೦೩ | ೩,೦೦,೦೦೦ |
| ಕುಂದಾಪುರ | ೧೩ | ೦೪ | ೪೮,೦೦೦ | ೧೧ | ೪೮,೦೦೦ | ೦೧ | ೧,೦೦,೦೦೦ |
| ಒಟ್ಟು | ೨೧ | ೧೧ | ೪,೮೭,೩೬೫ | ೩೭ | ೧,೨೬,೬೦೦ | ೦೮ | ೮,೦೦,೦೦೦ |
| **೨೦೦೦–೦೧** | | | | | | | |
| ಕಾರ್ಕಳ | ೨೩ | ೦೮ | ೨,೧೧,೧೪೦ | ೨೫ | ೧,೧೨,೬೭೫ | ೦೨ | ೨,೦೦,೦೦೦ |
| ಉಡುಪಿ | – | ೦೫ | ೩,೭೨,೪೧೫ | ೧೪ | ೭೦,೦೦೦ | ೦೩ | ೩,೦೦,೦೦೦ |
| ಕುಂದಾಪುರ | ೧೫ | ೦೨ | ೪೦,೦೦೦ | ೦೪ | ೩೨,೦೦೦ | ೦೧ | ೧,೦೦,೦೦೦ |
| ಒಟ್ಟು | ೩೮ | ೧೫ | ೬,೨೩,೫೫೫ | ೪೩ | ೨,೧೪,೬೭೫ | ೦೬ | ೬,೦೦,೦೦೦ |
| **೨೦೦೧–೦೨** | | | | | | | |
| ಕಾರ್ಕಳ | ೧೬ | ೦೫ | ೨,೦೪,೮೨೦ | ೨೧ | ೬೫,೦೨೫ | ೦೧ | ೧,೦೦,೦೦೦ |
| ಉಡುಪಿ | – | ೦೧ | ೪,೭೩,೫೫೫ | ೨೫ | ೭೮,೫೦೦ | ೦೧ | ೧,೦೦,೦೦೦ |
| ಕುಂದಾಪುರ | ೧೬ | ೦೧ | ೨೦,೨೫೦ | ೧೬ | ೭೪,೧೫೦ | ೦೧ | ೧,೦೦,೦೦೦ |
| ಒಟ್ಟು | ೩೨ | ೦೭ | ೬,೯೮,೬೨೫ | ೬೨ | ೨,೧೭,೬೭೫ | ೦೩ | ೩,೦೦,೦೦೦ |
| **೨೦೦೨–೦೩** | | | | | | | |
| ಕಾರ್ಕಳ | ೦೨ | ೦ | ೬೩,೮೯೫ | ೧೨ | ೨೭,೦೫೦ | ೦೨ | ೧,೦೦,೦೦೦ |
| ಉಡುಪಿ | – | – | ೨,೪೧,೭೦೦ | ೧೨ | ೫೪,೦೦೦ | ೪ | ೨,೦೦,೦೦೦ |
| ಕುಂದಾಪುರ | ೧೧೦ | ೦ | ೪೦,೬೫೯ | ೧೨ | ೫೩,೩೦೦ | ೦೨ | ೧,೦೦,೦೦೦ |
| ಒಟ್ಟು | ೧೧೨ | – | ೩,೪೬,೨೫೪ | ೩೬ | ೧,೩೪,೩೫೦ | ೦೮ | ೪,೦೦,೦೦೦ |
| **೨೦೦೩–೦೪** | | | | | | | |
| ಕಾರ್ಕಳ | ೦ | ೦ | ೧,೦೧,೦೭೫ | ೦೯ | ೨೧,೯೦೦ | ೦೩ | ೧,೫೦,೦೦೦ |
| ಉಡುಪಿ | – | – | ೧,೮೪,೦೪೦ | ೦೯ | ೩೪,೫೦೦ | ೦೪ | ೨,೦೦,೦೦೦ |
| ಕುಂದಾಪುರ | ೧೦ | ೦ | ೪,೧೬೩ | ೦ | ೦ | ೦೫ | ೨,೫೦,೦೦೦ |
| ಒಟ್ಟು | ೧೦ | ೦ | ೨,೮೯,೨೭೮ | ೧೮ | ೫೬,೪೦೦ | ೧೨ | ೬,೦೦,೦೦೦ |
| **೨೦೦೪–೦೫** | | | | | | | |
| ಕಾರ್ಕಳ | ೦ | ೦ | ೯೪,೩೨೫ | ೦೬ | ೨೭,೦೦೦ | ೦೧ | ೫೦,೦೦೦ |
| ಉಡುಪಿ | – | – | ೧,೮೬,೦೪೦ | ೧೪ | ೬೦,೫೦೦ | ೦೪ | ೨,೦೦,೦೦೦ |
| ಕುಂದಾಪುರ | ೦೨ | ೦ | ೮೧೦ | ೦ | ೦ | ೦೫ | ೨,೫೦,೦೦೦ |
| ಒಟ್ಟು | ೦೨ | ೦ | ೨,೮೧,೧೭೫ | ೨೦ | ೮೭,೫೦೦ | ೧೦ | ೫,೦೦,೦೦೦ |
| **೨೦೦೫–೦೬** | | | | | | | |
| ಕಾರ್ಕಳ | ೨೫ | ೦೮ | ೧,೬೪,೨೫೦ | ೧೩ | ೨೮,೮೫೦ | ೦೨ | ೧,೦೦,೦೦೦ |
| ಉಡುಪಿ | – | – | ೩,೨೮,೪೦೦ | ೧೧ | ೫೫,೮೦೦ | ೭ | ೩,೬೦,೦೦೦ |
| ಕುಂದಾಪುರ | ೧೧೪ | ೦೭ | ೮೬,೩೨೦ | ೦೩ | ೧೨,೩೦೦ | ೦೫ | ೨,೫೦,೦೦೦ |
| ಒಟ್ಟು | ೧೩೯ | ೧೫ | ೫,೭೮,೯೭೦ | ೨೭ | ೯೬,೯೫೦ | ೦೯ | ೭,೧೦,೦೦೦ |

೫೪,೭೮೧ ಮಂದಿ ಗೃಹ ಕೈಗಾರಿಕಾ ಕೆಲಸಗಾರರು ಹಾಗೂ ೨,೨೧,೩೦೮ ಮಂದಿ ಇತರೆ ಸೇವೆಗಳಲ್ಲಿ ಕಾರ್ಯನಿರತರಾಗಿದ್ದರು. ಮೇಲಿನ ಅಂಕಿ–ಅಂಶಗಳನ್ನು ಗಮನಿಸಿದಾಗ ಜಿಲ್ಲೆಯು ಕೃಷಿಯನ್ನು ಅವಲಂಬಿಸಿದ್ದು, ಗ್ರಾಮೀಣ ಕೃಷಿಯೇತರ ಚಟುವಟಿಕೆಗಳ ಅಭಿವೃದ್ಧಿಗೆ ಅಗತ್ಯ ಪ್ರೋತ್ಸಾಹ ನೀಡಿದರೆ, ಕಡಿಮೆ ಬಂಡವಾಳ ಹೂಡಿಕೆ, ಹೆಚ್ಚು ಉದ್ಯೋಗ ಸೃಷ್ಟಿ, ಕಡಿಮೆ ಪ್ರಮಾಣದ ಶಕ್ತಿ ಸಂಪನ್ಮೂಲಗಳು ಹಾಗೂ ಕಡಿಮೆ ಪ್ರಮಾಣದ ಮೂಲಭೂತ ಸೌಕರ್ಯಗಳು ದೊರಕಿದರೂ ಸಹ ನಗರ ಪ್ರದೇಶದ ಕೈಗಾರಿಕೆಗಳಿಗಿಂತ ಹೆಚ್ಚಾಗಿ ಗ್ರಾಮೀಣ ಕೈಗಾರಿಕೆಗಳು ಬೆಳವಣಿಗೆ ಹೊಂದಬಹುದಾಗಿದೆ. ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ೨೦೦೬ರ ಮಾರ್ಚ್ ಅಂತ್ಯಕ್ಕೆ ೧೨,೧೪೯ ಮಂದಿ ಉದ್ಯೋಗಕ್ಕಾಗಿ ನೋಂದಾಯಿಸಿಕೊಂಡಿದ್ದರು. ಇವರಲ್ಲಿ ೬,೮೬೪ ಮಂದಿ ಪುರುಷರು ಹಾಗೂ ೫,೨೮೫ ಮಂದಿ ಮಹಿಳೆಯರು ಸೇರಿದ್ದರು. ನಿರುದ್ಯೋಗ ಸಮಸ್ಯೆಯ ಪರಿಹಾರಾರ್ಥಕವಾಗಿ ಉದ್ದಿಮೆಗಳ ಸೃಷ್ಟಿ ತನ್ಮೂಲಕ ಉದ್ಯೋಗಾವಕಾಶದ ಹೆಚ್ಚಳ, ಜಿಲ್ಲಾದಾಯ, ತಲಾದಾಯಗಳ ಹೆಚ್ಚಳದ ಮೂಲಕ ಜನರ ಜೀವನಮಟ್ಟ ಸುಧಾರಿಸಬಹುದು. ಜಿಲ್ಲೆಯಲ್ಲಿ ಭತ್ತ, ದ್ವಿದಳ ಧಾನ್ಯ, ಅಡಿಕೆ, ತೆಂಗು, ಗೇರು, ರಬ್ಬರ್, ಕೋಕಾ, ಬಾಳೆ, ಮಾವು, ಹಲಸು ಮತ್ತಿತರ ಬೆಳೆಗಳನ್ನು ಬೆಳೆಯಲಾಗುತ್ತಿರುವುದರಿಂದ ಕೃಷಿ ಆಧಾರಿತ ಕೈಗಾರಿಕೆಗಳ ಸ್ಥಾಪನೆಗೆ ಜಿಲ್ಲೆಯಲ್ಲಿ ವಿಪುಲ ಅವಕಾಶವಿದೆ. ಆಧುನಿಕ ಅಕ್ಕಿಗಿರಣಿ, ಅವಲಕ್ಕಿ ಗಿರಣಿ, ಭತ್ತದ ಹೊಟ್ಟಿನಿಂದ ಹುಲ್ಲು ಪಡಿ ತಯಾರಿಕೆ, ಆಯುರ್ವೇದ ಔಷಧಿಗಳು, ಬಾಳೆಕಾಯಿ ಚಿಪ್ಸ್ ಹಾಗೂ ಪೌಡರ್, ಮಾವಿನ ಹಣ್ಣಿನ ಜ್ಯೂಸ್, ತಿರುಳು, ಉಪ್ಪಿನಕಾಯಿ, ಜಾಮ್, ಲೇಹ್ಯ, ಹಲಸಿನ ಹಣ್ಣಿನ ಚಿಪ್ಸ್, ಹಲಸಿನ ಹಣ್ಣುಗಳನ್ನು ಡಬ್ಬಿಗಳಲ್ಲಿ ತುಂಬಿ ಸಂಸ್ಕರಿಸುವುದು, ತೆಂಗಿನಕಾಯಿ ಪೌಡರ್, ತೆಂಗಿನನಾರು ಉದ್ಯಮ, ಕೊಬ್ಬರಿಎಣ್ಣೆ, ಸುಗಂಧಭರಿತ ಅಡಿಕೆ, ಅಡಿಕೆ ಪಟ್ಟೆಯಿಂದ ಕಪ್ಸ್ ಅಂಡ್ ಪ್ಲೇಟ್ಸ್‌ಗಳ ತಯಾರಿಕೆ, ಗೋಡಂಬಿ ಸಂಸ್ಕರಣ, ವ್ಯವಸಾಯ ಉಪಕರಣ, ಸಮ್ಮಿಶ್ರ ರಸಗೊಬ್ಬರ ಇಟ್ಟಿಗೆ ತಯಾರಿಕೆ, ವ್ಯವಸಾಯ ಉಪಕರಣ, ಸಮ್ಮಿಶ್ರ ರಸಗೊಬ್ಬರ ಇಟ್ಟಿಗೆ ತಯಾರಿಕೆ ಘಟಕಗಳನ್ನು ಸ್ಥಾಪಿಸಲು ಅವಕಾಶವಿದೆ.

ಜಿಲ್ಲೆಯ ಒಟ್ಟು ಭೌಗೋಳಿಕ ಪ್ರದೇಶದಲ್ಲಿ, ೧,೦೦,೧೦೨ ಹೆಕ್ಟೇರು ಅರಣ್ಯ ಪ್ರದೇಶವಾಗಿದ್ದು, ಬೆಲೆ ಬಾಳುವ ತೇಗ, ಬೀಟೆ (ರೋಸ್), ಉರುವಲು ಕಟ್ಟಿಗೆ, ಫೆರ್‌ವುಡ್, ಹೊನ್ನೆ, ನಂದಿ ಮತ್ತಿತರ ಮರಗಳು ಲಭ್ಯವಿದ್ದು, ಅರಣ್ಯಾಧಾರಿತ ಕೈಗಾರಿಕೆಗಳ ಸ್ಥಾಪನೆಗೆ ಅವಕಾಶವಿದೆ. ಅಲ್ಲದೆ, ಸೀಗೆಕಾಯಿ, ಅಂಟುವಾಳಕಾಯಿ, ಜೇನು, ಗೋಂದು, ಕೂಡ ಲಭ್ಯವಿದೆ. ಉಡುಪಿ ಜಿಲ್ಲೆಯಲ್ಲಿ ಅತೀಸಣ್ಣ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಸ್ಥಾಪಿಸಲು ಅವಕಾಶವಿದ್ದು, ಅವುಗಳನ್ನು ಸಂಪನ್ಮೂಲ ಆಧಾರಿತ ಮತ್ತು ಬೇಡಿಕೆ ಆಧಾರಿತ ಎಂದು ಪ್ರಧಾನವಾಗಿ ಎರಡು ಗುಂಪುಗಳಾಗಿ ವಿಂಗಡಿಸಬಹುದು. ಜಿಲ್ಲೆಯ ಬ್ರಹ್ಮಾವರದಲ್ಲಿ ಸಕ್ಕರೆ ಕಾರ್ಖಾನೆಯಿದ್ದು, ಕಬ್ಬನ್ನು ಅರೆದು ಹೊರಹಾಕುವ ಅದರ ಸಿಪ್ಪೆಯನ್ನು ಉಪಯೋಗಿಸಿಕೊಂಡು ಕಾಗದವನ್ನು ತಯಾರಿಸುವ ಅವಕಾಶ ವಿಪುಲವಾಗಿದೆ. ಅಲ್ಲದೆ, ಸಕ್ಕರೆಯನ್ನು ತಯಾರಿಸುವಾಗ ಬರುವ ಕಾಕಂಬಿಯನ್ನು ಉಪಯೋಗಿಸಿಕೊಂಡು ಪ್ರತಿಶತ ೯೦ರಷ್ಟು ಗುಣಮಟ್ಟವುಳ್ಳ ಸಾರಾಯಿ (ಡಿಸ್ಟಿಲರಿ) ಘಟಕವನ್ನು ತೆರೆಯಲು ಅವಕಾಶವಿದೆ. ಸಾರಾಯಿ ಭಟ್ಟಿ ಇಳಿಸುವ ಘಟಕದಿಂದ ಹೊರಬರುವ ಕಲ್ಮಶ ನೀರಿನಿಂದ ಬಯೋಗ್ಯಾಸ್ ಉತ್ಪಾದಿಸುವ ಘಟಕ ಸ್ಥಾಪಿಸಲು ಅವಕಾಶವಿದೆ.

ಜಿಲ್ಲೆಯಲ್ಲಿ ೨೦೦೩ರ ಜಾನುವಾರು ಗಣತಿಯಂತೆ ಒಟ್ಟು ೬,೦೮,೯೩೯ ಜಾನುವಾರುಗಳಿದ್ದು, ಚರ್ಮ ಹದ ಮಾಡುವುದು, ಚರ್ಮದಿಂದ ಸೂಟ್‌ಕೇಸ್, ಔಷಧಿ ಕಿಟ್ಟು, ಆಕರ್ಷಣೀಯ ಕೈಚೀಲ, ಮತ್ತಿತರ ಚರ್ಮದ ಉತ್ಪನ್ನಗಳ ತಯಾಕೆಗೆ ಪೂರಕ ತರಬೇತಿ ನೀಡುವ ಮೂಲಕ ವಿವಿಧ ಚರ್ಮೋದ್ಯಮಗಳ ಸ್ಥಾಪನೆಗೆ ಪ್ರೋತ್ಸಾಹಿಸ ಬಹುದಾಗಿದೆ. ಜಿಲ್ಲೆಯಲ್ಲಿ ಸು. ೮೦ ಕಿ.ಮೀ. ತೀರ ಪ್ರದೇಶವಿದ್ದು, ೨೦೦೪–೦೫ರಲ್ಲಿ ಒಟ್ಟು ೬೦,೮೯೯.೫೭ ಟನ್ ಮೀನು ಹಿಡಿಯಲಾಗಿದ್ದು, ಮೀನುಗಾರಿಕಾ ಉದ್ಯಮಗಳಾದ ಫಿಷ್‌ಮೀಲ್, ಮೀನಿನ ಎಣ್ಣೆ, ಯಾಂತ್ರೀಕೃತ ಮೀನುಗಾರಿಕಾ ದೋಣಿಗಳ ನಿರ್ಮಾಣ, ಮೀನುಗಾರಿಕಾ ಒಲೆಗಳು, ಕೋಲ್ಡ್ ಸ್ಟೋರೆಜ್ ಮತ್ತು ಫ್ರೋಜನ್ ಸ್ಟೋರೆಜ್‌ಗಳು, ಮೀನಿನ ಉಪ್ಪಿನಕಾಯಿ, ಮೀನಿನ ಚಕ್ಕುಲಿ, ಮೀನಿನ ಸಂಡಿಗೆ, ಮೀನಿನ ಗೋಂದು, ಮೀನಿನ ಕಟ್ಲೇಟ್ ಮುಂತಾದವುಗಳನ್ನು ತಯಾರಿಸುವ ಉದ್ಯಮಗಳನ್ನು ಸ್ಥಾಪಿಸಲು ವಿಪುಲ ಅವಕಾಶವಿದೆ. ಬೇಡಿಕೆ ಆಧಾರಿತ ಉದ್ದಿಮೆಗಳಾದ ಅಗರಬತ್ತಿ ತಯಾರಿಕೆ, ಸಿದ್ಧ ಉಡುಪುಗಳ ತಯಾರಿಕೆ, ರೇಷ್ಮೆ ಹುಳುಗಳ ಸಾಕಾಣಿಕೆ, ವಾಹನಗಳ ರಿಪೇರಿ, ಮೊದಲಾದ ಉದ್ದಿಮೆಗಳನ್ನು ಸ್ಥಾಪಿಸಲು ಜಿಲ್ಲೆಯಲ್ಲಿ ವಿಪುಲ ಅವಕಾಶವಿದೆ. ನಯಗೊಳಿಸಿದ ಗ್ರಾನೈಟ್, ಟೈಲ್ಸ್, ಹಣ್ಣುಗಳ ಶೈತಲೀಕರಣ, ಟೊಮೊಟೋ ಸಾಸ್, ಬಾಳೆಹಣ್ಣಿನ ಚಿಪ್ಸ್, ಹೊಟ್ಟಿನಿಂದ ಎಣ್ಣೆ ತಯಾರಿಕೆ, ಹಣ್ಣಿನ ರಸದ ಪೌಡರ್ ತಯಾರಿಕೆ, ಮತ್ತಿತರ ಸಣ್ಣ ಹಾಗೂ ಮಧ್ಯಮ ಪ್ರಮಾಣದ ಕೈಗಾರಿಕೆಗಳನ್ನು ಜಿಲ್ಲೆಯಲ್ಲಿ ಆರಂಭಿಸಬಹುದಾಗಿದೆ. ಇವುಗಳಿಗೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿಯೂ ಸಹ ಬೇಡಿಕೆಯಿದೆ.

* * * * *